# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಮಂಗಳವಾರ, ಮೇ 25, 2021

ಸಂಪುಟ : 48 ಸಂಚಿಕೆ : 11 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com


## ಜೂನ್ ನಂತರದಲ್ಲಿ ಮಕ್ಕಳ ಮೇಲೆ ಕೋವ್ಯಾಕ್ಸಿನ್ ಪ್ರಯೋಗ

ಹೈದರಾಬಾದ್, ಮೇ 24 – ಮಕ್ಕಳ ಮೇಲೆ ಕೋವ್ಯಾಕ್ಸಿನ್ ಲಸಿಕೆಯ ಪ್ರಯೋಗ ಜೂನ್ ನಂತರದಲ್ಲಿ ಆರಂಭವಾಗಲಿದೆ ಎಂದು ಲಸಿಕೆ ಉತ್ಪಾದನಾ ಕಂಪನಿಯಾದ ಭಾರತ್ ಬಯೋಟೆಕ್‌ನ ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಭಾರತ್ ಬಯೋಟೆಕ್ ಜೂನ್ 1ರಿಂದ ಮಕ್ಕಳ ಮೇಲೆ ಲಸಿಕೆ ಪ್ರಯೋಗ ನಡೆಸಲು ಅನುಮತಿ ನೀಡಲಾಗಿದೆ ಎಂದು ಭಾರತ್ ಬಯೋಟೆಕ್‌ನ ಹಿರಿಯ ಅಧಿಕಾರಿ ರಚೆಸ್ ಎಲ್ಲ ಹೇಳಿದ್ದಾರೆ.

2ರಿಂದ 18 ವರ್ಷದ ಮಕ್ಕಳ ಮೇಲೆ ಪ್ರಯೋಗ ನಡೆಯಲಿದೆ. ಈ ವರ್ಷದ 3ನೇ ಚತುರ್ಥದಲ್ಲಿ ಲಸಿಕೆಯ (2ನೇ ಪುಟಕ್ಕೆ)

# 3ನೇ ಅಲೆಯಲ್ಲಿ ಮಕ್ಕಳ ಮೇಲೆ ಪ್ರಭಾವದ ಸೂಚನೆ ಇಲ್ಲ : ಕೇಂದ್ರ

ನವದೆಹಲಿ, ಮೇ 24 – ಕೊರೊನಾದ ಮೂರನೇ ಅಲೆ ಬಂದರೆ ಮಕ್ಕಳ ಮೇಲೆ ತೀವ್ರ ಇಲ್ಲವೇ ಹೆಚ್ಚಿನ ಪರಿಣಾಮವಾಗಲಿದೆ ಎಂಬ ಯಾವುದೇ ಸೂಚನೆ ಇಲ್ಲ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಮೂರನೇ ಅಲೆ ಕುರಿತ ಪ್ರಶ್ನೆಗಳಿಗೆ ಉತ್ತರಿಸುತ್ತಿದ್ದ ಎ.ಐ.ಐ.ಎಂ.ಎಸ್. ವಕ್ತಾರ ರಣದೀಪ್ ಗುಲೇರಿಯ, ಮೂರನೇ ಅಲೆ ಮಕ್ಕಳಲ್ಲಿ ತೀವ್ರತೆ ಹೆಚ್ಚಿಸುತ್ತದೆ ಇಲ್ಲವೇ ಸೋಂಕಿತರ ಸಂಖ್ಯೆ ಹೆಚ್ಚಾಗಲಿದೆ ಎಂಬುದಕ್ಕೆ ಯಾವುದೇ ಸಾಕ್ಷಿಗಳು ಇದುವರೆಗೂ ದೊರೆತಿಲ್ಲ ಎಂದಿದ್ದಾರೆ.



ಮೊದಲ ಹಾಗೂ ಎರಡನೇ ಅಲೆಯ ಮಾಹಿತಿ ಪರಿಗಣಿಸಿದಾಗ ಸಾಮಾನ್ಯವಾಗಿ ಮಕ್ಕಳಿಗೆ ಕೊರೊನಾದಿಂದ ಹೆಚ್ಚಿನ ರಕ್ಷಣೆ ದೊರೆತಿದೆ. ಅವರಿಗೆ ಸೋಂಕು ಬಂದರೂ ಅದು ಲಘು ತೀವ್ರತೆಯದ್ದಾಗಿರುತ್ತದೆ ಎಂದು ಗುಲೇರಿಯ ಹೇಳಿದ್ದಾರೆ.

ಆದರೆ, ಕೊರೊನಾ ಸಂದರ್ಭದಲ್ಲಿ ಶಿಕ್ಷಣದಲ್ಲಿ ಲಿಂಗ ಭೇದ, ಒತ್ತಡ ಹಾಗೂ ಮಾನಸಿಕ ವಿಷಯಗಳು, ಸ್ಮಾರ್ಟ್‌ಫೋನ್ ಅವಲಂಬನೆ ಹೆಚ್ಚಳ ಹಾಗೂ ಶಿಕ್ಷಣ ಅವಕಾಶ ಕುಂಠಿತದ ಸಮಸ್ಯೆಗಳಿಂದ ಮಕ್ಕಳ ಮೇಲೆ ಪರಿಣಾಮವಾಗಿದೆ ಎಂದವರು ಹೇಳಿದ್ದಾರೆ

ಮೊದಲ ಹಾಗೂ ಎರಡನೇ ಅಲೆಗಳು ಒಂದೇ ರೀತಿಯಲ್ಲಿವೆ. ಇವುಗಳಲ್ಲಿ ಮಕ್ಕಳಿಗೆ ರಕ್ಷಣೆ ದೊರೆತಿದೆ. ವೈರಸ್ ಬದಲಾಗಿ ಮೂರನೇ ಅಲೆ ಸಂದರ್ಭದಲ್ಲಿ ಮಕ್ಕಳ ಮೇಲೆ ಪರಿಣಾಮ ಬೀರುತ್ತದೆ (2ನೇ ಪುಟಕ್ಕೆ)

## ಹಳ್ಳಿಗಳಲ್ಲಿ ಸಂತೆ, ಸಮಾರಂಭ ತಡೆ ಹೊಣೆ ಪಂಚಾಯ್ತಿಗೆ

ಬೆಂಗಳೂರು, ಮೇ 24 - ಗ್ರಾಮೀಣ ಭಾಗದಲ್ಲಿ ಸಭೆ, ಸಮಾರಂಭ, ಸಂತೆಗಳು ಹಾಗೂ ಮದುವೆಗಳನ್ನು ನಡೆಯದಂತೆ ನೋಡಿಕೊಳ್ಳುವ ಹೊಣೆಗಾರಿಕೆಯನ್ನು ಪಂಚಾಯ್ತಿಗಳಿಗೆ ನೀಡಲಾಗಿದೆ.

ಗ್ರಾಮೀಣ ಅಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಇಂದು ಪಂಚಾಯತ್ ಅಧಿಕಾರಿಗಳು ಮತ್ತು ಸದಸ್ಯರ ಜೊತೆ ವಿಡಿಯೋ ಕಾನ್ಫರೆನ್ಸ್ ನಡೆಸುವ ಮೂಲಕ ಈ ಆದೇಶ ಮಾಡಿದ್ದಾರೆ.

ಗ್ರಾಮೀಣ ಭಾಗದಲ್ಲಿ ದಿನದಿಂದ ದಿನಕ್ಕೆ ಕೊರೊನಾ ಸೋಂಕು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಇದಕ್ಕೆ ಕಡಿವಾಣ ಹಾಕಲು ಪಂಚಾಯಿತಿಗಳು ಹೊಣೆ ಹೊತ್ತುಕೊಳ್ಳಬೇಕು. ಸಾರ್ವಜನಿಕರು ಏನೇ ಹೇಳಿಕೊಳ್ಳಲಿ, ಗ್ರಾಮೀಣ ಭಾಗದಲ್ಲಿ ಗುಂಪು ಗೂಡುವಿಕೆಗೆ ಅವಕಾಶ ಕೊಡಬೇಡಿ. ಸೋಂಕು ನಿರ್ನಾಮವಾದರೆ ಎಂತಹ (2ನೇ ಪುಟಕ್ಕೆ)


## ಭಾವಪೂರ್ಣ ಶ್ರದ್ಧಾಂಜಲಿ



ಆನಂದಪ್ಪ ಎಸ್.ಎಲ್. ಇಂಜಿನಿಯರ್
ಇವರ ತಾಯಿಯವರಾದ
**ಶ್ರೀಮತಿ ದ್ಯಾಮಮ್ಮ**
ಇವರು ದಿನಾಂಕ 22.05.2021ರಂದು ನಿಧರಾಗಿದ್ದು ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬಕ್ಕೆ ದಯಪಾಲಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ

**ಶ್ರೀ ಶಂಕರ್ ಹೆಚ್.ಗಡ್ಡದ,**
ಮಾಲೀಕರು, ಮಂಗಳ ಕನ್‌ಸ್ಟ್ರಕ್ಷನ್ಸ್, ದಾವಣಗೆರೆ.
**ಶ್ರೀಮತಿ ಸರೋಜಮ್ಮ ಶಂಕರ್ ಗಡ್ಡದ**
ಮಾಜಿ ಅಧ್ಯಕ್ಷರು, ಗ್ರಾ ಪಂ ಕೋಡಿಯಾಲ ಹೊಸಪೇಟೆ
**ಸುನೀಲ್ ಕುಮಾರ್ ಗಡ್ಡದ**
**ನಿರಂಜನ್ ಗಡ್ಡದ**
ಮಾಲೀಕರು ದುರ್ಗಾ ಕನ್‌ಸ್ಟ್ರಕ್ಷನ್ಸ್
**ನಾಗಾರ್ಜುನ್ ಗಡ್ಡದ,**
ಸಿವಿಲ್ ಇಂಜಿನಿಯರ್, ಮಂಗಳ ಕನ್‌ಸ್ಟ್ರಕ್ಷನ್ಸ್, ದಾವಣಗೆರೆ


## 633 ಪಾಸಿಟಿವ್, 3 ಸಾವು, 574 ಜನರು ಗುಣಮುಖ

ದಾವಣಗೆರೆ, ಮೇ 24- ಜಿಲ್ಲೆಯಲ್ಲಿ ಮಂಗಳವಾರ 633 ಜನರಲ್ಲಿ ಕೊರೊನಾ ಸೋಂಕು ಪತ್ತೆಯಾಗಿದ್ದು, 574 ಜನರು ಗುಣಮುಖರಾಗಿದ್ದಾರೆ. ಮೂವರು ಮೃತಪಟ್ಟ ಬಗ್ಗೆ ವರದಿಯಾಗಿದೆ.

ದಾವಣಗೆರೆ ತಾಲ್ಲೂಕಿನಲ್ಲಿ 436, ಹರಿಹರ 86, ಜಗಳೂರು 21, ಚನ್ನಗಿರಿ 52, ಹೊನ್ನಾಳಿ 28 ಹಾಗೂ ಹೊರ ಜಿಲ್ಲೆಯ 10 ಜನರಲ್ಲಿ ಸೋಂಕು ದೃಢಪಟ್ಟಿದೆ. ಎಸ್.ಎಸ್.ಐ.ಎಂ.ಎಸ್. (2ನೇ ಪುಟಕ್ಕೆ)

## 18 ವರ್ಷದವರಿಗೆ ನೇರ ಕೊರೊನಾ ಲಸಿಕೆಗೆ ಕೇಂದ್ರದ ಅನುಮತಿ

ನವದೆಹಲಿ, ಮೇ 24 - ಹದಿನೆಂಟು ವರ್ಷ ಮೇಲ್ಪಟ್ಟವರು ಲಸಿಕಾ ಕೇಂದ್ರಗಳಲ್ಲಿ ನೇರವಾಗಿ ಲಸಿಕೆ ಪಡೆಯಲು ಕೇಂದ್ರ ಆರೋಗ್ಯ ಸಚಿವಾಲಯ ಅನುಮತಿ ನೀಡಿದೆ. ಆದರೆ, ಸರ್ಕಾರಿ ಲಸಿಕಾ ತಾಣಗಳಿಗೆ ಮಾತ್ರ ಈ ಅನುಮತಿ ಅನ್ವಯವಾಗಲಿದೆ.

ರಾಜ್ಯಗಳು ಅನುಮತಿ ನೀಡಿದ ನಂತರವೇ 18 ವರ್ಷದವರು ಸ್ಥಳದಲ್ಲೇ ಲಸಿಕೆ ಪಡೆಯಲು ಸಾಧ್ಯವಾಗಲಿದೆ. ಮೇ 1ರಂದು 18 ವರ್ಷದ ಮೇಲಿನವರು ಲಸಿಕೆ ಪಡೆಯಲು ಕೇಂದ್ರ ಸರ್ಕಾರ ಅನುಮತಿ ನೀಡಿದೆ.


## ಹುಲ್ಲುಮನೆ ಶಿವಾನಂದಪ್ಪ ನಿಧನ

ದಾವಣಗೆರೆ ನಿಟುವಳ್ಳಿ, ಕಾಲೇಜು ರಸ್ತೆ ವಾಸಿ
**ಶ್ರೀ ಹುಲ್ಲುಮನೆ ಶಿವಾನಂದಪ್ಪ**
ಅವರು ದಿನಾಂಕ 24-05-2021ರ ಸೋಮವಾರ ಮಧ್ಯಾಹ್ನ 3 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 69 ವರ್ಷ ವಯಸ್ಸಾಗಿತ್ತು. ಪತ್ನಿ, ಮೂವರು ಪುತ್ರರು, ಓರ್ವ ಪುತ್ರಿ, ಅಳಿಯ, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಶ್ರೀಯುತರ ಅಂತ್ಯಕ್ರಿಯೆಯು ದಿನಾಂಕ 24-05-2021ರಂದೇ ಸಂಜೆ 6.30ಕ್ಕೆ ನಗರದ ರಾಮನಗರದ ಸಮೀಪವಿರುವ ರುದ್ರಭೂಮಿಯಲ್ಲಿ ನೆರವೇರಿತು.

- ದುಃಖತಪ್ತ ಕುಟುಂಬ ವರ್ಗ

ಸಂತಾಪ ಸೂಚಿಸುವವರು :
ಹುಲ್ಲುಮನೆ ವಂಶಸ್ಥರು, ನಿಟುವಳ್ಳಿ ಗ್ರಾಮಸ್ಥರು,
ಹೊಳೆಯಾಚೆ ವಂಶಸ್ಥರು ಹಾಗೂ
ಅಪಾರ ಬಂಧು- ಮಿತ್ರರು, ನಿಟುವಳ್ಳಿ, ದಾವಣಗೆರೆ.



# ಮಹಾರಾಜ ಸೋಪ್ಸ್ ಇಂಡಸ್ಟ್ರಿ ಪ್ರೈ. ಲಿ. ಮಾಲೀಕರಾದ ಡಾ॥ ಎಂ.ಇ. ರವಿರಾಜ ಅವರಿಗೆ ಮಾತೃ ವಿಯೋಗ

ದಾವಣಗೆರೆ ಲೋಕಿಕೆರೆ ರಸ್ತೆಯ
ಮಹಾರಾಜ ಸೋಪ್ಸ್ ಇಂಡಸ್ಟ್ರಿ ಪ್ರೈ. ಲಿ. ಮಾಲೀಕರಾದ
ಡಾ॥ ಎಂ.ಇ. ರವಿರಾಜ ಅವರ ತಾಯಿಯವರಾದ
**ಶ್ರೀಮತಿ ಮುತ್ತುಕಣಿ ಅಮ್ಮ** ಅವರು
ದಿನಾಂಕ 24.05.2021ರ ಸೋಮವಾರ ಬೆಳಿಗ್ಗೆ 11.30 ಗಂಟೆಗೆ
ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ 83 ವರ್ಷ ವಯಸ್ಸಾಗಿತ್ತು.
ಮೃತರು ಮೂವರು ಪುತ್ರರು, ನಾಲ್ವರು ಪುತ್ರಿಯರು, ಸೊಸೆಯಂದಿರು,
ಅಳಿಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ
ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.
ಮುತ್ತುಕಣಿ ಅಮ್ಮ ಅವರ ಪಾರ್ಥಿವ ಶರೀರದ ಅಂತ್ಯಕ್ರಿಯೆಯನ್ನು
ದಿನಾಂಕ 25.05.2021ರ ಮಂಗಳವಾರ
ಅವರ ಸ್ವಗ್ರಾಮದಲ್ಲಿ ನೆರವೇರಿಸಲಾಗುವುದು.



ದುಃಖತಪ್ತ ಕುಟುಂಬ ವರ್ಗ
✦ ಡಾ॥ ರವಿರಾಜ ಎಂ.ಇ. ಮತ್ತು ಶ್ರೀಮತಿ ಶಶಿಕಲಾ ಇ.ಆರ್.
✦ ಪಾರ್ಥಿಬನ್ ಮತ್ತು ಶ್ರೀಮತಿ ಜ್ಯೋತಿ ✦ ಬಾಲನ್ ಮತ್ತು ಶ್ರೀಮತಿ ಸುಮತಿ ✦ ಶ್ರೀಮತಿ ವಿಜಿಲ ಮತ್ತು ಉತ್ತರ ಪಾಂಡಿಯನ್ ✦ ಶ್ರೀಮತಿ ರಜಿಲ ಮತ್ತು ಉದಯಶಂಕರ್
✦ ಶ್ರೀಮತಿ ಅಮುದ ಮತ್ತು ಶ್ರೀ ಮಂದಿರಕುಮಾರ್ ✦ ಶ್ರೀಮತಿ ವನಿದ ಮತ್ತು ನಂದಕುಮಾರ್ ✦ ಶಿವಗುರು ಮತ್ತು ಶ್ರೀಮತಿ ಇಳವರಸಿ
✦ ಸತೀಶ್ ಮತ್ತು ಶ್ರೀಮತಿ ಗಿರಿಜಾ ಆಲೂರು ✦ ರಾಮಕುಮಾರ್ ಮತ್ತು ಶ್ರೀಮತಿ ಶರಣ್ಯ ✦ ಮೊಮ್ಮಕ್ಕಳಾದ ಕಾರ್ತಿಕ್‌ರಾಜ್ ಮತ್ತು ಶ್ರೀಮತಿ ಹರಿತ ಆಶಿಕ್
ಆಡಳಿತ ಮಂಡಳಿ, ಮಾರ್ಕೆಟಿಂಗ್ ವಿಭಾಗ ಹಾಗೂ ಕಾರ್ಮಿಕ ಸಿಬ್ಬಂದಿ ವರ್ಗ
✦ ಮಹಾರಾಜ ಸೋಪ್ಸ್ ಇಂಡಸ್ಟ್ರಿ ಪ್ರೈ. ಲಿ., ✦ ಲಲಿತಾ ಪ್ರೀ ಯೂನಿವರ್ಸಿಟಿ ಕಾಲೇಜ್
✦ ಮಹಾ ಟಿ.ವಿ.ಎಸ್. ✦ ಲಲಿತಾ ಇಂಟರ್‌ನ್ಯಾಷನಲ್ ಪಬ್ಲಿಕ್ ಸ್ಕೂಲ್

# ಜಾನಪದ ಕಲಾವಿದ ಬಾರಿಕರ ಕರಿಯಪ್ಪ ಇನ್ನಿಲ್ಲ

ದಾವಣಗೆರೆ, ಮೇ 24- ಜಿಲ್ಲೆಯ ಹಿರಿಯ ಜಾನಪದ ಕಲಾವಿದರೂ, ನಿವೃತ್ತ ಪ್ರಾಚಾರ್ಯರೂ ಆದ ಬಾರಿಕರ ಕರಿಯಪ್ಪ ಅವರು ಇಂದು ಬೆಳಿಗ್ಗೆ ನಿಧನರಾದರು.

ಕಳೆದ ಮೂರು ದಿನಗಳಿಂದ ಅನಾರೋಗ್ಯಕ್ಕೆ ತುತ್ತಾಗಿದ್ದ ಅವರು, ಜಿಲ್ಲಾ ಚಿಗಟೇರಿ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಅವರು ಚಿಗಟೇರಿ ಜಿಲ್ಲಾಸ್ಪತ್ರೆಯಲ್ಲಿ ಬಾರಿಕರ ಕರಿಯಪ್ಪ ಅವರಿಗೆ ಚಿಕಿತ್ಸೆ ಕೊಡಿಸಲು ಶ್ರಮಿಸಿದರಾದರೂ, ಚಿಕಿತ್ಸೆ ಫಲಕಾರಿಯಾಗಲಿಲ್ಲ.

ಕರಿಯಪ್ಪ ಅವರು ಅವಿಭಜಿತ ದಾವಣಗೆರೆ - ಚಿತ್ರದುರ್ಗ ಜಿಲ್ಲೆಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾಗಿ, ಲೋಕಿಕೆರೆ ಗ್ರಾಮದ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದ್ದರು. ಚಿತ್ರದುರ್ಗ ಮತ್ತು ಭದ್ರಾವತಿ ಆಕಾಶವಾಣಿಗಳಲ್ಲಿ ಜಾನಪದ ಕುರಿತಂತೆ ಅನೇಕ ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಿದ್ದರು.

**ಡಾ. ಈಶ್ವರಪ್ಪ ಶೋಕ :** ಬಾರಿಕರ ಕರಿಯಪ್ಪ ಅವರ ನಿಧನಕ್ಕೆ ತೀವ್ರ ಕಂಬನಿ ಮಿಡಿದಿರುವ ಹಿರಿಯ ಜಾನಪದ ವಿದ್ವಾಂಸ ಡಾ. ಎಂ.ಜಿ.ಈಶ್ವರಪ್ಪ, ಕರಿಯಪ್ಪ ಅವರ ನಿಧನದಿಂದಾಗಿ ಜಿಲ್ಲೆಯ ಜಾನಪದ ಕೊಂಡಿ ಯೊಂದು ಕಳಚಿದಂತಾಗಿದೆ ಎಂದು ಬಣ್ಣಿಸಿದ್ದಾರೆ.

ತಮ್ಮ ಆಪ್ತ ಒಡನಾಡಿಗಳಲ್ಲೊಬ್ಬರಾಗಿದ್ದ ಕರಿಯಪ್ಪ ಅವರೊಂದಿಗೆ ಸಮಾಜ, ಸಂಸ್ಕೃತಿ, ಜಾನಪದ ವಿಷಯಗಳ ಕುರಿತಂತೆ ಅನನ್ಯ ಚರ್ಚೆ ಮತ್ತು ಅಂತ್ಯದಲ್ಲಿ ಜಾನಪದ ಗೀತೆಯೊಂದಿಗೆ ನಮ್ಮ ಮಾತುಗಳು ಮುಕ್ತಾಯ ಹಂತಕ್ಕೆ ಬರುತ್ತಿದ್ದವು. ನಮ್ಮ ಜೊತೆಗೆ ಹಿರಿಯರಾಗಿದ್ದ ಜಾನಪದ ಸಾರ್ವಭೌಮ ಜಿ. ಮಹಾಂತೇಶ್ ಇರುತ್ತಿದ್ದರು ಎಂದು ಈಶ್ವರಪ್ಪ ಅವರು ತಮ್ಮ ಸಂತಾಪ ಸೂಚಕದಲ್ಲಿ ಭಾವುಕರಾಗಿ ತಿಳಿಸಿದ್ದಾರೆ.



**ಪ್ರೊ. ರಂಗನಾಥ್ ಶೋಕ :** ಜಾನಪದ ಕ್ಷೇತ್ರದಲ್ಲಿ ಸಾಕಷ್ಟು ಕೃಷಿ ಮಾಡಿದ್ದ ಬಾರಿಕರ ಕರಿಯಪ್ಪ ಅವರ ನಿಧನದಿಂದಾಗಿ ಜಾನಪದ ಲೋಕಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಪ್ರೊ. ಎಸ್.ಬಿ. ರಂಗನಾಥ್ ಹೇಳಿದ್ದಾರೆ.

**ಬಿ. ವಾಮದೇವಪ್ಪ ಸಂತಾಪ :** ಬಾರಿಕರ ಕರಿಯಪ್ಪ ಅವರ ನಿಧನಕ್ಕೆ ಶೋಕ ವ್ಯಕ್ತಪಡಿಸಿರುವ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ.ವಾಮದೇವಪ್ಪ, ಕಸಾಪದ ಅನೇಕ ಕಾರ್ಯಕ್ರಮ ಗಳಲ್ಲಿ ಕರಿಯಪ್ಪ ಉಪನ್ಯಾಸಕರಾಗಿ ಭಾಗವಹಿಸಿ ಪ್ರೇಕ್ಷಕರನ್ನು ಜಾನಪದ ಗೀತೆಗಳೊಂದಿಗೆ ರಂಜಿಸುತ್ತಿದ್ದರು ಎಂದು ಹೇಳಿದ್ದಾರೆ.

**ಸತ್ಯಭಾಮ :** ಬಾರಿಕರ ಕರಿಯಪ್ಪ ನಿಧನಕ್ಕೆ ಸಂತಾಪ ಸೂಚಿಸಿರುವ ಹಿರಿಯ ಸಾಹಿತಿ ಶ್ರೀಮತಿ ಹೆಚ್.ಕೆ. ಸತ್ಯಭಾಮ ಮಂಜುನಾಥ್, ಕರಿಯಪ್ಪ ಅವರು ಕಿರಿಯರು - ಹಿರಿಯರು ಎನ್ನದೇ ಎಲ್ಲರೊಂದಿಗೂ ಆತ್ಮೀಯತೆಯಿಂದ ಮಾತನಾಡುತ್ತಿದ್ದರು ಎಂದು ಹೇಳಿದ್ದಾರೆ.

# ಬಡವರಿಗೆ 5 ಸಾವಿರ ಧನ ಸಹಾಯಕ್ಕೆ ಆಗ್ರಹ

ಹರಪನಹಳ್ಳಿ, ಮೇ 24- ಲಾಕ್‌ಡೌನ್‌ನಿಂದ ಸಂಕಷ್ಟಕ್ಕೊಳಗಾದ ಕೂಲಿ ಕಾರ್ಮಿಕರು ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ, ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಗ್ರಾಮೀಣ ಕೂಲಿ ಕಾರ್ಮಿಕರ ಸಂಘಟನೆ (ಗ್ರಾಕೂಸ) ನೇತೃತ್ವದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.



ಹರಪನಹಳ್ಳಿ

ಗೌರಿಪುರ, ಬೆಣ್ಣೆಹಳ್ಳಿ, ತೊಗರಿಕಟ್ಟೆ, ಅರಸನಾಳು, ಯರಬಾಳು, ನಿಟ್ಟೂರು, ಕುಣೇಮಾದಿಹಳ್ಳಿ ಗ್ರಾಮಗಳಲ್ಲಿ ಕೂಲಿ ಕಾರ್ಮಿಕರು ಭಿತ್ತಿ ಪತ್ರಗಳನ್ನು ಹಿಡಿದು ಪ್ರತಿಭಟನೆ ನಡೆಸಿದರು.

ಕೊರೊನಾ ಚಿಕಿತ್ಸೆ ಎಲ್ಲಾ ಜನಸಾಮಾನ್ಯರಿಗೆ ಉಚಿತವಾಗಬೇಕು, ಸರ್ವರಿಗೂ ಕೂಡಲೇ ವ್ಯಾಕ್ಸಿನ್ ವ್ಯವಸ್ಥೆ ಮಾಡಬೇಕು. ಎಲ್ಲಾ ಬಡವರಿಗೆ (ಕೇವಲ ಅಕ್ಕಿಯಲ್ಲ ಎಣ್ಣೆ, ಬೇಳೆ ಒಳಗೊಂಡಂತೆ) ಸಮಗ್ರ ದಿನಸಿ ಹಾಗೂ ಮಾಸಿಕ 5 ಸಾವಿರ ರೂ. ಧನ ಸಹಾಯ ನೀಡಬೇಕು.

ಅನಾಥಗೊಂಡ ಕುಟುಂಬಗಳಿಗೆ 5 ಲಕ್ಷ ರೂ. ಪರಿಹಾರ ಕೊಡಬೇಕು. ಬೆಳೆ ವ್ಯರ್ಥಗೊಂಡಿರುವ ರೈತರಿಗೆ ಪರಿಹಾರ ನೀಡಬೇಕು ಮತ್ತು ಬೀಜ, ಗೊಬ್ಬರದ ಮೇಲೆ ವಿಶೇಷ ಸಬ್ಸಿಡಿಯನ್ನು ಘೋಷಿಸಬೇಕು ಎಂದು ಅವರು ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಈ ಕುರಿತು ತಹಶೀಲ್ದಾರ್ ಅವರು ಕೇಂದ್ರ ಸ್ಥಾನದಲ್ಲಿ ಇಲ್ಲದಿರುವುದರಿಂದ ಮನವಿ ಪತ್ರವನ್ನು ಮೇ 25 ರಂದು ಮಂಗಳವಾರ ನೀಡುವುದಾಗಿ ಗ್ರಾಮೀಣ ಕೂಲಿ ಕಾರ್ಮಿಕರ ಸಂಘಟನೆಯ ಕಾರ್ಯಕರ್ತೆ ಶೃತಿ ಹೇಳಿದ್ದಾರೆ.

ಗ್ರಾಮೀಣ ಕೂಲಿ ಕಾರ್ಮಿಕರ ಸಂಘಟನೆಯ ಕಾರ್ಯಕರ್ತೆ ಭಾಗ್ಯಮ್ಮ, ರಾಜ್ಯ ಮಹಿಳಾ ಒಕ್ಕೂಟದ ಗೀತಮ್ಮ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

## ಇದು ಕರ್ನಾಟಕ, ಕನ್ನಡದಲ್ಲಿ ಮಾತನಾಡಿ......

## ಬೈಕ್ ಸವಾರನಿಗೆ ತಹಶೀಲ್ದಾರ್ ಗಿರೀಶ್ ಪಾಠ



ದಾವಣಗೆರೆ, ಮೇ 24- ಇದು ಕರ್ನಾಟಕ, ಕನ್ನಡದಲ್ಲಿ ಮಾತನಾಡಿ. ಕರ್ನಾಟಕದಲ್ಲೇ ಜೀವನ ಮಾಡ್ತಿದ್ರೂ, ಕನ್ನಡದಲ್ಲಿ ಮಾತನಾಡುವುದಿಲ್ಲವೇಕೆ ?........

ಹೀಗೆಂದು ತಹಶೀಲ್ದಾರ್ ಗಿರೀಶ್ ಅವರು ಹಿಂದಿಯಲ್ಲಿ ಮಾತನಾಡಿದ ಬೈಕ್ ಸವಾರನಿಗೆ ತರಾಟೆಗೆ ತೆಗೆದುಕೊಂಡು ಕನ್ನಡದ ಪಾಠ ಮಾಡಿ ಕನ್ನಡಾಭಿಮಾನ ಮೆರೆದರು.

ನಗರದ ಕೆ.ಆರ್. ಮಾರುಕಟ್ಟೆ ಬಳಿಯ ಎಂ.ಜಿ. ರಸ್ತೆಯಲ್ಲಿ ಅನಾವಶ್ಯಕವಾಗಿ ಓಡಾಡುತ್ತಿದ್ದ ವಾಹನಗಳನ್ನು ಸ್ವತಃ ತಹಶೀಲ್ದಾರ್ ಗಿರೀಶ್ ಸೀಜ್ ಮಾಡುವ ಮೂಲಕ ಸವಾರರಿಗೆ ಬಿಸಿ ಮುಟ್ಟಿಸಿದರು. ಈ ವೇಳೆ ಬೈಕ್ ಸವಾರ ಹಿಂದಿಯಲ್ಲಿ ಮಾತನಾಡಿದ್ದು, ಆಗ ಸವಾರನಿಗೆ ತರಾಟೆ ತೆಗೆದುಕೊಂಡ ತಹಶೀಲ್ದಾರ್, ನೀವು ಕನ್ನಡದಲ್ಲೇ ಮಾತನಾಡಬೇಕು ಎಂದು ತಿಳಿಸಿದರು.

ಬೀದಿ ಬೀದಿ ಅಲೆಯುತ್ತಿದ್ದ ಕೆಲ ಜನರನ್ನು ಗದರಿಸಿದ ತಹಶೀಲ್ದಾರ್ ಮನೆಯಲ್ಲೇ ಇರುವಂತೆ ಮನವಿ ಮಾಡಿದರು.

## ಅನಾಥ ಮಕ್ಕಳಿಗೆ ಆಶ್ರಯಕ್ಕೆ ಮುಂದಾದ ರಾಜನಹಳ್ಳಿ ಶ್ರೀ



ಮಲೇಬೆನ್ನೂರು, ಮೇ 24- ಕೊರೊನಾ ಮಹಾಮಾರಿ ಸೋಂಕಿ ನಿಂದ ಅನೇಕ ಮಕ್ಕಳು ತಮ್ಮ ತಂದೆ-ತಾಯಿಗಳನ್ನು ಕಳೆದುಕೊಂಡಿದ್ದು, ಅಂತಹ ಅನಾಥ ಮಕ್ಕಳಿಗೆ ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ ಆಶ್ರಯ ನೀಡಲು ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಮುಂದಾಗಿದ್ದಾರೆ.

ಈ ಕುರಿತು ವಾಲ್ಮೀಕಿ ವಿದ್ಯಾಪೀಠದ ಆಡಳಿತ ಮಂಡಳಿಯವರ ಜೊತೆ ಚರ್ಚಿಸಿರುವ ಶ್ರೀಗಳು ಕೊರೊನಾ ಸೋಂಕಿನಿಂದ ಅಥವಾ ಲಾಕ್‌ಡೌನ್ ಪರಿಣಾಮದಿಂದ ತೊಂದರೆಗೀಡಾಗಿರುವ ಕುಟುಂಬದ ಮಕ್ಕಳಿಗೆ ಉಚಿತ ಶಿಕ್ಷಣ ಹಾಗೂ ಊಟ, ವಸತಿ ಸೇರಿದಂತೆ ಎಲ್ಲಾ ಸೌಲಭ್ಯ ನೀಡಲು ನಿರ್ಧರಿಸಿದ್ದಾರೆ ಎಂದು ಮಠದ ಆಡಳಿತಾಧಿಕಾರಿ ಟಿ.ಓಬಳಪ್ಪ ತಿಳಿಸಿದ್ದಾರೆ.

## ಕಾರ್ಮಿಕ ಮುಖಂಡ ಬಸವರಾಜ್ ನಿಧನ



ದಾವಣಗೆರೆ, ಮೇ 24 - ಕೆನರಾ ಬ್ಯಾಂಕ್ ಉದ್ಯೋಗಿ ಹಾಗೂ ಜಿಲ್ಲಾ ಬ್ಯಾಂಕ್ ನೌಕರರ ಸಂಘದ ಕೇಂದ್ರ ಸಮಿತಿ ಸದಸ್ಯ ಎಂ. ಬಸವರಾಜ್ (59) ಇಂದು ಬೆಳಿಗ್ಗೆ ಅಕಾಲಿಕವಾಗಿ ನಿಧನರಾದರು. ಕಳೆದ 12 ದಿನಗಳ ಹಿಂದಷ್ಟೇ ಅವರು ಮಗ ನಂದೀಶ್ (25) ಕೂಡಾ ನಿಧನರಾಗಿದ್ದರು. ಮೃತರು ಪತ್ನಿ, ಮೂವರು ಪುತ್ರಿಯರನ್ನು ಅಗಲಿದ್ದಾರೆ.

ಎಮ್.ಬಸವರಾಜ್ ಅವರ ನಿಧನಕ್ಕೆ ಕೆನರಾ ಬ್ಯಾಂಕಿನ ಸಹಾಯಕ ಮಹಾ ಪ್ರಬಂಧಕ ಹೆಚ್.ರಘುರಾಜ, ಲೀಡ್ ಬ್ಯಾಂಕ್ ವಿಭಾಗೀಯ ಪ್ರಬಂಧಕ ಸುಶೃತ್ ಡಿ.ಶಾಸ್ತ್ರಿ, ಜಿಲ್ಲಾ ಬ್ಯಾಂಕ್ ನೌಕರರ ಸಂಘದ ಅಧ್ಯಕ್ಷ ಬಿ.ಆನಂದ ಮೂರ್ತಿ, ಪ್ರಧಾನ ಕಾರ್ಯದರ್ಶಿ ಕೆ.ರಾಘವೇಂದ್ರ ನಾಯರಿ, ಪದಾಧಿಕಾರಿಗಳಾದ ಕೆ.ವಿಶ್ವನಾಥ ಬಿಲ್ಲವ, ಸಿ. ಪರಶುರಾಮ, ಆರ್.ಆಂಜನೇಯ ಮತ್ತಿತರರು ತೀವ್ರ ಸಂತಾಪ ಸೂಚಿಸಿದ್ದಾರೆ.

## ಮೃತ ಶಿಕ್ಷಕರಿಗೆ 50 ಲಕ್ಷ ಪರಿಹಾರಕ್ಕೆ ಆಗ್ರಹ

ಬೆಂಗಳೂರು, ಮೇ 24 - ಮೃತಪಟ್ಟ ಎಲ್ಲ ಶಿಕ್ಷಕರನ್ನು ಕೊರೊನಾ ವಾರಿಯರ್ಸ್ ಎಂದು ಪರಿಗಣಿಸಿ ಕನಿಷ್ಠ 50 ಲಕ್ಷ ರೂ. ಪರಿಹಾರ ನೀಡುವಂತೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಆಗ್ರಹಿಸಿದ್ದಾರೆ. ಈ ಸಂಬಂಧ ಟ್ವೀಟ್ ಮಾಡಿರುವ ಅವರು, ಚುನಾವಣೆ ಕರ್ತವ್ಯದಲ್ಲಿ ದುಡಿದ ಮತ್ತು ವಿದ್ಯಾಗಮ ಯೋಜನೆ ಮೂಲಕ ಪಾಠ ಮಾಡಿದ ಕಲ್ಯಾಣ ಕರ್ನಾಟಕದ 145 ಶಿಕ್ಷಕರು ಕೊರೊನಾ ಸೋಂಕಿನಿಂದ ಮೃತಪಟ್ಟಿದ್ದಾರೆ. ಉಳಿದ ಕಡೆ ಮೃತಪಟ್ಟವರ ಲೆಕ್ಕ ಸಿಗುತ್ತಿಲ್ಲ ಎಂದು ಹೇಳಿದ್ದಾರೆ.

## ಗೋಣಿಬೀಡು ಪ್ರಕರಣ: ಪ್ರತಿಭಟಿಸಿದ ಪಕ್ಕೀರಪ್ಪ



ಕೂಡ್ಲಿಗಿ, ಮೇ 24- ತಾಲ್ಲೂಕಿನ ಸಿದ್ದಾಪುರ ಗ್ರಾಮದ ದಲಿತ ಮುಖಂಡ, ಚಿಂತಕ ಎಂ. ಪಕ್ಕೀರಪ್ಪ ಅವರು ಲಾಕ್‌ಡೌನ್ ಹಿನ್ನೆಲೆಯಲ್ಲಿ ತಮ್ಮ ಮನೆ ಮುಂದೆಯೇ ವಿನೂತನ ಪ್ರತಿಭಟನೆ ಮಾಡಿದರು.

ಮೂಡಿಗೆರೆಯ ಗೋಣಿಬೀಡು ಪೊಲೀಸ್ ಠಾಣೆಯ ಪಿಎಸ್ಐ ಅರ್ಜುನ್ ಅವರು ದಲಿತ ಯುವಕ ಪುನೀತ್ ಎಂಬುವರಿಗೆ ಮೂತ್ರ ಕುಡಿಸಿದ ಅಮಾನುಷ ಪ್ರಕರಣವನ್ನು ದಲಿತ ಸಮುದಾಯದ ದನಿಯಾಗಿ ಖಂಡಿಸಿದ ಪಕ್ಕೀರಪ್ಪ, ಅರ್ಜುನ್ ವಿರುದ್ಧ ಕಠಿಣ ಕ್ರಮ ಜರುಗಿಸುವಂತೆ ಜೈ ಭೀಮ್ ಘೋಷಣೆಯೊಂದಿಗೆ ಆಗ್ರಹಿಸಿದರು.

## ಮಲೇಬೆನ್ನೂರಿನಲ್ಲಿ 18 ಪಾಸಿಟಿವ್



ಮಲೇಬೆನ್ನೂರು, ಮೇ 24- ಇಲ್ಲಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಸೋಮವಾರ 71 ಜನರಿಗೆ ಕೋವಿಡ್ ಟೆಸ್ಟ್ ಮಾಡಲಾಗಿದ್ದು, 18 ಜನರಿಗೆ ಪಾಸಿಟಿವ್ ಬಂದಿದೆ. ಪಟ್ಟಣದ ಆಶ್ರಯ ಕಾಲೋನಿ ರಸ್ತೆಯ ನಿವಾಸಿ 55 ವರ್ಷದ ಮಹಿಳೆ ಕೊರೊನಾ ಸೋಂಕಿನಿಂದ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.

ಜಿಗಳಿ ಗ್ರಾಮದಲ್ಲೂ ಶನಿವಾರ ಮತ್ತು ಭಾನುವಾರ ಇಬ್ಬರು ವೃದ್ಧ ಮಹಿಳೆಯರು ಸಾವನ್ನಪ್ಪಿದ್ದಾರೆ. ಹರಿಹರ ತಾಲ್ಲೂಕಿನಲ್ಲಿ ಸೋಮವಾರ ಬೆಳಗಿನ ವರದಿ ಪ್ರಕಾರ 84 ಜನರಿಗೆ ಕೊರೊನಾ ಸೋಂಕು ದೃಢಪಟ್ಟಿದ್ದು, ಸಂಜೆ ವೇಳೆಗೆ ರ್‍ಯಾಪಿಡ್ ಟೆಸ್ಟ್‌ನಲ್ಲಿ 60ಕ್ಕೂ ಹೆಚ್ಚು ಜನರಿಗೆ ಪಾಸಿಟಿವ್ ಬಂದಿದೆ.

ಸೋಮವಾರ ಹರಳಹಳ್ಳಿಯಲ್ಲಿ 33 ಅಂಗವಿಕಲರಿಗೆ ಕೋವಿಡ್ ಲಸಿಕೆ ಹಾಕಲಾಯಿತೆಂದು ಡಾ. ನಿಸಾರ್ ತಿಳಿಸಿದ್ದಾರೆ.

# 38 ದಿನಗಳ ನಂತರ 2.20 ಲಕ್ಷದ ಹಂತಕ್ಕೆ ಸೋಂಕು

## ಆದರೂ, ಸಾವಿನ ಸಂಖ್ಯೆ 4 ಸಾವಿರಕ್ಕೂ ಹೆಚ್ಚು

ನವದೆಹಲಿ, ಮೇ 24 - ಭಾರತದಲ್ಲಿ 38 ದಿನಗಳ ನಂತರ ಪ್ರತಿನಿತ್ಯ ಕಂಡು ಬರುವ ಕೊರೊನಾ ಸೋಂಕುಗಳು ಸಂಖ್ಯೆ 2.22 ಲಕ್ಷದ ಹಂತಕ್ಕೆ ಕುಸಿದಿದೆ. ಇದೇ ವೇಳೆ ದೇಶಾದ್ಯಂತ ಕೊರೊನಾ ಸಾವಿನ ಸಂಖ್ಯೆ 3 ಲಕ್ಷ ದಾಟಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯದ ಅಂಕಿ-ಅಂಶಗಳು ತಿಳಿಸಿವೆ.

ಸೋಂಕು ಪ್ರಕರಣಗಳು ತಿಂಗಳಲ್ಲೇ ಅತಿ ಕಡಿಮೆಯಾಗಿದ್ದರೂ ಸಹ, ದೇಶಾದ್ಯಂತ ಸಂಭವಿಸುತ್ತಿರುವ ಕೊರೊನಾ ಸಾವುಗಳ ಸಂಖ್ಯೆ ಹೆಚ್ಚಿನ ಪ್ರಮಾಣದಲ್ಲೇ ಇದೆ. ಸೋಮವಾರ 4,454 ಜನರು ಸೋಂಕಿನಿಂದ ಸಾವನ್ನಪ್ಪಿದ್ದಾರೆ. ಇದುವರೆಗೂ ಒಟ್ಟು 3.03 ಲಕ್ಷ ಸಾವುಗಳು ಸಂಭವಿಸಿವೆ.

ಈ ಹಿಂದೆ ಏಪ್ರಿಲ್ 16ರಂದು ದೇಶದಲ್ಲಿ 2.17 ಲಕ್ಷ ಸೋಂಕಿತರು ಕಂಡು ಬಂದಿದ್ದರು. ದೇಶದಲ್ಲಿ ಸಕ್ರಿಯ ಸೋಂಕಿತರ ಸಂಖ್ಯೆ 27.20 ಲಕ್ಷಕ್ಕೆ ಕುಸಿದಿದೆ. ಇದು ಒಟ್ಟು ಸೋಂಕಿತರ ಶೇ.10.17ರಷ್ಟಾಗಿದೆ.

ಮಹಾರಾಷ್ಟ್ರದಲ್ಲಿ ಸಾವಿನ ಸಂಖ್ಯೆ ಅತಿ ಹೆಚ್ಚಾಗಿದ್ದು 1,320 ಆಗಿದೆ. ಕರ್ನಾಟಕ, ತಮಿಳುನಾಡು, ಉತ್ತರ ಪ್ರದೇಶ, ಪಂಜಾಬ್ ಹಾಗೂ ದೆಹಲಿಗಳು ನಂತರದ ಸ್ಥಾನಗಳಲ್ಲಿವೆ. ದೇಶದಲ್ಲಿ ಇದುವರೆಗೂ 3.03 ಲಕ್ಷ ಕೊರೊನಾ ಸಾವುಗಳು ಸಂಭವಿಸಿವೆ. ಮಹಾರಾಷ್ಟ್ರದಲ್ಲಿ 88,620, ಕರ್ನಾಟಕದಲ್ಲಿ 25,282, ದೆಹಲಿಯಲ್ಲಿ 23,202, ತಮಿಳುನಾಡಿನಲ್ಲಿ 20,468, ಉತ್ತರ ಪ್ರದೇಶದಲ್ಲಿ 19,209 ಹಾಗೂ ಪಶ್ಚಿಮ ಬಂಗಾಳದಲ್ಲಿ 13,281 ಸಾವುಗಳು ಸಂಭವಿಸಿವೆ.

ಕಳೆದ 11 ದಿನಗಳಿಂದ ಕೊರೊನಾ ಸೋಂಕಿತರಿಗಿಂತ ಚೇತರಿಸಿಕೊಂಡವರ ಸಂಖ್ಯೆ ಹೆಚ್ಚಾಗಿದೆ. ಒಟ್ಟಾರೆ ಕೊರೊನಾ ಪಾಸಿಟಿವ್ ಬರುವ ಪ್ರಮಾಣ ಶೇ.8.09ರಷ್ಟಿದೆ ಎಂದು ಆರೋಗ್ಯ ಸಚಿವಾಲಯ ಹೇಳಿದೆ.

## 633 ಪಾಸಿಟಿವ್

(1ನೇ ಪುಟದಿಂದ) ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ದಾವಣಗೆರೆ ಆಂಜನೇಯ ಬಡಾವಣೆಯ 75 ವರ್ಷದ ಮಹಿಳೆ, ಹರಿಹರದ 67 ವರ್ಷದ ಪುರುಷ, 40 ವರ್ಷದ ಪುರುಷ ಮೃತಪಟ್ಟಿದ್ದಾರೆ.

## ಕೋವ್ಯಾಕ್ಸಿನ್ ಪ್ರಯೋಗ

(1ನೇ ಪುಟದಿಂದ) ಅನುಮತಿ ದೊರೆಯುವ ಸಾಧ್ಯತೆ ಇದೆ ಎಂದವರು ಹೇಳಿದ್ದಾರೆ. ಲಸಿಕೆಯಿಂದ ಸ್ವಲ್ಪ ಅಡ್ಡ ಪರಿಣಾಮಗಳಾಗುವುದು ಸಾಮಾನ್ಯ. ಆದರೆ, ಈ ಕಾರಣಕ್ಕಾಗಿ ಲಸಿಕೆ ಪಡೆಯುವುದನ್ನು ಯಾರೂ ನಿಲ್ಲಿಸಬಾರದು ಎಂದೂ ಅವರು ಹೇಳಿದ್ದಾರೆ.

## ವೈದ್ಯರ ಮೇಲೆ ಹಲ್ಲೆ: ತಾಲ್ಲೂಕು ಐಎಂಎಯಿಂದ ಖಂಡನೆ



ರಾಣೇಬೆನ್ನೂರು

ರಾಣೇಬೆನ್ನೂರು, ಮೇ 24- ಬಳ್ಳಾರಿಯ ಕೋವಿಡ್ ಸೆಂಟರ್‌ನಲ್ಲಿ ವೈದ್ಯರ ಮೇಲೆ ನಡೆದ ಹಲ್ಲೆ ಖಂಡಿಸಿ ಕೂಡಲೇ ವೈದ್ಯರಿಗೆ ಸೂಕ್ತ ರಕ್ಷಣೆ ನೀಡಬೇಕೆಂದು ಆಗ್ರಹಿಸಿ, ತಾಲ್ಲೂಕು ಭಾರತೀಯ ವೈದ್ಯಕೀಯ ಸಂಘದ ವತಿಯಿಂದ ತಹಶೀಲ್ದಾರ್ ಜಿ.ಎಸ್. ಶಂಕರ್ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ತಾಲ್ಲೂಕು ಐಎಂಐ ಅಧ್ಯಕ್ಷ ಪ್ರವೀಣ ಕನ್ನೂರು ಮಾತನಾಡಿ, ಕೊರೊನಾ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ವೈದ್ಯರು ತಮ್ಮ ಜೀವನವನ್ನೂ ಲೆಕ್ಕಿಸದೇ ರೋಗಿಗಳ ಆರೈಕೆಗೆ ಹಗಲಿರುಳು ಶ್ರಮಿಸುತ್ತಿದ್ದಾರೆ. ಇಂತಹ ಸಮಯದಲ್ಲಿ ರೋಗಿಗಳ ಸಂಬಂಧಿಕರು ವೈದ್ಯರ ಜೊತೆಗೆ ಸಹಕರಿಸಿ ಚಿಕಿತ್ಸೆ ಪಡೆಯಬೇಕು. ವೈದ್ಯರ ಮೇಲೆ ಹಲ್ಲೆ ಮಾಡಿದ್ದಾರೆ. ವೈದ್ಯಕೀಯ ಕಾಯ್ದೆ ಪ್ರಕಾರ 3 ವರ್ಷ ಜೈಲು ಹಾಗೂ 50 ಸಾವಿರ ದಂಡ ಇರುತ್ತದೆ. ಸರ್ಕಾರಿ ವೈದ್ಯರಿಗೆ ಸೂಕ್ತ ರಕ್ಷಣೆ ನೀಡಬೇಕೆಂದು ಆಗ್ರಹಿಸಿದರು. ಕಾರ್ಯದರ್ಶಿ ಡಾ. ಟಿ.ಕೆ. ವಿರುಪಾಕ್ಷಪ್ಪ, ಡಾ. ಬಸವರಾಜ ಕೇಲಗಾರ, ನಾಗರಾಜ ದೊಡ್ಡಮನಿ, ಡಾ. ಬಸವರಾಜ ಗೊಂದಿ, ಡಾ. ರವಿ ಕುಲಕರ್ಣಿ ಇನ್ನಿತರರು ಪಾಲ್ಗೊಂಡಿದ್ದರು.

# ಅನವಶ್ಯಕವಾಗಿ ರಸ್ತೆಗಿಳಿದ ವಾಹನಗಳಿಂದ 6.11 ಲಕ್ಷ ರೂ. ದಂಡ ವಸೂಲಾತಿ



ಹರಪನಹಳ್ಳಿ ಡಿವೈಎಸ್ಪಿ ವಿ.ಎಸ್.ಹಾಲಮೂರ್ತಿ

ಹರಪನಹಳ್ಳಿ, ಮೇ 24- ಹರಪನಹಳ್ಳಿ ಪೊಲೀಸ್ ಉಪವಿಭಾಗದಿಂದ ಲಾಕ್‌ಡೌನ್ ಆದಾಗಿನಿಂದ ಈವರೆಗೂ ಅನವಶ್ಯಕವಾಗಿ ರಸ್ತೆಗಿಳಿದ 1515 ವಾಹನಗಳಿಂದ 6.11 ಲಕ್ಷ ರೂ.ಗಳ ದಂಡ ವಸೂಲಾತಿ ಮಾಡಲಾಗಿದೆ ಎಂದು ಡಿವೈಎಸ್ಪಿ ವಿ.ಎಸ್. ಹಾಲಮೂರ್ತಿ ರಾವ್ ಹೇಳಿದರು.

ಈ ಕುರಿತು ಮಾಹಿತಿ ನೀಡಿದ ಅವರು ಲಾಕ್‌ಡೌನ್ ಉಲ್ಲಂಘನೆ ಮಾಡಿರುವವರ ವಿರುದ್ಧ ಹರಪನಹಳ್ಳಿ ತಾಲ್ಲೂಕಲ್ಲಿ 36 ಪ್ರಕರಣ, ಹಡಗಲಿ ತಾಲ್ಲೂಕಲ್ಲಿ 42 ಪ್ರಕರಣ, ಕೊಟ್ಟೂರು ತಾಲ್ಲೂಕಲ್ಲಿ 21 ಹೀಗೆ ಹರಪನಹಳ್ಳಿ ಉಪವಿಭಾಗದಿಂದ ಒಟ್ಟು 99 ಪ್ರಕರಣಗಳು ದಾಖಲಾಗಿವೆ ಎಂದು ಅವರು ತಿಳಿಸಿದ್ದಾರೆ.

ಮಾಸ್ಕ್ ಧರಿಸದ ಪ್ರಕರಣಗಳಲ್ಲಿ ಹರಪನಹಳ್ಳಿ ತಾಲ್ಲೂಕಲ್ಲಿ 3316 ಪ್ರಕರಣಗಳಿಂದ 3,31,600 ರೂ.ದಂಡ ವಸೂಲಿ, ಸಾಮಾಜಿಕ ಅಂತರ ಕಾಪಾಡದ 4 ಪ್ರಕರಣಗಳಿಂದ 8 ಸಾವಿರ ರೂ. ವಸೂಲಿ ಮಾಡಲಾಗಿದೆ.

ಹಡಗಲಿ ತಾಲ್ಲೂಕಿನಲ್ಲಿ 1684 ಪ್ರಕರಣಗಳಿಂದ 1,68,400 ರೂ. ವಸೂಲಿ ಮಾಡಲಾಗಿದೆ. ಕೊಟ್ಟೂರು ತಾಲ್ಲೂಕಿನಲ್ಲಿ 2197 ಪ್ರಕರಣಗಳಿಂದ 2,19,700 ರೂ. ವಸೂಲಿ ಮಾಡಲಾಗಿದೆ. ಹೀಗೆ ಹರಪನಹಳ್ಳಿ ಉಪವಿಭಾಗದಿಂದ 7197 ಪ್ರಕರಣಗಳಲ್ಲಿ 7,19,700 ರೂ. ದಂಡ ವಸೂಲಿ ಮಾಡಲಾಗಿದೆ.

ಲಾಕ್‌ಡೌನ್ ಉಲ್ಲಂಘನೆ ಮಾಡಿ, ಅನಾವಶ್ಯಕವಾಗಿ ಸಂಚರಿಸಿದ ವಾಹನಗಳ ಜಪ್ತು ಪಡಿಸಿಕೊಂಡ ವಿಚಾರದಲ್ಲಿ ಹರಪನಹಳ್ಳಿ ತಾಲ್ಲೂಕಿನಲ್ಲಿ 585 ವಾಹನಗಳ ಜಪ್ತು ಮಾಡಿ, 2,35,600 ರೂ. ವಸೂಲಿ ಮಾಡಲಾಗಿದೆ.

ಹಡಗಲಿ ತಾಲೂಕಿನಲ್ಲಿ 680 ವಾಹನಗಳಿಂದ 2,76,900 ರೂ.ಗಳನ್ನು ವಸೂಲಿ ಮಾಡಲಾಗಿದೆ. ಕೊಟ್ಟೂರು ತಾಲ್ಲೂಕಿನಲ್ಲಿ 250 ವಾಹನಗಳಿಂದ 98,500 ರೂ. ದಂಡ ವಸೂಲಿ ಮಾಡಲಾಗಿದೆ. ಒಟ್ಟು ಉಪವಿಭಾಗದಿಂದ 1515 ವಾಹನಗಳ ಜಪ್ತಿನಿಂದ 6.11 ಲಕ್ಷ ರೂ.ವಸೂಲಾತಿ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

5 ದಿನಗಳ ನಂತರ ಹರಪನಹಳ್ಳಿ ಪಟ್ಟಣದ ಸ್ಟೇಡಿಯಂನಲ್ಲಿ ಪೊಲೀಸ್ ಬಂದೋಬಸ್ತ್ ಮಧ್ಯೆ ಸಂತೆ ಜರುಗಿತು. ಮಾರುಕಟ್ಟೆಗೆ ತರಕಾರಿ ಕೊಳ್ಳಲು ಬರುತ್ತಿರುವ ಸಾರ್ವಜನಿ ಕರಿಗೆ ಹಾಗೂ ವ್ಯಾಪಾರಸ್ಥರಿಗೆ ಬುದ್ಧಿ ಹೇಳಿ ಕ್ರೀಡಾಂಗಣದಲ್ಲಿ ವ್ಯಾಪಾರಸ್ಥರನ್ನು ಸಾಮಾಜಿಕ ಅಂತರದಲ್ಲಿ ವ್ಯವಹರಿಸಲು ಪೊಲೀಸ್ ಇಲಾಖೆ ಹಾಗೂ ಪುರಸಭೆ ಅಧಿಕಾರಿ ಗಳು ಸಾರ್ವಜನಿಕರಿಗೆ ಜಾಗೃತಿ ಮೂಡಿಸಿ ಸಾಮಾಜಿಕ ಅಂತರದಿಂದ ತರಕಾರಿಗಳನ್ನು ಕೊಂಡುಕೊಳ್ಳಲು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಸಿಪಿಐ ನಾಗರಾಜ್ ಕಮ್ಮಾರ್, ಪುರಸಭೆ ಅಧಿಕಾರಿ ಬಿ.ಆರ್.ನಾಗರಾಜ್ ನಾಯ್ಕ, ಪಿಎಸ್ಐ ಸಿ.ಪ್ರಕಾಶ್, ವಾಸುದೇವನಾಯ್ಕ, ಬಾಗಳಿ ಕೊಟ್ರೇಶ್ ಇತರರಿದ್ದರು.

## ಭುವನೇಶ್ವರಿ ಆದರ್ಶ ಶಾಲೆಯಲ್ಲಿ ಆಹಾರ ಧಾನ್ಯ ವಿತರಣೆ



ಕೊಡಿಯಾಲ ಹೊಸಪೇಟೆ

ರಾಣೇಬೆನ್ನೂರು, ಮೇ 24- ಭುವನೇಶ್ವರಿ ಆದರ್ಶ ಹಿರಿಯ ಪ್ರಾಥಮಿಕ ಶಾಲೆ ಕೊಡಿಯಾಲದಲ್ಲಿ ಇಂದು 98 ದಿನದ ಆಹಾರ ಧಾನ್ಯ ವಿತರಣಾ ಕಾರ್ಯ ನಡೆಯಿತು. ಆಹಾರ ಧಾನ್ಯ ವಿತರಣೆಗೆ ಗ್ರಾಮ ಪಂಚಾಯತಿ ಅಧ್ಯಕ್ಷ ಚೇತನ್ ಮಂಜಣ್ಣ ಪೂಜಾರ್ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಚೇತನ್ ಮಂಜಣ್ಣ ಪೂಜಾರ್, ಬಿಸಿಯೂಟದ ಬದಲಾಗಿ ಆಹಾರ ಧಾನ್ಯ ವಿತರಣೆ ಮಾಡುತ್ತಿರುವ ಸರ್ಕಾರದ ಕಾರ್ಯ ಸ್ವಾಗತಾರ್ಹವಾದುದು. ಕೋವಿಡ್ ಸಂಕಷ್ಟದ ಪರಿಸ್ಥಿತಿಯಲ್ಲಿ ಬಡ ವಿದ್ಯಾರ್ಥಿಗಳ ಪಾಲಕರಿಗೆ ಇದರಿಂದ ಅನುಕೂಲವಾಗಿದೆ ಎಂದರು.

ಸಂಸ್ಥೆಯ ಅಧ್ಯಕ್ಷರಾದ ಪುಟ್ಟಮ್ಮ ಹಿರೇಮಠ, ದುಷ್ಯಂತ್ ದ್ಯಾಮಕ್ಕನವರ್, ಮುಖ್ಯೋಪಾಧ್ಯಾಯ ಮಲ್ಲಿಕಾರ್ಜುನ ಬಾವಿಕಟ್ಟಿ, ಸಹ ಶಿಕ್ಷಕರಾದ ಶಿವಯ್ಯ ಹಿರೇಮಠ, ರೇಣುಕಮ್ಮ ಎಸ್. ದೇವರಾಜ ಮಲ್ಲಾಪುರ, ರೇಖಾ ಸಿ ಮತ್ತು ಅಡುಗೆ ಸಿಬ್ಬಂದಿಗಳಾದ ಯಶೋದಮ್ಮ ಚಕ್ರಸಾಲಿ, ಅನಸೂಯಮ್ಮ ಹಾಲಮ್ಮನವರ, ಗೀತಮ್ಮ ಗೋಣೆಪ್ಪನವರ ಇದ್ದರು.

## ಮಕ್ಕಳ ಪ್ರಭಾವದ ಸೂಚನೆ ಇಲ್ಲ

(1ನೇ ಪುಟದಿಂದ) ಎಂಬ ಯಾವುದೇ ಸೂಚನೆಗಳಿಲ್ಲ ಎಂದವರು ಹೇಳಿದ್ದಾರೆ. ದೇಹದಲ್ಲಿರುವ ಎ.ಸಿ.ಇ. ರಿಸೆಪ್ಟರ್‌ಗಳ ಮೂಲಕ ವೈರಸ್ ಬರುತ್ತಿದೆ ಎಂಬ ಸಿದ್ಧಾಂತವಿದೆ. ಮಕ್ಕಳಲ್ಲಿ ಈ ರಿಸೆಪ್ಟರ್‌ಗಳ ಸಂಖ್ಯೆ ಕಡಿಮೆ ಇರುವುದರಿಂದ, ಅವರಲ್ಲಿ ವಯಸ್ಕರಿಗೆ ಹೋಲಿಸಿದರೆ ಕಡಿಮೆ ಸೋಂಕು ಬರುತ್ತಿದೆ ಎಂದು ಗುಲೇರಿಯ ಹೇಳಿದ್ದಾರೆ.

ಎರಡೂ ಅಲೆಗಳಲ್ಲಿ ಮಕ್ಕಳ ಮೇಲೆ ಪರಿಣಾಮವಾಗಿಲ್ಲ. ಹೀಗಾಗಿ ಮೂರನೇ ಅಲೆ ಅವರನ್ನು ಕಾಡಲಿದೆ ಎಂದು ಕೆಲವರು ಹೇಳುತ್ತಿರುವುದಕ್ಕೆ ಯಾವುದೇ ಆಧಾರಗಳಿಲ್ಲ ಎಂದು ಗುಲೇರಿಯ ತಿಳಿಸಿದ್ದಾರೆ.

## ಸಮಾರಂಭ ತಡೆ ಹೊಣೆ ಪಂಚಾಯ್ತಿಗೆ

(1ನೇ ಪುಟದಿಂದ) ವ್ಯವಸ್ಥೆಯನ್ನಾದರೂ ಮಾಡಿಕೊಳ್ಳಬಹುದು.

ಯಾವುದೇ ಗ್ರಾಮದಲ್ಲಿ ಸೋಂಕಿತರು ಕಂಡು ಬಂದ ತಕ್ಷಣವೇ ಅಂತಹವರಿಗೆ ಚಿಕಿತ್ಸೆ ಕಲ್ಪಿಸುವುದು ಮತ್ತು ಅವರನ್ನು ಆರೋಗ್ಯ ಕೇಂದ್ರಗಳಿಗೆ ದಾಖಲಿಸುವುದು, ಔಷಧೋಪಚಾರ ಊಟದ ಎಲ್ಲಾ ಮೇಲುಸ್ತುವಾರಿಯನ್ನು ನೀವೇ ನೋಡಿಕೊಳ್ಳಬೇಕು.

ಇದಕ್ಕಾಗಿ ಗ್ರಾಮ ಮಟ್ಟದ ಟಾಸ್ಕ್‌ಫೋರ್ಸ್ ರಚನೆ ಮಾಡಿಕೊಳ್ಳಿ. ಎಲ್ಲರೂ ಸೇವಾ ಮನೋಭಾವದಿಂದ ಕೆಲಸ ಮಾಡಿ ಎಂದು ತಿಳಿಸಿದ್ದಾರೆ.


## ಡಾ|| ಎ. ಭೀಮಪ್ಪ ರೆಡ್ಡಿ ನಿಧನ



ದಾವಣಗೆರೆ ವಿದ್ಯಾನಗರ ಮೇನ್ ರೋಡ್ ಕೆನರಾ ಬ್ಯಾಂಕ್ ಸಮೀಪದ ವಾಸಿ

**ಡಾ|| ಎ. ಭೀಮಪ್ಪ ರೆಡ್ಡಿ**

(ನಿವೃತ್ತ ವೆಟರ್ನರಿ ಡೆಪ್ಯೂಟಿ ಡೈರೆಕ್ಟರ್)

ಅವರು, ದಿನಾಂಕ 24.05.2021 ರ ಸೋಮವಾರ ರಾತ್ರಿ 8.00 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾಧಿಸುತ್ತೇವೆ.

ಮೃತರಿಗೆ 84 ವರ್ಷ ವಯಸ್ಸಾಗಿತ್ತು. ಮೃತರು ದೀರ್ಘವ್ಯಾಧಿಯಿಂದ ಅನಾರೋಗ್ಯಪೀಡಿತರಾಗಿದ್ದರು.

ಪತ್ನಿ, ಮೂವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 25.05.2021 ರ ಮಂಗಳವಾರ ನಗರದಲ್ಲಿ ನೆರವೇರಲಿದೆ.

- ಇಂತಿ ದುಃಖತಪ್ತ ಕುಟುಂಬ ವರ್ಗ

ಮೊ : 94492 50272, 82174 17398

## ಎ.ಎಂ. ವಸ್ತ್ರದ್ ನಿಧನ



ದಾವಣಗೆರೆ ಶಿವಕುಮಾರ ಸ್ವಾಮಿ ಬಡಾವಣೆ, 2ನೇ ಸ್ಟೇಜ್, 5ನೇ ಸಿ ಕ್ರಾಸ್, ದಾವಣಗೆರೆ ವಾಸಿಯಾದ ಶ್ರೀ ಎ.ಎಂ. ವಸ್ತ್ರದ (50) ಇವರು, ದಿನಾಂಕ 23.05.2021ರ ಭಾನುವಾರ ಬೆಳಿಗ್ಗೆ 5.20 ಕ್ಕೆ ನಿಧನರಾಗಿರುತ್ತಾರೆ. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 23.05.2021ರ ಸಂಜೆ 5 ಗಂಟೆಗೆ ಬಾಗಲಕೋಟೆ ಜಿಲ್ಲೆ ಹುನಗುಂದದಲ್ಲಿ ನೆರವೇರಿಸಲಾಯಿತು.

## ಡಿ.ಸಿ. ಶಿವರಾಜ್ ನಿಧನ



ದಾವಣಗೆರೆ ವಿನೋಬನಗರ 3ನೇ ಮೇನ್, 3ನೇ ಕ್ರಾಸ್ ವಾಸಿ ಡಿ.ಸಿ. ಶಿವರಾಜ್ (51) ಅವರು ದಿನಾಂಕ 24-5-2021ರ ಸೋಮವಾರ ಬೆಳಿಗ್ಗೆ 5 ಗಂಟೆಗೆ ನಿಧನರಾದರು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 24-5-2021ರ ಸೋಮವಾರ ನಗರದ ರಾಮನಗರದ ಸಮೀಪವಿರುವ ರುದ್ರಭೂಮಿಯಲ್ಲಿ ನೆರವೇರಿತು.

## ಕೆ. ಬಸವರಾಜಯ್ಯ ನಿಧನ



ದಾವಣಗೆರೆ ವಿದ್ಯಾನಗರ 14ನೇ ಕ್ರಾಸ್ ವಾಸಿ, KPTCL ನಿವೃತ್ತ JE ಕೆ. ಬಸವರಾಜಯ್ಯ (79) ಅವರು ದಿನಾಂಕ 24.05.2021ರ ಸೋಮವಾರ ಬೆಳಿಗ್ಗೆ 8 ಗಂಟೆಗೆ ನಿಧನರಾದರು. ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 24.5.2021ರ ಸೋಮವಾರ ಸಂಜೆ 4 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿತು.

## ಶ್ರೀಮತಿ ಶಾರದ ನಿಧನ



ದಾವಣಗೆರೆ ಎಂ.ಸಿ.ಸಿ. 'ಬಿ' ಬ್ಲಾಕ್, 3ನೇ ಮೇನ್, 2ನೇ ಕ್ರಾಸ್ # 2772/1 ರ ವಾಸಿ ಬಿ. ಚಂದ್ರಶೇಖರಪ್ಪ ಇವರ ಪತ್ನಿ ಶ್ರೀಮತಿ ಶಾರದ (81) ಅವರು, ದಿನಾಂಕ 24.05.2021 ರ ಸೋಮವಾರ ರಾತ್ರಿ 8 ಗಂಟೆಗೆ ನಿಧನರಾದರು. ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 25.05.2021 ರ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

# ಕೊರೊನಾ ಕಟ್ಟಿಹಾಕಲು ಕೋಟಿ ರೂ. ಅನುದಾನ

## ಜಗಳೂರು: ಕೊರೊನಾ ನಿಯಂತ್ರಣ ಸಭೆಯಲ್ಲಿ ಶಾಸಕ ಎಸ್.ವಿ. ರಾಮಚಂದ್ರ

ಜಗಳೂರು, ಮೇ 24- ಕ್ಷೇತ್ರದ ಜನರ ಆಶೀರ್ವಾದದಿಂದಾಗಿ ಕೋವಿಡ್‌ನಿಂದ ಗುಣಮುಖನಾಗಿ ಪುನಃ ನಿಮ್ಮ ಸೇವೆಗೆ ಮರಳಿದ್ದೇನೆ ಎಂದು ಶಾಸಕ ಎಸ್.ವಿ. ರಾಮಚಂದ್ರ ಭಾವುಕರಾಗಿ ನುಡಿದರು.

ಪಟ್ಟಣದ ತರಳಬಾಳು ಸಮುದಾಯ ಭವನದಲ್ಲಿ ನಡೆದ ಕೊರೊನಾ ನಿಯಂತ್ರಣ ಸಭೆಯಲ್ಲಿ ಭಾಗವಹಿಸಿ, ಅವರು ಮಾತನಾಡಿದರು.

ನಾನು ಆಸ್ಪತ್ರೆಯಲ್ಲಿದ್ದಾಗಲೂ ನನ್ನ ಜೀವವೆಲ್ಲಾ ಕ್ಷೇತ್ರದಲ್ಲೇ ಇತ್ತು. ಪ್ರತಿದಿನ ಜಿಲ್ಲಾಧಿಕಾರಿಗಳು ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳಿಂದ ಕೊರೊನಾ ಮಾಹಿತಿ ಪಡೆದು ಅಗತ್ಯ ಸಲಹೆ ಸೂಚನೆ ನೀಡುತ್ತಿದ್ದೆ. ತಾಲ್ಲೂಕಿನ ಎಲ್ಲ ಅಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳ ನೇತೃತ್ವದ ತಂಡ ನನ್ನ ಕ್ಷೇತ್ರಕ್ಕೆ ಸಂಪೂರ್ಣ ಸಹಕಾರ ನೀಡಿದೆ ಅವರಿಗೆ ಅಭಿನಂದಿಸುವುದಾಗಿ ಶಾಸಕರು ತಿಳಿಸಿದರು.

ಸಂಸದ ಸಿದ್ದೇಶ್ವರ ಅತಿಹೆಚ್ಚಿನ ಹಳ್ಳಿಗಳಿಗೆ ಭೇಟಿ ನೀಡಿ, ಕೊರೊನಾ ಪ್ರಗತಿ ಪರಿಶೀಲನೆ ಮಾಡಿ ಜನರಿಗೆ ಜಾಗೃತಿ ಮೂಡಿಸಿರುವುದು ಅವರ ಜನಪರ ಕಾಳಜಿಯಾಗಿದೆ. ತಮ್ಮ ಟ್ರಸ್ಟ್ ವತಿಯಿಂದ 53 ಲಕ್ಷ ರೂ ವೆಚ್ಚದಲ್ಲಿ ಆಕ್ಸಿಜನ್ ಜನರೇಟರ್‌ಗೆ ಮಂಜೂರಾತಿ ನೀಡಿದ್ದು, ಮೇ 25ರಂದು ಸ್ಥಳ ಪರಿಶೀಲನೆ ನಡೆದು 15 ದಿನಗಳಲ್ಲಿ ಕೇಂದ್ರ ಸ್ಥಾಪನೆಯಾಗಲಿದೆ. ಇದರಿಂದಾಗಿ ಪ್ರತಿದಿನ 50 ರೋಗಿಗಳಿಗೆ ಆಕ್ಸಿಜನ್ ಸೌಲಭ್ಯ ದೊರೆಯಲಿದೆ. ಇದಕ್ಕಾಗಿ ಸಂಸದರನ್ನು ಕ್ಷೇತ್ರದ ಜನತೆಯ ಪರವಾಗಿ ಅಭಿನಂದಿಸುವೆ ಎಂದು ಶಾಸಕರು ತಿಳಿಸಿದರು.




ಕೊರೊನಾ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಆಸ್ಪತ್ರೆಗಳ ಮೂಲ ಸೌಕರ್ಯ, ಸಲಕರಣೆ ಹಾಗೂ ಸಾಮಗ್ರಿಗಳ ಸೌಲಭ್ಯಕ್ಕಾಗಿ ಕ್ಷೇತ್ರದ ಎಲ್ಲಾ ಆಸ್ಪತ್ರೆಗಳಿಗೆ ಶಾಸಕರ ಅನುದಾನದಲ್ಲಿ ಒಂದು ಕೋಟಿ ರೂ. ನೀಡುವುದಾಗಿ ಶಾಸಕರು ತಿಳಿಸಿದರು. ಕಳೆದ ವರ್ಷದಲ್ಲಿ ವಿಧಾನಸಭಾ ಕ್ಷೇತ್ರದ ಅರಸೀಕೆರೆ ಹೋಬಳಿಯ 7 ಪಂಚಾಯ್ತಿಗಳು ಸೇರಿದಂತೆ ಕ್ಷೇತ್ರದ ಆಸ್ಪತ್ರೆಗಳ ಮೂಲ ಸೌಕರ್ಯ ಅಭಿವೃದ್ಧಿಗಾಗಿ 1.36 ಕೋಟಿ ರೂ. ಅನುದಾನ ನೀಡಿರುತ್ತೇನೆ ಎಂದು ದಾಖಲೆಗಳನ್ನು ಪ್ರದರ್ಶಿಸಿದರು.

ಕೊರೊನಾ ನಿಯಂತ್ರಣ ಹೋರಾಟದಲ್ಲಿ ಅನೇಕ ಸಂಘ-ಸಂಸ್ಥೆಗಳು, ದಾನಿಗಳು ಕೊರೊನಾ ವಾರಿಯರ್ಸ್ ಶ್ರಮಿಸುತ್ತಿದ್ದಾರೆ. ಜೆಡಿಎಸ್‌ನ ಕಲ್ಲೇರುದ್ರೇಶ್ ಅವರು ಸಹ ಕೈಜೋಡಿಸಿದ್ದಾರೆ ಎಲ್ಲರನ್ನು ಅಭಿನಂದಿಸುತ್ತೇನೆ ಎಂದರು. ಪಟ್ಟಣದ ಸರ್ಕಾರಿ ಆಸ್ಪತ್ರೆಯ ಕೋವಿಡ್ ಸೆಂಟರ್‌ನಲ್ಲಿರುವ ಎಲ್ಲ ರೋಗಿಗಳಿಗೆ ತಮ್ಮ ಸ್ವಂತ ವೆಚ್ಚದಲ್ಲಿ ಪ್ರತಿದಿನ ಪೌಷ್ಠಿಕ ಆಹಾರ ವಿತರಿಸುವುದಾಗಿ ಶಾಸಕರು ತಿಳಿಸಿದರು.

ಆಸ್ಪತ್ರೆಯಲ್ಲಿ 6 ವೆಂಟಿಲೇಟರ್‌ಗಳಿದ್ದರೂ ಸಹ ವೈದ್ಯರು ಸೇರಿದಂತೆ ಸಿಬ್ಬಂದಿ ಕೊರತೆಯಿದೆ. ಜಿಲ್ಲಾಧಿಕಾರಿಗಳು ಅಗತ್ಯ ಸಿಬ್ಬಂದಿಯನ್ನು ನೀಡಬೇಕೆಂದು ಶಾಸಕರು ಮನವಿ ಮಾಡಿದರು. ನಾನು ಕೋವಿಡ್ ಕಾರಣದಿಂದ ಆಸ್ಪತ್ರೆಯಲ್ಲಿದ್ದಾಗ ರಾಜಕೀಯ ವಿರೋಧಿಗಳು ನನ್ನ ಬಗ್ಗೆ ತುಂಬಾ ಕೆಟ್ಟದಾಗಿ ಟೀಕಿಸಿರುವುದು ನನ್ನ ಗಮನಕ್ಕೆ ಬಂದಿದೆ. ಕ್ಷೇತ್ರದ ಜನರ ಆಶೀರ್ವಾದದಿಂದ ಕೊರೊನಾ ಜಯಿಸಿ, ಕ್ಷೇತ್ರದ ಜನರ ಸೇವೆಗೆ ಈ ರಾಜಾಹುಲಿ ಮರಳಿದೆ ಎಂದು ರಾಮಚಂದ್ರ ಆತ್ಮವಿಶ್ವಾಸದಿಂದ ನುಡಿದರು.

ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಮಾತನಾಡಿ, ಕ್ಷೇತ್ರ ಶಾಸಕರು ಕೊರೊನಾದಿಂದ ಗುಣಮುಖರಾಗಿ ಸೇವೆಗೆ ಆಗಮಿಸಿದ್ದಾರೆ. ಅವರಿಗೆ ಅಭಿನಂದಿಸುವುದಾಗಿ ತಿಳಿಸಿದರು.

**ಕೊರೊನಾ ಜಯಿಸಿ ಕ್ಷೇತ್ರದ ಜನರ ಸೇವೆಗೆ ಮರಳಿದ ರಾಜಾಹುಲಿ ಎಸ್‌ವಿಆರ್**

**ಪಟ್ಟಣದ ಕೋವಿಡ್ ಕೇರ್ ಸೆಂಟರ್‌ನಲ್ಲಿರುವ ರೋಗಿಗಳಿಗೆ ಸ್ವಂತ ವೆಚ್ಚದಲ್ಲಿ ಪ್ರತಿ ದಿನ ವಿಶೇಷ ಪೌಷ್ಠಿಕ ಉಪಹಾರ ವಿತರಣೆ**

**ಸಂಸದರ ಅನುದಾನದಲ್ಲಿ 53 ಲಕ್ಷ ರೂಪಾಯಿ ವೆಚ್ಚದಲ್ಲಿ ಸರ್ಕಾರಿ ಆಸ್ಪತ್ರೆ ಆವರಣದಲ್ಲಿ ಆಕ್ಸಿಜನ್ ಜನರೇಟರ್ ಕೇಂದ್ರ ಸ್ಥಾಪನೆ. ಪಟ್ಟಣದ ತರಳಬಾಳು ಭವನದಲ್ಲಿ ಕೋವಿಡ್ ಕೇರ್ ಸ್ಥಾಪನೆಗೆ ಶ್ರೀಗಳಿಂದ ಒಪ್ಪಿಗೆ.**

**ತಾಲ್ಲೂಕಿನ ವಿಂಡ್‌ಫ್ಯಾನ್ ಸಂಸ್ಥೆಗಳಿಂದ ಲಕ್ಷ ರೂ. ವೆಚ್ಚದಲ್ಲಿ ಸರಕಾರಿ ಆಸ್ಪತ್ರೆಗೆ ಪಿಪಿಇ ಕಿಟ್, ಮಾಸ್ಕ್, ಸ್ಯಾನಿಟೈಸರ್ ದೇಣಿಗೆ**

ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ, ಜಿಲ್ಲಾ ಸರ್ವೇಕ್ಷಣಾ ಅಧಿಕಾರಿ ಡಾಕ್ಟರ್ ರಾಘವನ್, ಜಿಲ್ಲಾ ಪಂಚಾಯತ್ ಸಿಇಓ ವಿಜಯ ಮಾಂತೇಶ ಮಾತನಾಡಿದರು.

ಜಿಲ್ಲಾ ಆರೋಗ್ಯಾಧಿಕಾರಿ ಡಾ. ನಾಗರಾಜ್, ಆಡಳಿತ ವೈದ್ಯಾಧಿಕಾರಿ ಡಾ. ನೀರಜ್, ಡಿವೈಎಸ್ಪಿ ನರಸಿಂಹ ತಾಮ್ರಧ್ವಜ, ಸಿಪಿಐ ಮಂಜುನಾಥ್ ಪಂಡಿತ್, ಪ್ರಭಾರಿ ತಹಶೀಲ್ದಾರ್ ಗಿರೀಶ್ ಬಾಬು, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಬಿ.ಮಹೇಶ್ ಸೇರಿದಂತೆ, ತಾಲ್ಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ಕಾಂಗ್ರೆಸ್ ಅಪಪ್ರಚಾರದಿಂದ ಲಸಿಕೆ ಕಾರ್ಯಕ್ಕೆ ಹಿನ್ನಡೆ



ಜಗಳೂರು, ಮೇ 24- ದೇಶದಲ್ಲಿ ಕೋವಿಡ್ ಲಸಿಕೆ ನೀಡಲು ಆರಂಭವಾದ ಸಮಯದಲ್ಲಿ ಕಾಂಗ್ರೆಸ್ ಪಕ್ಷದವರು ಮಾಡಿದ ಅಪಪ್ರಚಾರದಿಂದಾಗಿ ಲಸಿಕೆ ಕಾರ್ಯಕ್ರಮಕ್ಕೆ ಹಿನ್ನಡೆಯಾಗಿತ್ತು ಎಂದು ಕೇಂದ್ರದ ಮಾಜಿ ಸಚಿವರು ಹಾಗೂ ಸಂಸದ ಜಿ.ಎಂ. ಸಿದ್ದೇಶ್ವರ್ ಆರೋಪಿಸಿದರು.

ಪಟ್ಟಣದ ತರಳಬಾಳು ಸಮುದಾಯ ಭವನದಲ್ಲಿ ನಡೆದ ಕೊರೊನಾ ನಿಯಂತ್ರಣ ಪ್ರಗತಿ ಪರಿಶೀಲನಾ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಸಂಸದರು, ಲಸಿಕೆ ತೆಗೆದುಕೊಳ್ಳುವ ಬಗ್ಗೆ ಆರಂಭದಲ್ಲಿ ಕಾಂಗ್ರೆಸ್ ಅಪಪ್ರಚಾರ ನಡೆಸಿ ಒಳಗಿಂದೊಳಗೆ ಅವರು ಲಸಿಕೆ ಹಾಕಿಸಿಕೊಂಡರು. ಆದರೆ ಅವರ ಮಾತು ಕೇಳಿದ ಸಾಮಾನ್ಯ ಜನರು ಲಸಿಕೆ ಪಡೆದುಕೊಳ್ಳದೆ ತೊಂದರೆಗೀಡಾಗಿದ್ದಾರೆ ಎಂದು ಟೀಕಿಸಿದರು.

ಆರಂಭದ ದಿನಗಳಲ್ಲಿ ಲಸಿಕೆಯ ಸಾಕಷ್ಟು ಪ್ರಮಾಣದಲ್ಲಿ ದಾಸ್ತಾನು ಇದ್ದರೂ ಜನ ಮುಂದೆ ಬರಲಿಲ್ಲ. ಆದರೆ ಈಗ ಲಸಿಕೆಯ ಮಹತ್ವ ಅರಿತು ಸಾರ್ವಜನಿಕರು ಲಸಿಕೆ ಪಡೆಯಲು ಒಮ್ಮೆಲೇ ಆಸ್ಪತ್ರೆಗಳಿಗೆ ದೌಡಾಯಿಸುತ್ತಿರುವುದರಿಂದ ಲಸಿಕೆ ಕೊರತೆ ಉಂಟಾಗಿದೆ. ಮುಂದಿನ ದಿನಗಳಲ್ಲಿ ಎಲ್ಲರಿಗೂ ಲಸಿಕೆ ವಿತರಿಸಲು ಭಾರತ ಸರ್ಕಾರ ಬದ್ಧವಾಗಿದೆ. ಪ್ರಸ್ತುತ ಎರಡನೇ ಡೋಸ್ ಮಾತ್ರ ವಿತರಿಸುತ್ತಿದ್ದು, ಮುಂದಿನ ವಾರ 18 ಪ್ಲಸ್ ವಯೋಮಾನದವರಿಗೆ ಲಸಿಕೆ ನೀಡಲಾಗುವುದು ಎಂದು ತಿಳಿಸಿದರು.

ಜಗಳೂರು ಆಸ್ಪತ್ರೆಯಲ್ಲಿ 6 ವೆಂಟಿಲೇಟರ್ ಸಹಿತ 50 ಆಕ್ಸಿಜನ್ ಬೆಡ್‌ಗಳ ಸೌಲಭ್ಯವಿದ್ದು ಯಾವುದೇ ಕೊರತೆ ಇಲ್ಲ. ಜಗಳೂರು ಹಿಂದುಳಿದ ತಾಲ್ಲೂಕು ಆಗಿದ್ದು ಜನರು ಕೆಲಸಕ್ಕಾಗಿ ಗುಳೇ ಹೋಗುವ ಸಂಭವವಿದೆ. ಹಾಗಾಗಿ ಉದ್ಯೋಗ ಖಾತ್ರಿ ಯೋಜನೆಯಡಿ ಜನರಿಗೆ ವೈಯಕ್ತಿಕ ಕಾಮಗಾರಿಗಳನ್ನು ನೀಡುವ ಮೂಲಕ ಅವರಿಗೆ ಆರ್ಥಿಕ ನೆರವು ಕಲ್ಪಿಸಿಕೊಡಬೇಕೆಂದು ಸಿಇಓಗೆ ಸೂಚನೆ ನೀಡಿದರು.

ಪಟ್ಟಣದಲ್ಲಿರುವ ಸುಸಜ್ಜಿತವಾದ ತರಳಬಾಳು ಕೇಂದ್ರದಲ್ಲಿ ಕೋವಿಡ್ ಕೇರ್ ಸೆಂಟರ್ ಸ್ಥಾಪಿಸಲು ತರಳಬಾಳು ಜಗದ್ಗುರು ಶ್ರೀ ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳು ಅನುಮತಿ ನೀಡಿದ್ದು, ಅವರಿಗೆ ನಾನು ಹಾಗೂ ಶಾಸಕರು ಹಾಗೂ ಜಿಲ್ಲಾಡಳಿತ ಅಭಿನಂದಿಸುವುದಾಗಿ ಸಂಸದರು ತಿಳಿಸಿದರು.

ಸಭೆಯಲ್ಲಿ ಶಾಸಕ ಎಸ್.ವಿ. ರಾಮಚಂದ್ರ, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ ಸೇರಿದಂತೆ, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ಜಿಲ್ಲಾಧಿಕಾರಿಗಳಿಂದ ತಾರತಮ್ಯ ನೀತಿ

## ಹರಿಹರಕ್ಕೆ ಸೌಲಭ್ಯ ಕಲ್ಪಿಸುವಲ್ಲಿ ಜಿಲ್ಲಾಡಳಿತ ವಿಫಲ: ಶಾಸಕ ರಾಮಪ್ಪ



ಹರಿಹರ, ಮೇ 24- ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರ ತಾರತಮ್ಯ ನೀತಿಯಿಂದಾಗಿ ಹರಿಹರ ತಾಲ್ಲೂಕಿನಲ್ಲಿ ಕೊರೊನಾ ರೋಗದಿಂದ ಹೆಚ್ಚಿನ ಪ್ರಮಾ ಣದಲ್ಲಿ ಮರಣಗಳು ಸಂಭವಿಸುತ್ತಿದ್ದು, ಈ ಬೆಳವಣಿಗೆ ಹಾಗೇಯೇ ಮುಂದುವರೆದರೆ ಮುಂದಾಗುವ ಪರಿಣಾಮವನ್ನು ಜಿಲ್ಲಾಧಿಕಾರಿಗಳು ಎದುರಿಸಬೇಕಾಗುತ್ತದೆ ಎಂದು ಶಾಸಕ ಎಸ್. ರಾಮಪ್ಪ ಖಾರವಾಗಿ ಹೇಳಿದ್ದಾರೆ.

**ಜಿಲ್ಲೆಯ ಎಲ್ಲಾ ತಾಲ್ಲೂಕು ಆಸ್ಪತ್ರೆಗಳಲ್ಲಿ 100 ಬೆಡ್ ಇದ್ದು, ಅವುಗಳಿಗೆ ಔಷಧಿ, ಸ್ಯಾನಿಟೈಸರ್ ಸೇರಿದಂತೆ ಎಲ್ಲವನ್ನೂ ಸರಿ ಸಮಾನವಾದ ಆದ್ಯತೆ ನೀಡಲಾಗಿದೆ. ಇಲ್ಲಿನ ಸರ್ಕಾರಿ ಆಸ್ಪತ್ರೆಗೆ ಆಕ್ಸಿಜನ್ ಜನರೇಷನ್ ಪ್ಲಾಂಟ್ ಮತ್ತು ಲಿಕ್ವಿಡ್ ಆಕ್ಸಿಜನ್ ಪ್ಲಾಂಟ್ ಮಾಡುವುದಕ್ಕೆ ಸಿದ್ಧತೆ ನಡೆಸಲಾಗಿದೆ. ಇದರಿಂದಾಗಿ ಇನ್ನೂ 50 ಆಕ್ಸಿಜನ್ ಬೆಡ್ ವ್ಯವಸ್ಥೆ ಆಗುತ್ತದೆ.**

**- ಡಾ. ನಾಗರಾಜ್, ಜಿಲ್ಲಾ ಆರೋಗ್ಯಾಧಿಕಾರಿ**

ನಗರದ ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿ ಯಲ್ಲಿ ಮಾತನಾಡಿದ ಶಾಸಕರು, ಹರಿಹರ ತಾಲ್ಲೂಕಿನಲ್ಲಿ ಪ್ರತಿನಿತ್ಯ ಅಧಿಕ ಸಂಖ್ಯೆಯಲ್ಲಿ ಜನರು ಮರಣ ಹೊಂದುತ್ತಿದ್ದಾರೆ. ಆದರೆ, ಎಷ್ಟು ಜನರಿಗೆ ಕೊರೊನಾ ಪಾಸಿಟಿವ್ ಬಂದಿದೆ ಮತ್ತು ಎಷ್ಟು ಜನ ಮರಣ ಹೊಂದಿದ್ದಾರೆ ಎಂದು ಸರಿಯಾದ ಅಂಕಿ, ಅಂಶಗಳನ್ನು ಜಿಲ್ಲಾಧಿ ಕಾರಿಗಳು ನೀಡುತ್ತಿಲ್ಲ. ಇದು ಅನುಮಾನಕ್ಕೆ ಎಡೆ ಮಾಡಿಕೊಟ್ಟಿದೆ ಎಂದು ಆರೋಪಿಸಿದರು.

ಜಿಲ್ಲಾಧಿಕಾರಿಗಳು ಹೊನ್ನಾಳಿ ಮತ್ತು ಚನ್ನಗಿರಿ ತಾಲ್ಲೂಕಿನಲ್ಲಿರುವ ಆಸ್ಪತ್ರೆಗೆ ಆಕ್ಸಿಜನ್ ಹೆಚ್ಚು ಕಳಿಸಿದ್ದಾರೆ. ಆದರೆ, ಹರಿಹರ ನಗರಕ್ಕೆ ಆಕ್ಸಿಜನ್ ಕಡಿಮೆಯಾಗಿದೆ ಎಂದವರು ಹೇಳಿದರು.

ಸರ್ಕಾರ ಕೂಡ ದಿನಕ್ಕೊಂದು ಹೇಳಿಕೆಯನ್ನು ಕೊಡುತ್ತಾ, ಜನರನ್ನು ದಿಕ್ಕು ತಪ್ಪಿಸುತ್ತಿದ್ದು, ಯಾವುದೇ ರೀತಿಯ ಸೂಕ್ತ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ. ಹರಿಹರ ನಗರಕ್ಕೆ ಅನುಗುಣವಾಗಿ ಸರ್ಕಾರಿ ಆಸ್ಪತ್ರೆಯಲ್ಲಿ ಸೌಲಭ್ಯಗಳನ್ನು ಒದಗಿಸುವಲ್ಲಿ ಜಿಲ್ಲಾಡಳಿತ ವಿಫಲವಾಗಿದೆ ಎಂದು ದೂರಿದರು.

ಪಾಸಿಟಿವ್ ಬಂದವರು ಕೋವಿಡ್ ಕೇರ್ ಸೆಂಟರ್‌ಗೆ ಆಗಮಿಸುತ್ತಿಲ್ಲ. ಆಶಾ ಕಾರ್ಯಕರ್ತರು ಕರೆಯಲು ಹೋದಾಗ ಅವರಿಗೆ ಬೈದು ಹಲ್ಲೆ ಮಾಡುತ್ತಿದ್ದಾರೆ. ಇದರಿಂದಾಗಿ ತಾಲ್ಲೂಕಿನ ಒಂದೇ ಗ್ರಾಮದಲ್ಲಿ ಅಧಿಕ ಪ್ರಮಾಣದಲ್ಲಿ ಜನರು ಮರಣವನ್ನು ಹೊಂದಲು ದಾರಿಯಾಯಿತು ಎಂದರು.

ನನ್ನ ಅನುದಾನದಲ್ಲಿ ತುರ್ತಾಗಿ ಬಳಕೆ ಮಾಡಲು ಸರ್ಕಾರಿ ಆಸ್ಪತ್ರೆಗೆ 44 ಲಕ್ಷ ರೂ.ಗಳ ಯೋಜನೆ ರೂಪಿಸಿ, ಮಾನಿಟರ್ 10, ಆಕ್ಸಿಜನ್ ಸಿಲಿಂಡರ್ 50, ಆಕ್ಸಿಜನ್ ನಾಸಲ್ 50, ಆಕ್ಸಿಜನ್ ಫೇಸ್ ಮಾಸ್ಕ್ 50, ಆಕ್ಸಿಜನ್ ಫ್ಲೋ ಮೀಟರ್ 50, ಇಸಿಜಿ ಯಂತ್ರ 2, 30 ಹಾಸಿಗೆಗಳು ಸೇರಿದಂತೆ ವಿವಿಧ ವೈದ್ಯಕೀಯ ವ್ಯವಸ್ಥೆ ಮಾಡಲಾಗುತ್ತಿದೆ ಎಂದು ಹೇಳಿದರು.

ಜಿಲ್ಲಾ ಆರೋಗ್ಯಾಧಿಕಾರಿ ಡಾ. ನಾಗರಾಜ್ ಮಾತನಾಡಿ, ಮೂವರು ವೈದ್ಯರು ಮತ್ತು 3 ಸಿಬ್ಬಂದಿಗಳ ನೇಮಕ ಮಾಡಲಾಗಿದೆ. ಕಳೆದ 10 ನೇ ತಾರೀಖು ಕೆಲವು ವೈದ್ಯರ ನೇಮಕಾತಿ ಮಾಡಲಾಗಿದೆ. ಆದರೆ, ಅವರು ಇನ್ನೂ ಕೆಲಸಕ್ಕೆ ಹಾಜರಾಗಿಲ್ಲ. ಇದುವರೆಗೆ ಒಟ್ಟು 39,706 ಜನರಿಗೆ ಶೇ. 51 ರಷ್ಟು ಲಸಿಕೆಯನ್ನು ಹಾಕಲಾಗಿದೆ ಎಂದರು.

ಈ ಸಂದರ್ಭದಲ್ಲಿ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಡಾ. ಹನುಮನಾಯ್ಕ್, ಡಾ. ರಾಜಪ್ಪ, ಪಿಎಸ್‌ಐ ಸುನೀಲ್ ಬಸವರಾಜ್, ಸಲಹಾ ಸಮಿತಿ ಸದಸ್ಯ ಮಂಜುನಾಥ್, ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ವಿಜಯ ಮಾಂತೇಶ್, ಹನುಮಂತಪ್ಪ, ಎನ್.ಇ. ಸುರೇಶ್, ಕೊಟ್ರಪ್ಪ ಇನ್ನಿತರರು ಹಾಜರಿದ್ದರು.

# ಕೊರೊನಾ ನಿರ್ವಹಣೆ : ಲೋಪವಾಗಿಲ್ಲ

## ಶಾಸಕ ರಾಮಪ್ಪ ಆರೋಪಕ್ಕೆ ತಹಶೀಲ್ದಾರ್ ರಾಮಚಂದ್ರಪ್ಪ ಸ್ಪಷ್ಟನೆ



ಹರಿಹರ, ಮೇ 24- ಕೊರೊನಾ ರೋಗ ನಿರ್ವಹಣೆಯಲ್ಲಿ ತಾಲ್ಲೂಕು ಆಡಳಿತದ ವತಿಯಿಂದ ಯಾವುದೇ ಲೋಪದೋಷಗಳು ಆಗಿರುವುದಿಲ್ಲ. ಶಾಸಕ ಎಸ್. ರಾಮಪ್ಪ ಮಾಡಿರುವ ಆರೋಪಕ್ಕೆ ಸೂಕ್ತ ದಾಖಲೆಗಳ ಸಮೇತ ಬರವಣಿಗೆ ಮೂಲಕ ಮಾಹಿತಿ ನೀಡಲು ಸಿದ್ಧನಿರುವುದಾಗಿ ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ಹೇಳಿದ್ದಾರೆ.

ನಗರದ ತಹಶೀಲ್ದಾರ್ ಕಚೇರಿಯ ಸಭಾಂಗಣದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ಸರ್ಕಾರ ವಿಪತ್ತು ನಿರ್ವಹಣೆ ಸಮಯದಲ್ಲಿ ಹಣವನ್ನು ಬಿಡುಗಡೆ ಮಾಡಿದ್ದು, ಆ ಹಣದಲ್ಲಿ ರೈತರ ಬೆಳೆ ಹಾನಿ ಮತ್ತು ಮನೆಗಳಿಗೆ ಹಾನಿಯಾದ ಸಮಯದಲ್ಲಿ ಹಾಗೂ ಕೊರೊನಾ ರೋಗವನ್ನು ತಡೆಗಟ್ಟಲು ಕೋವಿಡ್ ಕೇರ್ ಸೆಂಟರ್ ತೆರೆಯಲು ಬೇಕಾಗುವ ಅಗತ್ಯ ವಸ್ತುಗಳನ್ನು ಖರೀದಿಸಲು ಮಾತ್ರ ಹಣ ಬಳಕೆ ಮಾಡುವುದಕ್ಕೆ ಸೂಚಿಸಲಾಗಿದೆ. ಅದರಂತೆ ನಾವು ಕೂಡ ಆ ಹಣದಲ್ಲಿ ಎಲ್ಲವನ್ನೂ ಪೂರೈಸುವ ಕೆಲಸವನ್ನು ಮಾಡಿರುವುದಾಗಿ ಇದರಲ್ಲಿ ಯಾವುದೇ ಮುಚ್ಚು ಮರೆ ಹಾಗೂ ಲೋಪದೋಷಗಳನ್ನು ಮಾಡಿರುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಕಡರನಾಯಕನಹಳ್ಳಿ ಗ್ರಾಮದಲ್ಲಿ ಇಪ್ಪತ್ತು ಜನರಿಗೆ ಕೊರೊನಾ ದೃಢಪಟ್ಟಿದ್ದು, ಒಬ್ಬ ವ್ಯಕ್ತಿ ಮಾತ್ರ ಮರಣ ಹೊಂದಿದ್ದಾನೆ. ಬೇರೆ ಕಾರಣದಿಂದ ಮರಣವನ್ನು ಹೊಂದಿದರೆ ಅದಕ್ಕೆ ತಾಲ್ಲೂಕು ಆಡಳಿತ ಕಾರಣವಲ್ಲ ಎಂದವರು ಹೇಳಿದ್ದಾರೆ.

ಗುತ್ತೂರು, ಎಸ್‌ಜೆವಿಪಿ ಕಾಲೇಜಿನಲ್ಲಿ 150 ಮತ್ತು ಕೊಂಡಜ್ಜಿ ಗ್ರಾಮದಲ್ಲಿ 120 ಜನರು ಸೇರಿದಂತೆ ಒಟ್ಟು 500 ಜನರಿಗೆ ಕೋವಿಡ್ ಕೇರ್ ಸೆಂಟರ್ ತೆರೆದು ಊಟ, ಶುದ್ಧ ನೀರು, ಬೆಡ್, ಗುಣಮಟ್ಟದ ಚಿಕಿತ್ಸೆ, ನಗರಸಭೆ ಯಿಂದ ಸ್ವಚ್ಛತೆ ವ್ಯವಸ್ಥೆ ಕಲ್ಪಿಸಲಾಗಿದೆ. ಅನು ಮಾನ ಇದ್ದರೆ ಪಿಪಿಇ ಕಿಟ್ ಹಾಕಿಕೊಂಡು ಹೋಗಿ ಪರಿಶೀಲನೆ ಮಾಡಿಕೊಂಡು ಬರಬಹುದು. ಸಾವಿರ ಜನರು ಸಾವಿರ ದೂರನ್ನು ನೀಡುತ್ತಾರೆ. ಅದಕ್ಕೆಲ್ಲಾ ಗಮನ ಹರಿಸುವುದಕ್ಕೆ ಸಮಯ ಇಲ್ಲ. ರಾತ್ರಿ ವೇಳೆ ಸಹ ಸಹಾಯವಾಣಿ ಕೇಂದ್ರ, ಕೋವಿಡ್ ಕೇರ್ ಸೆಂಟರ್, ಸದರನ್ ಗ್ಯಾಸ್ ಕೇಂದ್ರ, ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲಿಸಲಾಗುತ್ತಿದೆ ಎಂದರು.

ಸಂತ ಅಲೋಶಿಯಸ್ ಕಾಲೇಜು ವತಿಯಿಂದ ಒಂದು ಆಂಬ್ಯುಲೆನ್ಸ್ ನೀಡಲಾಗಿದೆ. ಸರ್ಕಾರ ಸಹ ಒಂದು ನೀಡಿದ್ದು 7829671147 ನಂ ಗೆ ಕಾಲ್ ಮಾಡಿ ಸಾರ್ವಜನಿಕರು ಪಡೆಯಬಹುದು. ಅಗತ್ಯ ಸೌಲಭ್ಯಗಳು ಬೇಕಾದ ಸಮಯದಲ್ಲಿ ಕೋವಿಡ್ ವಾರ್‌ರೂಂ 7259870608 ನಂಬರ್‌ಗೆ ಕಾಲ್ ಮಾಡಿದರೆ ಸದಾಕಾಲ ಸೇವೆ ನೀಡಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ನಗರದ ಸಾರ್ವಜನಿಕ ಆಸ್ಪತ್ರೆಗೆ ಮೆಡಿಕಲ್ ಆಕ್ಸಿಜನ್ ಸರಬರಾಜು ಆಗುವಲ್ಲಿ ಯಾವುದೇ ರೀತಿಯ ವ್ಯತ್ಯಾಸಗಳು ಆಗಿರುವುದಿಲ್ಲ. ಸದರನ್ ಗ್ಯಾಸ್ ಕೇಂದ್ರದವರು ನಾವು ಕೇಳಿದಾಗ ತಕ್ಷಣವೇ ಸ್ಪಂದಿಸುವ ಕೆಲಸವನ್ನು ಮಾಡಿದ್ದಾರೆ ಎಂದು ಮಾಹಿತಿ ನೀಡಿದರು.

ತಾಪಂ ಇ.ಓ. ಗಂಗಾಧರನ್ ಮಾತನಾಡಿ, ಗ್ರಾಮೀಣ ಪ್ರದೇಶದ 24 ಗ್ರಾ.ಪಂ.ನಲ್ಲಿ ಸ್ಯಾನಿಟೈಸ್ ಮಾಡಲಾಗಿದೆ ಎಂದು ಹೇಳಿದರು.

ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಚಂದ್ರಮೋಹನ್ ಮಾತನಾಡಿ, ತಾಲ್ಲೂಕಿನಲ್ಲಿ ಇಂದು 86 ಜನರಿಗೆ ಕೊರೊನಾ ರೋಗ ದೃಢಪಟ್ಟಿದ್ದು, ಅದರಲ್ಲಿ 81 ಜನರು ಚಿಕಿತ್ಸೆ ಪಡೆದುಕೊಂಡು ಗುಣಮುಖರಾಗಿ ಮನೆಗೆ ತೆರಳಿದ್ದಾರೆ. ಇಲ್ಲಿಯವರೆಗೆ 620 ಸಕ್ರಿಯ ಪ್ರಕರಣಗಳು ಇದ್ದು, ಅದರಲ್ಲಿ 272 ಹೋಂ ಐಸೋಲೇಷನ್‌ನಲ್ಲಿ 181 ಕೋವಿಡ್ ಕೇರ್ ಸೆಂಟರ್ ನಲ್ಲಿ, ಸಾರ್ವಜನಿಕ ಆಸ್ಪತ್ರೆಯಲ್ಲಿ 60 ಕೊರೊನಾ ರೋಗಿಗಳು ಚಿಕಿತ್ಸೆ ಪಡೆಯುತ್ತಿದ್ದಾರೆ. ಇಂದು 2000 ಸಾವಿರ ಲಸಿಕೆ ಬಂದಿದ್ದು 18 ರಿಂದ 44 ವರ್ಷದ ಹೆಲ್ತ್‌ಕೇರ್ ವಾರಿಯರ್ಸ್ ಮತ್ತು ಫ್ರಂಟ್ ಲೈನ್ ವಾರಿಯರ್ ಗಳಿಗೆ ಕೋವ್ಯಾಕ್ಸಿನ್ ಲಸಿಕೆ ಹಾಕಲಾಗುತ್ತಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಕಾರ್ಮಿಕ ಇಲಾ ಖೆಯ ಕವಿತಾ, ಎಪಿಎಂಸಿಯ ವಿದ್ಯಾ, ಸಿಡಿ ಪಿಒ ನಿರ್ಮಲ, ಪ್ರಿಯದರ್ಶಿನಿ, ಅಬಕಾರಿ ಇಲಾಖೆಯ ಶೀಲಾ, ಶಿಕ್ಷಣ ಇಲಾಖೆ ಬಸವರಾಜಯ್ಯ, ಬಿಸಿಎಂ ಇಲಾಖೆಯ ಪರವಿನ್ ಬಾನು, ಲೋಕೋಪಯೋಗಿ ಇಲಾಖೆಯ ಚಂದ್ರಕಾಂತ್ ಇತರರು ಹಾಜರಿದ್ದರು.

## ಖಾಸಗಿ ಆಸ್ಪತ್ರೆಗಳಲ್ಲಿ ಅಧಿಕ ಶುಲ್ಕ ಪಡೆದರೆ ಮಾಹಿತಿ ಕೊಡಿ : ಡಿಕೆಶಿ

ಬೆಂಗಳೂರು, ಮೇ 24 - ಖಾಸಗಿ ಆಸ್ಪತ್ರೆಗಳಲ್ಲಿ ಅಧಿಕ ಶುಲ್ಕ ಪಡೆಯುತ್ತಿದ್ದರೆ, ತಮ್ಮ ಗಮನಕ್ಕೆ ತರಬೇಕೆಂದು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸಾರ್ವಜನಿಕರಲ್ಲಿ ಮನವಿ ಮಾಡಿಕೊಂಡಿದ್ದಾರೆ. ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಸಾಮಾಜಿಕ ಜಾಲತಾಣಗಳ ಮೂಲಕ ಶುಲ್ಕದ ಮಾಹಿತಿಯನ್ನು ಗಮನಕ್ಕೆ ತನ್ನಿ. ಸುಪ್ರೀಂ ಕೋರ್ಟ್‌ನ ನಿರ್ದೇಶನವಿದ್ದರೂ ಕಾಯ್ದೆಯನ್ನು ಉಲ್ಲಂಘಿಸಿ, ಆಸ್ಪತ್ರೆಗಳು ಅಧಿಕ ಶುಲ್ಕ ಪಡೆಯು ತ್ತಿರುವುದು ಗಮನಕ್ಕೆ ಬಂದಿದೆ ಎಂದು ಹೇಳಿದ್ದಾರೆ. ಆಸ್ಪತ್ರೆ ಗಳ ಈ ಕೃತ್ಯ ಕೊನೆಯಾಗಬೇಕು. ಇಂತಹ ಸಮಸ್ಯೆ ಎದುರಿಸುತ್ತಿದ್ದರೆ, ನನ್ನ ಟ್ವೀಟರ್ ಮತ್ತು ಫೇಸ್‌ಬುಕ್‌ನಲ್ಲಿ ಟ್ಯಾಗ್ ಮಾಡಿ. ಕೂಡಲೇ ಈ ಕುರಿತು ಮಾಹಿತಿ ಪಡೆದು, ಕ್ರಮ ತೆಗೆದುಕೊಳ್ಳುವುದಾಗಿ ತಿಳಿಸಿದರು.

## ರಾಜ್ಯದಲ್ಲಿ 57,333 ಜನರು ಕೊರೊನಾದಿಂದ ಗುಣಮುಖ

ಬೆಂಗಳೂರು, ಮೇ 24 – ರಾಜ್ಯದಲ್ಲಿ ಸೋಮವಾರ 25,311 ಸೋಂಕಿತರು ಕಂಡು ಬಂದಿದ್ದರೆ, 57,333 ಜನರು ಗುಣಮುಖವಾಗಿ ಬಿಡುಗಡೆಯಾಗಿದ್ದಾರೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ. ರಾಜ್ಯದಲ್ಲಿ ಸೋಮವಾರ 529 ಸೋಂಕಿತರು ಸಾವನ್ನಪ್ಪಿದ್ದಾರೆ. ಬೆಂಗಳೂರು ನಗರ ಜಿಲ್ಲೆಯಲ್ಲಿ 5,701 ಸೋಂಕಿತರು ಕಂಡುಬಂದಿದ್ದರೆ, 34,378 ಜನ ಗುಣವಾಗಿ ಬಿಡುಗಡೆಯಾಗಿದ್ದಾರೆ. ನಗರಲ್ಲಿ 297 ಜನರು ಸಾವನ್ನಪ್ಪಿದ್ದಾರೆ. ರಾಜ್ಯದಲ್ಲಿ ಪ್ರಸಕ್ತ 4.40 ಲಕ್ಷ ಸಕ್ರಿಯ ಸೋಂಕಿತರಿದ್ದಾರೆ. ರಾಜ್ಯದಲ್ಲಿ ಪಾಸಿಟಿವ್ ದರ ಶೇ.23.28ರಷ್ಟಿದೆ.

## ಕೊರೊನಾ : ಜನರ ಮನಸ್ಸನ್ನು ಖಿನ್ನತೆಗೊಳಗಾಗಿಸುತ್ತದೆ

ಓದುಗರ ಪತ್ರ

**ಮಾನ್ಯರೇ,**

ಕೊರೊನಾದ ಹಿನ್ನೆಲೆಯಲ್ಲಿ ರಾಜಕೀಯವಾಗಿ ಪರ, ವಿರೋಧದ ಹೇಳಿಕೆಗಳು ಸಾಕಷ್ಟು ಮಾಧ್ಯಮಗಳಲ್ಲಿ ಬರುವುದು ಸರ್ವೇ ಸಾಮಾನ್ಯ. ಮುಖ್ಯಮಂತ್ರಿಗಳು ಮೊಟ್ಟ ಮೊದಲು ಮಾಡಬೇಕಾದ ಕೆಲಸ ಟಿ.ವಿ. ಮಾಧ್ಯಮವನ್ನು ಡಿ.ಡಿ-1 ಹೊರತು ಪಡಿಸಿ ಚಲನಚಿತ್ರಗಳಿಗೆ ಸೆನ್ಸಾರ್ ಮಂಡಳಿ ನೇಮಿಸಿದಂತೆ ಒಂದು ಇತಿಮಿತಿಯಲ್ಲಿ ಪ್ರಸಾರಕ್ಕೆ ಅನುಮತಿ ಕೊಡಬೇಕು ಅಥವಾ ಸದ್ಯಕ್ಕೆ ಖಾಸಗಿ ವಾಹಿನಿಗಳಿಗೆ ಲಾಕ್‌ಡೌನ್ ಮಾಡಿದರೆ ಇನ್ನು ಒಳ್ಳೆಯದು.

ಈ ವಾಹಿನಿಗಳಲ್ಲಿ ಬರುವ ಅಬ್ಬರದ ಆರ್ಭಟ ಜನರ ಮನಸ್ಸನ್ನು ಖಿನ್ನತೆಗೆ ಒಳಗಾಗಿಸುತ್ತದೆ. ರಣಕೇಕೆ, ರಣ ಕಹಳೆ, ಮರಣ ಮೃದಂಗ ಮುಂತಾದ ಪದ ಪ್ರಯೋಗದೊಂದಿಗೆ ಜನರ ತಲೆ ಕೆಟ್ಟು ಕುಡಿಕೆಯಾಗುತ್ತಿದೆ. ತಿರಗಾ ಮುರಗಾ ಹೇಳಿದ್ದನ್ನೇ ಪದೇ ಪದೇ ಏರು ಧ್ವನಿಯಲ್ಲಿ ಕೂಗಾಡಿ, ಕಿರುಚಾಡಿ ಇಲಿ ಹೋಯಿತು ಹುಲಿ ಹೋಯಿತು ಎಂದು ಕರ್ಕಶ ಧ್ವನಿ ಕೊರೊನಾ ಇಲ್ಲದವರಿಗೆ ಕೊರೊನಾ ಬರುವ ಹಂತಕ್ಕೆ ಭಯ ಹುಟ್ಟಿಸುವ ಕಾರ್ಯಾಚರಣೆಯನ್ನು ಈ ಮಾಧ್ಯಮದವರು ಮಾಡುತ್ತಿರುವುದು ನಗ್ನ ಸತ್ಯ. ಇದನ್ನು ಮೊದಲು ತಡೆಹಿಡಿಯಬೇಕಾಗಿದೆ.

ಶ್ರೀಕ್ಷೇತ್ರ ಧರ್ಮಸ್ಥಳದ ಡಾ. ಡಿ. ವೀರೇಂದ್ರ ಹೆಗಡೆ, ಜೈನ್ ಸಮುದಾಯ, ರಾಷ್ಟ್ರೀಯ ಸ್ವಯಂ ಸೇವಕ ಸಂಘ, ಕೆಲವು ಅಂತರ ರಾಷ್ಟ್ರೀಯ ಸಂಘಟನೆಗಳು ಈ ಸಂದಿಗ್ಧ ಪರಿಸ್ಥಿತಿ ಯಲ್ಲಿ ಸ್ವಯಂ ಪ್ರೇರಣೆಯಿಂದ ಯಾವುದೇ ಪ್ರಚಾರ ಬಯಸದೇ ಉದಾರತೆಯ ಸೇವೆ ಸಲ್ಲಿಸುತ್ತಿರುವುದು ಇತರೆ ಸೇವಾ ಸಂಘಟನೆಗಳಿಗೆ ಮಾದರಿ.

ಕರ್ನಾಟಕದ ಶಾಸಕರು, ಸಂಸದರು ಇಂತಹ ಕಠಿಣ ಪರಿಸ್ಥಿತಿಯಲ್ಲಿ ಬಳಲುವ ವ್ಯಾಪಾರಸ್ಥರಿಗೆ, ಆಹಾರ ಇನ್ನಿತರೆ ಗೃಹ ಬಳಕೆಯ ಅಕ್ಕಿ, ಬೇಳೆ ಮುಂತಾದ ಪಡಿತರ ಅಕ್ಕಿ ತಮ್ಮ ಮೂರು ತಿಂಗಳ ವೇತನವನ್ನು ಔದಾರ್ಯತೆಯಿಂದ ನೀಡಿದರೆ ಲಾಕ್‌ಡೌನ್ ನಲ್ಲಿ ಹತಾಶರಾದ ಬಡ ಬಗ್ಗರಿಗೆ ಉಪಕಾರವಾಗುತ್ತದೆ.

ಎಲ್ಲಾ ಆಸ್ಪತ್ರೆಗಳಿಗೆ ಉಚಿತ ಬೆಡ್, ಆಮ್ಲಜನಕ, ಲಸಿಕೆ, ಔಷಧಿಗಳನ್ನು ವಿತರಿಸುವ ನಿಟ್ಟಿನಲ್ಲಿ ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷದವರೂ ಕೈಜೋಡಿಸಿದಾಗ ಮಾನವೀಯತೆಗೆ ಅರ್ಥ ಬರುತ್ತದೆ. ವಿರೋಧ ಪಕ್ಷದವರು ಇರುವುದೇ ವಿರೋಧವಾಗಿ ಹೇಳಿಕೆ ಕೊಡುವುದು ಸರ್ವೇಸಾಮಾನ್ಯ. ಆದರೂ ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಆಡಳಿತ ಪಕ್ಷದೊಂದಿಗೆ ಕೈಜೋಡಿಸಿದಾಗ ಯಾವುದೇ ಪಕ್ಷವಾಗಲೀ ಅದಕ್ಕೆ ಮೌಲ್ಯವಿರುತ್ತದೆ. ಪ್ರತಿನಿತ್ಯ ಮಾಧ್ಯಮದವರು ನಕಾರಾತ್ಮಕ ಸುದ್ದಿ ಹರಡಿ, ಕೊರೊನಾ ಹೆಚ್ಚಳದ ಬಗ್ಗೆ ವೈಭವೀಕರಿಸುತ್ತಾರೆ. ಆದರೆ, ಎಷ್ಟು ಜನ ಗುಣಮುಖರಾದರು ಎಷ್ಟು ಜನ ಕ್ಷೇಮವಾಗಿ ಮನೆ ಸೇರಿದ್ದಾರೆ ಎನ್ನುವ ಸಕಾರಾತ್ಮಕ ಸುದ್ದಿ ಹರಿಬಿಡುವುದಿಲ್ಲ.

ಇನ್ನು ಮೊಬೈಲ್ ವ್ಯಾಟ್ಸಾಪ್‌ಗಳಲ್ಲಿ ಕೊರೊನಾದಿಂದ ನಿಧನ ಹೊಂದಿದ ಶವಗಳ ಸಂಸ್ಕಾರದ ಹೆಣದ ರಾಶಿ ಚಿತ್ರಣ ತೋರಿಸುವುದು ನಿಷೇಧಿಸಬೇಕು. ಈ ಎಲ್ಲಾ ಗೊಂದಲ ಗಳಿಂದ ಆರೋಗ್ಯವಂತ ಮನಸ್ಸಿನ ಮೇಲೆ ಪರಿಣಾಮವಾಗಿ ಖಿನ್ನತೆಗೊಳಗಾಗಿ ಸಾಯುವ ಸಂಭವವಿದೆ. ಏನೇ ಆಗಲಿ ನಾವು ನಮ್ಮ ಆರೋಗ್ಯ ಕಾಪಾಡಿಕೊಳ್ಳೋಣ ನಮ್ಮ ಜಾಗೃತಿ ನಾವು ಎಚ್ಚರದಿಂದ ನಿರ್ವಹಿಸಬೇಕಾಗಿದೆ.

**-ಸಾಲಿಗ್ರಾಮ ಗಣೇಶ್ ಶೆಣೈ,**
ದಾವಣಗೆರೆ.

# ಶ್ವಾನಗಳಿಂದ ಕೊರೊನಾ ಪತ್ತೆ ಸಾಧ್ಯ


## ಬ್ರಿಟನ್‌ನ ಅಧ್ಯಯನದಲ್ಲಿ ಶೇ.94ರಷ್ಟು ಖಚಿತವಾಗಿ ಸೋಂಕಿತರ ಪತ್ತೆ

ಲಂಡನ್, ಮೇ 24 - ಕೊರೊನಾ ವೈರಸ್ ಸೋಂಕಿತರನ್ನು ವಾಸನೆಯಿಂದಲೇ ಗುರುತಿಸಲು ಶ್ವಾನಗಳಿಗೆ ತರಬೇತಿ ನೀಡಲಾಗಿದ್ದು, ಅವುಗಳು ಸೋಂಕಿತರನ್ನು ಪತ್ತೆ ಮಾಡುವಲ್ಲಿ ಉನ್ನತ ಮಟ್ಟದ ಖಚಿತತೆ ಸಾಬೀತು ಪಡಿಸಿವೆ ಎಂದು ಬ್ರಿಟನ್‌ನ ಸಂಶೋಧನೆಯೊಂದು ತಿಳಿಸಿದೆ.

ಶ್ವಾನಗಳಿಂದ ಕೊರೊನಾ ಪತ್ತೆ ಮಾಡುವಲ್ಲಿ ಅತ್ಯಂತ ಪರಿಪೂರ್ಣವಾದ ಅಧ್ಯಯನ ಇದಾಗಿದೆ. ಲಂಡನ್ ಸ್ಕೂಲ್ ಆಫ್ ಹೈಜಿನ್ ಅಂಡ್ ಟ್ರಾಪಿಕಲ್ ಮೆಡಿಸಿನ್ (ಎಲ್‌ಎಸ್‌ಹೆಚ್‌ಟಿಎಂ) ಹಾಗೂ ಮೆಡಿಕಲ್ ಡಿಟೆಕ್ಷನ್ ಡಾಗ್ಸ್ ಅಂಡ್ ದುರ್ಹಮ್ ಯೂನಿವರ್ಸಿಟಿಗಳು ಈ ಅಧ್ಯಯನ ನಡೆಸಿವೆ.

ತರಬೇತಿ ಪಡೆದ ಶ್ವಾನಗಳು ವಾಸನೆಯ ಮೂಲಕ ಶೇ.94.3ರ ನಿಖರತೆಯಲ್ಲಿ ಸೋಂಕಿತರನ್ನು ಪತ್ತೆ ಮಾಡಿವೆ ಎಂದು ತಿಳಿಸಲಾಗಿದೆ.

ಲಕ್ಷಣ ರಹಿತರು ಹಾಗೂ ಕೊರೊನಾದ



ಎರಡು ರೂಪಾಂತರಿಗಳನ್ನು ಶ್ವಾನಗಳು ಪತ್ತೆ ಮಾಡಿವೆ. ಎರಡೂ ರೂಪಾಂತರಿಗಳಲ್ಲಿ ಹೆಚ್ಚಿನ ಹಾಗೂ ಕಡಿಮೆ ವೈರಸ್ ಇರುವಾಗಲೂ ಸೋಂಕಿತರನ್ನು ಪತ್ತೆ ಮಾಡಲಾಗಿದೆ.

ದೇಶದಲ್ಲಿ ಹೊಸ ರೂಪಾಂತರಿಗಳು ಬರುವ ಅಪಾಯ ಇರುವ ಹಿನ್ನೆಲೆಯಲ್ಲಿ, ಟೆಸ್ಟ್‌ಗಳಿಗೆ ಹೊಸ ವಿಧಾನಗಳು ಬೇಕಿವೆ. ಈ ವಿಷಯದಲ್ಲಿ ಶ್ವಾನಗಳು ಅಚ್ಚರಿಯ ಪಾತ್ರ ವಹಿಸಬಹುದು ಎಂದು ಎಲ್‌ಎಸ್‌ಹೆಚ್‌ಟಿಎಂನ ರೋಗ ನಿಯಂತ್ರಣ ವಿಭಾಗದ ಮುಖ್ಯಸ್ಥರಾದ ಪ್ರೊ. ಜೇಮ್ಸ್ ಲೊಗಾನ್ ಹೇಳಿದ್ದಾರೆ.

ಶ್ವಾನಗಳು ನೈಜ ಜಗತ್ತಿನ ಪರಿಸ್ಥಿತಿಯಲ್ಲೂ ಇದೇ ಸಾಧನೆ ಮಾಡಬಲ್ಲವೇ ಎಂಬ ಬಗ್ಗೆ ಹೆಚ್ಚಿನ ಸಂಶೋಧನೆ ನಡೆಯಬೇಕಿದೆ. ಆದರೆ, ಇದುವರೆಗೂ ದೊರೆತಿರುವ ಫಲಿತಾಂಶ ಅತ್ಯಂತ ಉತ್ತೇಜನಕಾರಿಯಾಗಿದೆ. ಈ ವಿಧಾನದಲ್ಲಿ ನಾವು ಅತ್ಯಂತ ವೇಗ ಹಾಗೂ ನಿಖರವಾಗಿ ಸೋಂಕಿತರನ್ನು ಪತ್ತೆ ಮಾಡಬಹುದು ಎಂದು ಲೊಗಾನ್ ಹೇಳಿದ್ದಾರೆ.

ಶ್ವಾನಗಳಿಗೆ 3,758 ಜನರ ಮಾಸ್ಕ್, ಸಾಕ್ಸ್ ಹಾಗೂ ಟಿ-ಶರ್ಟ್ ಸೇರಿದಂತೆ ಹಲವು ವಸ್ತುಗಳನ್ನು ಕಳಿಸಲಾಗಿತ್ತು. ಅಂತಿಮವಾಗಿ ಶ್ವಾನಗಳು ನಂಬಿಕಾರ್ಹವಾಗಿ ಸೋಂಕಿತರನ್ನು ಪತ್ತೆ ಮಾಡಿವೆ ಎಂದು ಮೆಡಿಕಲ್ ಡಿಟೆಕ್ಷನ್ ಡಾಗ್ಸ್‌ನ ಮುಖ್ಯ ವೈಜ್ಞಾನಿಕ ಅಧಿಕಾರಿ ಡಾ. ಕ್ಲಾರೆ ಗೆಸ್ಟ್ ಹೇಳಿದ್ದಾರೆ.

ಎರಡು ಶ್ವಾನಗಳು ಅರ್ಧ ಗಂಟೆಯಲ್ಲಿ 300ಕ್ಕೂ ಹೆಚ್ಚು ಜನರನ್ನು ತಪಾಸಣೆ ಮಾಡಬಲ್ಲವು. ಹೀಗಾಗಿ ಶ್ವಾನ ತಪಾಸಣೆ ಬಂದರು ಹಾಗೂ ವಿಮಾನ ನಿಲ್ದಾಣಗಳಲ್ಲಿ ಹೆಚ್ಚು ಉಪಯುಕ್ತವಾಗಿದೆ ಎಂದವರು ತಿಳಿಸಿದ್ದಾರೆ.

# ಗ್ರಾಮಸ್ಥರಿಗೆ ಪೊಲೀಸರಿಂದ ಜಾಗೃತಿ ಪಾಠ, ಪ್ರತಿಜ್ಞೆ ಬೋಧನೆ



ದಾವಣಗೆರೆ, ಮೇ 24- ಚನ್ನಗಿರಿ ತಾಲ್ಲೂಕು ಸಂತೇಬೆನ್ನೂರು ಸಮೀಪದ ಸಿದ್ಧಪುರುಷರ ಪುಣ್ಯಕ್ಷೇತ್ರ ನಾಗೇನಹಳ್ಳಿ ಗ್ರಾಮದಲ್ಲಿ ಪೊಲೀಸ್ ಇಲಾಖೆ ವತಿಯಿಂದ ವಿಶೇಷ ಕೊರೊನಾ ಜಾಗೃತಿ ಮತ್ತು ನಿಯಮ ಪಾಲನೆ ಪ್ರತಿಜ್ಞಾ ವಿಧಿ ಅಭಿಯಾನ ನಡೆಸಲಾಯಿತು.

ಸಂತೇಬೆನ್ನೂರು ಪಿಎಸ್ಐ ಶಿವರುದ್ರಪ್ಪ ಮೇಟಿ ನೇತೃತ್ವದಲ್ಲಿ ಗ್ರಾಮಸ್ಥರಿಗೆ ಕೊರೊನಾ ಮುಂಜಾಗ್ರತಾ ನಿಯಮ ಪಾಲನೆ ಪ್ರತಿಜ್ಞಾ ವಿಧಿ ಬೋಧಿಸಲಾಯಿತಲ್ಲದೇ, ನಿಯಮಗಳ ಬಗ್ಗೆ ಜಾಗೃತಿ ಮೂಡಿಸಲಾಯಿತು. ತನ್ನೊಳಗೆ ತಾನೇ ಇಳಿದು, ತನ್ನನ್ನೇ ತಾನು ಅರಿತು, ಜೀವನ ನಡೆಸಿದರೆ ನಮ್ಮ ಜೀವನ ನಮ್ಮ ಕೈಯಲ್ಲಿ ಇರುತ್ತದೆ ಎಂದು ಶಿವರುದ್ರಪ್ಪ ಮೇಟಿ ತಿಳಿಸಿದರು.

ಪ್ರತಿಯೊಬ್ಬ ಪ್ರಜೆಯೂ ಸಾಮಾಜಿಕ ಅಂತರ, ಮಾಸ್ಕ್, ಸ್ಯಾನಿಟೈಸರ್ ಬಳಸುವುದು ಮತ್ತು ಅನಾವಶ್ಯಕವಾಗಿ ಓಡಾಟ ಮಾಡಬಾರದು, ಹೊರಗಿನಿಂದ ಬಂದವರಿಗೆ ಕೊರೊನಾ ಟೆಸ್ಟ್ ಮಾಡಿಸುವುದು, ಗುಂಪಾಗಿ ಸೇರಬಾರದು, ಯಾರು ಯಾರ ಮನೆಗೂ ಹೋಗಬಾರದು, ಸರ್ಕಾರದ ನಿಯಮಗಳನ್ನು ಚಾಚೂ ತಪ್ಪದೇ ಮಾಡುವುದಾಗಿ ಸಾರ್ವಜನಿಕರಿಂದ ಪ್ರತಿಜ್ಞಾ ವಿಧಿ ಸ್ವೀಕರಿಸಿದರು. ಜಾಗೃತಿ ಅಭಿಯಾನವನ್ನು ವ್ಯಾಪ್ತಿಯ 46 ಹಳ್ಳಿಗಳಲ್ಲೂ ನಡೆಸಲಾಗುವುದು ಎಂದು ಹೇಳಿದರು.

ಈ ವೇಳೆ ಜಿಲ್ಲಾ ರೈತ ಸಂಘದ ಅಧ್ಯಕ್ಷ ಹಾಲಪ್ಪ, ಗಾನಯೋಗಿ ಪರಿಷತ್ ರಾಜ್ಯ ಕಾರ್ಯದರ್ಶಿ ಎಂ.ಬಿ. ನಾಗರಾಜ್ ಕಾಕನೂರು, ಗ್ರಾಮ ಪಂಚಾಯಿತಿ ಸದಸ್ಯ ಜಗದೀಶ್, ಚನ್ನಕೇಶವ, ಸ್ವಾಮಿ, ಲಿಂಗನಗೌಡ, ತಿಮ್ಮಣ್ಣ, ಕಿಟ್ಟಪ್ಪ, ಪೊಲೀಸ್ ಸಿಬ್ಬಂದಿ ಸೋಮಣ್ಣ, ಅಂಜನಪ್ಪ ಇದ್ದರು.

# ಸಂತ ಅಲೋಶಿಯಸ್ ಪ.ಪೂ ಕಾಲೇಜಿನಿಂದ ಆಂಬ್ಯುಲೆನ್ಸ್ ಕೊಡುಗೆ



**ಹರಿಹರ**

ಹರಿಹರ, ಮೇ 24- ಇಲ್ಲಿನ ಸಂತ ಅಲೋಶಿಯಸ್ ಪದವಿ ಪೂರ್ವ ಕಾಲೇಜಿನ ವತಿಯಿಂದ ಆಂಬ್ಯುಲೆನ್ಸ್ ವಾಹನವನ್ನು ತಾಲ್ಲೂಕು ಆಡಳಿತದ ಸುಪರ್ದಿಗೆ ಹಸ್ತಾಂತರ ಮಾಡಲಾಯಿತು. ಕೊರೊನಾ ಸೋಂಕು ದಿನ ದಿಂದ ದಿನಕ್ಕೆ ಹೆಚ್ಚುತ್ತಿದ್ದು, ಬಡವರು, ನಿರ್ಗತಿಕರು, ವಲಸೆ ಕುಟುಂಬಗಳು, ಕೂಲಿ ಕಾರ್ಮಿಕರು, ಬೀದಿ ಬದಿ ವ್ಯಾಪಾರಿಗಳು ಆರ್ಥಿಕ ಸಂಕಷ್ಟಕ್ಕೀ ಡಾಗಿದ್ದಾರೆ. ರೋಗಿಗಳನ್ನು ಆಸ್ಪತ್ರೆಗೆ ಕರೆದೊಯ್ಯಲು ಹರಸಾಹಸ ಪಡುತ್ತಿ ದ್ದಾರೆ. ಈ ಪರಿಸ್ಥಿತಿ ಅರಿತ ಸಂತ ಅಲೋಶಿಯಸ್ ಕಾಲೇಜು ಆಡಳಿತ ಮಂಡಳಿ ಬಡವರ ಸೇವೆಗಾಗಿ ಆಂಬ್ಯುಲೆನ್ಸ್ ವಾಹವನ್ನು ಉಚಿತವಾಗಿ ನೀಡಿದ್ದಾರೆ.

ಚಿತ್ರದುರ್ಗದ ಡಾನ್‌ಬಾಸ್ಕೋ ಸಂಸ್ಥೆ ಹಾಗೂ ಬೆಂಗಳೂರು ರೂರಲ್ ಎಜುಕೇಷನ್ ಅಂಡ್ ಡೆವಲಪ್‌ಮೆಂಟ್ ಸೊಸೈಟಿಯ ಸಹಯೋಗದಲ್ಲಿ ಈ ವಾಹವನ್ನು ಹಸ್ತಾಂತರಿಸಲಾಗಿದೆ.

ಈ ಸಂದರ್ಭದಲ್ಲಿ ತಹಶೀಲ್ದಾರ್ ಕೆ.ಬಿ.ರಾಮಚಂದ್ರಪ್ಪ, ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಚಂದ್ರಮೋಹನ್, ತಾ.ಪಂ. ಇಒ ಜಿ.ಡಿ ಗಂಗಾಧರನ್, ಕಾಲೇಜಿನ ಮುಖ್ಯಸ್ಥ ಫಾ.ರಾಯಪ್ಪ, ಪ್ರಾಂಶುಪಾಲ ಸನ್ನಿಗುಡಿನೋ, ದೈಹಿಕ ಶಿಕ್ಷಣ ನಿರ್ದೇಶಕ ಟಿ.ಎಸ್.ಮಂಜುನಾಥ್ ಮತ್ತಿತರರು ಉಪಸ್ಥಿತರಿದ್ದರು.


# ಮನೆಯಿಂದಲೇ ಜನಾಗ್ರಹ ಆಂದೋಲನ



ದಾವಣಗೆರೆ, ಮೇ 24- ಜನಾಗ್ರಹ ಆಂದೋಲನದಿಂದ ನಾವು ಬದುಕಬೇಕು ಕರೆಯನ್ನು ಬೆಂಬಲಿಸಿ ಮನೆಯಿಂದಲೇ ಖಾಲಿ ತಟ್ಟೆ ಪಾತ್ರೆಯನ್ನು ತೋರಿಸುವ ಮೂಲಕ ಇಂದು ಪ್ರತಿಭಟನೆ ನಡೆಸಲಾಯಿತು. ಜಿಲ್ಲೆಯಲ್ಲಿ ವಿವಿಧ ಸಂಘಟನೆಗಳು ಈ ಪ್ರತಿಭಟನೆಯನ್ನು ಹಮ್ಮಿಕೊಂಡಿದ್ದು, ಈ ಸಂಘಟನೆಗಳ ಕಾರ್ಯಕರ್ತರು ತಮ್ಮ ತಮ್ಮ ಮನೆಯ ಮುಂಭಾಗದಲ್ಲಿ ಭಿತ್ತಿ ಪತ್ರ, ತಟ್ಟೆ ಪಾತ್ರೆಗಳನ್ನು ಹಿಡಿದು ಸರ್ಕಾರದ ಗಮನ ಸೆಳೆದವು.

ನಗರದ ನೆರಳು ಬೀಡಿ ಕಾರ್ಮಿಕರ ಯೂನಿಯನ್ ಈ ಹೋರಾಟ ಬೆಂಬಲಿಸಿ ಬಾಷಾ ನಗರ, ಎಸ್‌ಎಸ್‌ಎಂ ನಗರ, ಶಿವಾನಗರ, ಮಹಬೂಬ್ ನಗರ, ಹೆಚ್‌ಕೆಜಿಎನ್ ನಗರ, ಕಾರ್ಲ್‌ಮಾರ್ಕ್ಸ್ ನಗರ, ಟಿಪ್ಪು ನಗರ ಸೇರಿದಂತೆ ಬೀಡಿ ಕಾರ್ಮಿಕರ ಕಾಲೋನಿಯಲ್ಲಿ ಪ್ರತಿಭಟನೆಗೆ ಬೆಂಬಲ ವ್ಯಕ್ತವಾಯಿತು. ನೆರಳು ಬೀಡಿ ಕಾರ್ಮಿಕರ ಯೂನಿಯನ್ ಮುಖಂಡರಾದ ಜಬೀನಾ ಖಾನಂ, ಶಿರಿನ್ ಬಾನು, ನಾಜೀಮ, ನಾಹೇರ ಸೇರಿದಂತೆ ಮಹಿಳೆಯರು ಭಾಗವಹಿಸಿದ್ದರು.

# ಕಾರ್ಮಿಕರಿಗೆ 10 ಸಾವಿರ ರೂ. ನೆರವಿನ ಪ್ಯಾಕೇಜ್ ಘೋಷಿಸಲು ಒತ್ತಾಯ



ದಾವಣಗೆರೆ, ಮೇ 24- ರಾಜ್ಯ ಸರ್ಕಾರ ಘೋಷಿಸಿರುವ 2 ಸಾವಿರ, 3 ಸಾವಿರ ಪರಿಹಾರ ಯಾವುದೇ ಅನುಕೂಲಕರವಾಗಿಲ್ಲ. ಆದ್ದರಿಂದ ರಾಜ್ಯ ಸರ್ಕಾರ ಕಾರ್ಮಿಕ ವರ್ಗಕ್ಕೆ ಕನಿಷ್ಟ 10 ಸಾವಿರ ರೂ. ಘೋಷಣೆ ಮಾಡಬೇಕು ಎಂದು ಜಿಲ್ಲಾ ಕಾಂಗ್ರೆಸ್ ಕಾರ್ಮಿಕ ವಿಭಾಗದ ಜಿಲ್ಲಾ ಅಧ್ಯಕ್ಷ ಹೆಚ್. ಸುಭಾನ್ ಸಾಬ್ ಅವರು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆ. ಈ ವೇಳೆ ಹಿರಿಯ ಉಪಾಧ್ಯಕ್ಷ ಡಿ.ಜಿ.ಆಸೀಫ್ ಆಲಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ತಾಜಮ್ಮುಲ್ ಇದ್ದರು.

# ಮಕ್ಕಳ ಲೋಕದಲ್ಲಿ ಮಾಸ್ಕ್ ವಿತರಣೆ

ದಾವಣಗೆರೆ, ಮೇ 24- ನಗರದ ಶ್ರೀ ಸಿದ್ಧಗಂಗಾ ಮಕ್ಕಳ ಲೋಕದ ಬಡ ಹಾಗೂ ಕಾರ್ಮಿಕ ಮಕ್ಕಳಿಗೆ ಉಚಿತವಾಗಿ ಮಾಸ್ಕ್ ವಿತರಣೆ ಮಾಡಲಾಯಿತು. ಬ್ಯಾಂಕ್ ನೌಕರರ ಸಂಘದಿಂದ ಮಕ್ಕಳಿಗೆ ಕೊರೊನಾ ಜಾಗೃತಿ ಮೂಡಿಸಲಾಯಿತು. ಆನಂದ ಮೂರ್ತಿ ಅಧ್ಯಕ್ಷತೆ ವಹಿಸಿದ್ದರು. ಬ್ಯಾಂಕಿನ ಸಂಸ್ಥಾಪನಾ ದಿನಾಚರಣೆ ಕುರಿತು ಪ್ರಧಾನ ಕಾರ್ಯದರ್ಶಿ ರಾಘವೇಂದ್ರ ನಾಯರಿ, ಮಕ್ಕಳ ಆರೋಗ್ಯ ಕುರಿತು ಕಾರ್ಯದರ್ಶಿ ತಿಪ್ಪೇಸ್ವಾಮಿ, ವಿಶ್ವನಾಥ್ ಬಿಲ್ಲವ, ಆಂಜನೇಯ ಮಾತನಾಡಿದರು.

ಮಕ್ಕಳ ಲೋಕದ ನಿರ್ದೇಶಕ ಸಾಲಿಗ್ರಾಮ ಗಣೇಶ್ ಶೆಣೈ ನಿರೂಪಿಸಿದರು. ರಮೇಶ್, ಶಶಿ ಶೇಖರ್ ಮಾಸ್ಕ್ ವಿತರಿಸಿದರು. ಮಕ್ಕಳ ಲೋಕದ ಪ್ರಾಚಾರ್ಯರಾದ ರುದ್ರಾಕ್ಷಿ ಬಾಯಿ, ನಿರ್ದೇಶಕರಾದ ರುಕ್ಮಾಬಾಯಿ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು.

ಜಿಲ್ಲಾ ಬ್ಯಾಂಕ್ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ರಾಘವೇಂದ್ರ ನಾಯರಿ ಅವರಿಗೆ ಆಪತ್ಬಾಂಧವ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸಂಸ್ಥಾಪಕ ಕೆ.ಎನ್. ಸ್ವಾಮಿ ಮಕ್ಕಳಿಗೆ ಸಹಾಯ, ಮಾರ್ಗದರ್ಶನ ಮಾಡುತ್ತಿರುವ ಸರ್ವರಿಗೂ ಕೃತಜ್ಞತೆ ಸಲ್ಲಿಸಿದರು. ಉಪಾಧ್ಯಕ್ಷ ಹೆಚ್. ಆಂಜನೇಯ ಅವರ ಹುಟ್ಟುಹಬ್ಬ ಆಚರಿಸಿದರು. ನಿತ್ಯಶ್ರೀ ಕೊಂತಿಕಲ್ ಕೊರೊನಾ ಜಾಗೃತಿ ಮೂಡಿಸಿದರು. ಮಕ್ಕಳ ಲೋಕದ ಅಧ್ಯಕ್ಷ ಎನ್. ಪುಟ್ಟಾ ನಾಯ್ಕ, ಅತಿಥಿಗಳಾಗಿ ಸುಮತಿ ಜಯಪ್ಪ, ಸಿ.ಜಿ. ಜಗದೀಶ್, ಬಿ.ವಿ. ಪರಿಮಳ, ಪಂಕಜಾಕ್ಷಿ, ಉಪನ್ಯಾಸಕ ಎಂ.ಎಸ್. ಬಕ್ಕೇಶ್ ಆಗಮಿಸಿ, ಸಲಹೆ ನೀಡಿದರು.

# 'ಜಾನಪದ ಜೋಗಿ' ಬಾರಿಕರ ಕರಿಯಪ್ಪ

ಸರಿಸುಮಾರು 32 (1986-89) ವರ್ಷಗಳ ಹಿಂದೆ ಚಿತ್ರದುರ್ಗ ಜಿಲ್ಲಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾಗಿದ್ದರು. ಆಗ ನಾನಿನ್ನೂ ಹೈಸ್ಕೂಲ್ ವಿದ್ಯಾರ್ಥಿ. ಸಿರಿಗೆರೆಯಲ್ಲಿ ನಡೆಯುತ್ತಿದ್ದ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಬಾರಿಕರ ಕರಿಯಪ್ಪನವರ ಹಾಜರಿ ಇದ್ದೇ ಇರುತ್ತಿತ್ತು. ಶಾಲಾ ವಾರ್ಷಿಕೋತ್ಸವ, ಗಣಪತಿ ಉತ್ಸವ ಯಾವುದೇ ಇರಲಿ ಕರಿಯಪ್ಪ ಅಲ್ಲಿ ಹಾಡುತ್ತಿದ್ದುದು ಈಗಲೂ ಸಹ ನಿನ್ನೆ ಮೊನ್ನೆ ಕೇಳಿದಂತೆ ಭಾಸವಾಗುತ್ತಿದೆ. ಅವರು ಹಾಡುತ್ತಿದ್ದ ಸಾಲು ಸಾಲು ಜನಪದ ಗೀತೆಗಳಿಗೆ ಪ್ರೇಕ್ಷಕರ ಕರತಾಡನವೂ ಜೊತೆಗೂಡಿ ಗಂಧರ್ವ ಲೋಕವನ್ನೇ ಸೃಷ್ಟಿಸಿದಂತಿರುತ್ತಿತ್ತು. ಕೆಲವು ಸಲ ತಮ್ಮ ಮಕ್ಕಳನ್ನೂ ಅಲ್ಲಿಗೆ ಕರಕೊಂಡು ಬಂದು ಹಾಡಿಸುತ್ತಿದ್ದರು.

ಕರಿಯಪ್ಪನವರೇ ಸಂಗ್ರಹಿಸಿ, ಮೂಲ ದಾಟಿಯಲ್ಲಿಯೇ ಹಾಡುತ್ತಿದ್ದ "ಹರಿಹರಕೆ ಹೋಗಿದ್ದೆನಪ್ಪ, ಎತ್ತು ಮಾರಿಕೊಂಡು ಬರುತ್ತಿದ್ದೆನಪ್ಪ, ಸಂತೇ ಬೀದಿಲಿ ನಿಂತಿದ್ದಳಪ್ಪ, ಯಾವೂರಂತಾ ಕೇಳಿದಳಪ್ಪ..... ಈ ಮೋಜಿನ ಹುಡಿಗಿದು ಏನು ಮೋಜಿಂದೇನು ಠೀಕಣ್ಣ..." ಕೋಲಾಟದ ಪದ ಅವರು ಹಾಡುತ್ತಿದ್ದ ಪ್ರಸಿದ್ಧ ಹಾಡು. ಈ ಹಾಡನ್ನು ಕೇಳುತ್ತಿದ್ದರೆ ಮೋಡಿಗೆ ಒಳಗಾಗದವರೇ ಇಲ್ಲ. ಅವರು ವೇದಿಕೆ ಹತ್ತಿದರೆಂದರೆ ಈ ಹಾಡನ್ನು ಹಾಡಲೇಬೇಕು. ಈ ಹಾಡಿನಿಂದಲೇ ತುಂಬಾ ಪ್ರಸಿದ್ಧರಾಗಿದ್ದ ಕರಿಯಪ್ಪ, ಪ್ರೇಕ್ಷಕರ ಪ್ರೀತಿ ಪೂರ್ವಕ ಒತ್ತಾಯಕ್ಕೆ ತಲೆಬಾಗುತ್ತಿದ್ದರು. ಯುವಕರನ್ನು ನಾಚಿಸುವ ಹುರುಪು ಉತ್ಸಾಹ. ನಿಂತಲ್ಲಿಯೇ ಹೆಜ್ಜೆ ಹಾಕುತ್ತಾ ಶುದ್ಧ ಜನಪದ ಶೈಲಿಯಲ್ಲಿಯೇ ಹಾಡುತ್ತಿದ್ದ ಕರಿಯಪ್ಪನವರದು ಹೆಸರಿನಂತೆಯೇ ಮೈಬಣ್ಣ, ಆಡುಭಾಷೆಯ ಸೊಗಡು, ಜುಬ್ಬಾ, ಲುಂಗಿ; ಬಯ್ತುಂಬಾ ಎಲೆ ಅಡಿಕೆ. ಮಾತು ಮಾತಿಗೂ ಜನಪದ ಗೀತೆಗಳ ಝಲಕ್.

ಕರಿಯಪ್ಪನವರ ಕಂಠಸಿರಿ ಜನ್ಮದತ್ತವಾದುದು. ಚಿಕ್ಕಂದಿನಲ್ಲಿಯೇ ತಾಯಿ ಹಾಡುತ್ತಿದ್ದ ಬೀಸುಕಲ್ಲಿನ ಪದ, ಸೋಬಾನೆ ಪದಗಳು, ಊರಿನ ಹಿರಿಯರು ಹಾಡುತ್ತಿದ್ದ ಕೋಲಾಟ ಪದಗಳಿಂದ ಪ್ರಭಾವಿತರಾಗಿ ಹಾಡುವುದನ್ನು ಕಲಿತಿದ್ದರು.



ಇವರು ಹುಟ್ಟಿದ್ದು ವರದಾ ಮತ್ತು ತುಂಗಭದ್ರಾ ನದಿಗಳ ಸಂಗಮ ಸ್ಥಳ ಗಳಗನಾಥದಲ್ಲಿ. ತಂದೆ ಲಕ್ಷ್ಮಪ್ಪ ಬಾರ್ಕಿ, ತಾಯಿ ಎಲ್ಲವ್ವ. ಮೈಸೂರು ವಿಶ್ವವಿದ್ಯಾಲಯದಿಂದ ಸಮಾಜಶಾಸ್ತ್ರದಲ್ಲಿ ಸ್ನಾತಕೋತ್ತರ ಪದವೀಧರರಾದರು. ಮಾನಸ ಗಂಗೋತ್ರಿಯಲ್ಲಿ ಓದುತ್ತಿರುವಾಗ ಶ್ರೀಕಂಠದತ್ತ ನರಸಿಂಹರಾಜ ಒಡೆಯರು, ದೇವನೂರು ಮಹಾದೇವ, ಕೃಷ್ಣ ಆಲನಹಳ್ಳಿಯವರ ಒಡನಾಟದ ನೆನಪುಗಳನ್ನು, ಅಲ್ಲಿಯ ಸಾಹಿತ್ಯಿಕ, ಸಾಂಸ್ಕೃತಿಕ ವಾತಾವರಣವನ್ನು ಆಗಾಗ ಮೆಲುಕು ಹಾಕುತ್ತಿದ್ದರು.

ಪದವಿ ಪೂರ್ವ ಕಾಲೇಜಿನಲ್ಲಿ ಉಪನ್ಯಾಸಕರಾಗಿದ್ದ ಕರಿಯಪ್ಪನವರು, ಮೇಷ್ಟ್ರಾಗಿ ಹೆಸರು ಮಾಡಿದ್ದಕ್ಕಿಂತ ಹಾಡುಗಾರರಾಗಿ, ಕಲಾ ಪೋಷಕರಾಗಿ ಚಿರಪರಿಚಿತರು. ಅವಿಭಜಿತ ಚಿತ್ರದುರ್ಗ ಮತ್ತು ಶಿವಮೊಗ್ಗ ಜಿಲ್ಲೆಗಳ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರಾಗಿ ಇವರ ಸೇವೆ ಅನನ್ಯವಾದುದು. ಆಡಳಿತ ಭಾಷೆಯಾಗಿ ಕನ್ನಡ ಅನುಷ್ಠಾನ ಶಿಬಿರ, ಭಾಷಾ ಅಲ್ಪ ಸಂಖ್ಯಾತರಿಗೆ ಆಡಳಿತ ಭಾಷೆಯ ತರಬೇತಿ ಕಾರ್ಯಾಗಾರ, ಯುವಜನ ಮೇಳ, ನಾಟಕೋತ್ಸವಗಳನ್ನು ಸಂಘಟಿಸಿ ಜನಮನ್ನಣೆ ಪಡೆದಿದ್ದರು. ಎಲೆ ಮರೆಯ ಕಾಯಿಗಳಂತಹ ಕಲಾವಿದರನ್ನು ಗುರುತಿಸಿ, ವೇದಿಕೆ ಕಾರ್ಯಕ್ರಮ ಏರ್ಪಡಿಸುವುದು, ಮಾಸಾಶನ ಕೊಡಿಸುವುದು, ಪ್ರಶಸ್ತಿಗೆ ಶಿಫಾರಸ್ಸು ಮಾಡುವುದರ ಮೂಲಕ ಕಲಾವಿದರಿಗೆ ಮಾರ್ಗದರ್ಶಕರಾಗಿದ್ದರು. ಇವರ ಕರ್ತವ್ಯ, ಸೇವಾ ಮನೋಭಾವವನ್ನು ಕಂಡು ಹಾ. ಮಾ. ನಾಯಕ, ಶಿವರಾಮ ಕಾರಂತರಾದಿಯಾಗಿ ಮೆಚ್ಚುಗೆ ವ್ಯಕ್ತಪಡಿಸಿದ್ದರು.

ಆಧುನಿಕ ಬದುಕಿನ ನಡುವೆ ಜನಪದ ಹಾಡು, ಸಂಗೀತ ಕಣ್ಮರೆಯಾಗುತ್ತಿವೆ. ಅವುಗಳನ್ನು ಮೂಲ ಮಟ್ಟಗಳಲ್ಲಿಯೇ ಉಳಿಸಿಕೊಳ್ಳಬೇಕೆಂದು ಅದೇ ಧಾಟಿಯಲ್ಲಿಯೇ ಹಾಡುತ್ತಿದ್ದರು. ನಿವೃತ್ತಿಯ ನಂತರ ಶಾಲಾ-ಕಾಲೇಜುಗಳ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ವಿದ್ಯಾರ್ಥಿಗಳಿಗೆ ಜನಪದ ಬದುಕಿನ ರೀತಿನೀತಿಗಳನ್ನು ಕುರಿತು ಉಪನ್ಯಾಸ ನೀಡುತ್ತಿದ್ದರು. ಜನಪದ ಹಾಡುಗಳನ್ನು ಪ್ರಾತ್ಯಕ್ಷಿಕೆಯ ಮೂಲಕ ಪರಿಚಯಿಸುತ್ತಿದ್ದರು.

'ಕೋಲೆ ಮಾತಾಡುತಾವ, ಬೆಳ್ಳಿಯ ಗೆಜ್ಜೆ ಮಾತಾಡುತಾವ', ಭಾಗ್ಯದ ಬಳೆಗಾರ ಹೋಗಿ ಬಾ ನನ್ನ ತವರಿಗೆ ಮುಂತಾದ ಜನಪ್ರಿಯ ಹಾಡುಗಳ ಜೊತೆಗೆ 'ದಂಡು ದಳವೈತಿ ನೋಡಣ್ಣ ನಮ್ಮ ದುಂಡು ಮುದ್ದು ಮದಕರಿ ಭೂಪಾಲನ ಧವಳ ಸುಂದರ ನೋಡಣ್ಣಾ..' ಈ ಮೋಜಿನ ಹುಡುಗಿಯದು, ಏನು ಮೋಜಿಂದೇನು ಠೀಕಣ್ಣ.... ತಾವೇ ಸಂಗ್ರಹಿಸಿದ ಹಾಡುಗಳನ್ನು ಹಾಡಿ ಜನಪ್ರಿಯಗೊಳಿಸಿದ್ದರು. ಜನಪದ ಹಾಡುಗಳಂತೆ 'ಸೋಮೇಶ್ವರ ಶತಕ'ವು ಕೂಡ ಇವರಿಗೆ ಕಂಠಸ್ಥವಾಗಿತ್ತು. ವಯಸ್ಸು 75ರ ಆಸುಪಾಸಿನಲ್ಲಿದ್ದರೂ ಕಂಠ ಮಾತ್ರ ಕಿಲುಬಿನಷ್ಟೂ ಮುಪ್ಪಾಗಿರಲಿಲ್ಲ. ಅದಕ್ಕಾಗಿ ಅವರ ಎಲ್ಲಾ ಹಾಡುಗಳನ್ನು ವಿಡಿಯೋ ಮಾಡುವ ಉದ್ದೇಶ ಹೊಂದಿದ್ದೆ. ಅದಕ್ಕಾಗಿ ಕಳೆದ ವರ್ಷ ಎರಡು ಹಾಡುಗಳನ್ನು ವಿಡಿಯೋ ಮಾಡಿ ಯೂಟ್ಯೂಬ್‌ಗೆ ಸೇರಿಸಿದ್ದೆ. ಅದನ್ನು ನೋಡಿ ತುಂಬಾ ಸಂಭ್ರಮ ಪಟ್ಟಿದ್ದರು. ಅದೇ ಸಂಭ್ರಮದಲ್ಲಿರುವಷ್ಟರಲ್ಲಿ ಕೊರೊನಾ ಮಾರಿ ಒಕ್ಕರಿಸಿ, ಉಳಿದವುಗಳನ್ನು ವಿಡಿಯೋ ಮಾಡಲಾಗಲಿಲ್ಲ.

ಕಂಡಾಗಲೆಲ್ಲ ಹೆಗಲ ಮೇಲೆ ಕೈ ಹಾಕಿ, ಅಪ್ಪಟ ಗ್ರಾಮೀಣ ಶೈಲಿಯಲ್ಲಿ ಮಾತನಾಡಿಸುವುದು ಅವರ ಖಯ್ಯಾಲಿಯಾಗಿತ್ತು. ಕರ್ನಾಟಕ ಏಕೀಕರಣದ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಜಾನಪದ ಜಾತ್ರೆ ಸಮಿತಿಯ ಸದಸ್ಯರಾಗಿ ಅವರೊಂದಿಗೆ ಕೆಲಸ ಮಾಡುವ ಅವಕಾಶ ದೊರಕಿತ್ತು. ದಾವಣಗೆರೆಯಂತಹ ವಾಣಿಜ್ಯ ನಗರದಲ್ಲಿ ನೆಲೆನಿಂತರೂ ತನ್ನ ಜನಪದ ಬನಿಯ ಆಡುಭಾಷೆಯ ಸೊಗಡನ್ನು ಹಾಗೆಯೇ ಉಳಿಸಿಕೊಂಡಿದ್ದು ಇವರ ವಿಶೇಷ.

ಹಮ್ಮುಬಿಮ್ಮುಗಳಿಲ್ಲದ ಈ ಸರಳ ವ್ಯಕ್ತಿ ಮನುಷ್ಯ ಸಹಜ ದೌರ್ಬಲ್ಯದಿಂದ ಒಂದಿಷ್ಟು ಕಾಲ ಕುಟುಂಬ, ಸಮಾಜದ ಅವಹೇಳನಕ್ಕೆ ಗುರಿಯಾಗಿದ್ದರು. ಆದರೆ ಶರಣರ 'ಅರಿವೇ ಗುರು' ಎಂಬ ಮಾತಿನಂತೆ ಎಚ್ಚೆತ್ತುಕೊಂಡು, ಆರೋಗ್ಯವಂತ ದೇಹ-ಮನಸ್ಸುಳ್ಳ ಘನ ವ್ಯಕ್ತಿತ್ವದಿಂದ ಸರ್ವಾದರಣೀಯರಾಗಿದ್ದರು.

ಪ್ರಶಸ್ತಿ, ಪ್ರಚಾರಗಳಿಂದ ದೂರ ಉಳಿದಿದ್ದ ಕರಿಯಪ್ಪನವರನ್ನು ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಅನೇಕ ಗೌರವಗಳು ಹುಡುಕಿಕೊಂಡು ಬಂದಿದ್ದವು.

ಇವರ ಅಭಿಜಾತ ಪ್ರತಿಭೆಯನ್ನು ಗುರುತಿಸಿ, ಚಂದನ ದೂರದರ್ಶನದ 'ಸಿರಿಗಂಧ' ಜಾನಪದ ಧಾರಾವಾಹಿಯವರು ಹಾಡುಗಳನ್ನು ಚಿತ್ರೀಕರಣ ಮಾಡಿ, ಪ್ರಸಾರ ಮಾಡಿದ್ದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರಿಂದ 'ನೆಲದ ಸಿರಿ' ಮಾಲಿಕೆಯಲ್ಲಿ ಇವರ ಜೀವನ ಸಾಧನೆ ಕುರಿತ ಸಾಕ್ಷ್ಯಚಿತ್ರ ಮಾಡಲಾಗಿದೆ.

ಸದಾ ಹೇರ್ ಡ್ರೈ ಹಾಕಿ ತೀಡಿದ ಕ್ರಾಪ್, ಉದ್ದನೆಯ ಜುಬ್ಬಾ, ಪಂಚೆಯ ಈ ಜವಾರಿ ಜನಪದ ಜೋಗಿ ಈಗ ಕೇವಲ ನೆನಪು ಮಾತ್ರ.

**- ನಾಗರಾಜ ಸಿರಿಗೆರೆ**
ದಾವಣಗೆರೆ.

# ಬ್ಯಾಂಕ್ ಕೆಲಸಕ್ಕೆ ಬರುವವರಿಗೆ ಪೊಲೀಸರಿಂದ ಕಿರುಕುಳ ಆರೋಪ

ದಾವಣಗೆರೆ, ಮೇ 24- ಬ್ಯಾಂಕ್ ಕೆಲಸ ಹಾಗೂ ವಿವಿಧ ಚಿಕಿತ್ಸೆಗೆಂದು ಆಸ್ಪತ್ರೆಗಳಿಗೆ ಬರುವವರ ವಾಹನಗಳನ್ನೂ ತಡೆದು ಪೊಲೀಸರು ಅನಗತ್ಯ ಕಿರುಕುಳ ನೀಡುತ್ತಿದ್ದಾರೆ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ.


ಅಶೋಕ ಚಿತ್ರಮಂದಿರದ ಬಳಿ ಪ್ರತಿ ದಿನ ಪೊಲೀಸರ ದೊಡ್ಡ ಗುಂಪೇ ವಾಹನಗಳ ತಪಾಸಣೆಗೆ ನಿಂತಿರುತ್ತದೆ. ಮಂಡಿಪೇಟೆ ಮತ್ತಿತರೆ ಕಡೆ ಇರುವ ಬ್ಯಾಂಕುಗಳ ವ್ಯವಹಾರ ನಡೆಸಲು ವ್ಯಾಪಾರಸ್ಥರು ಬ್ಯಾಂಕುಗಳಿಗೆ ಬರಲೇಬಾಕಾಗಿರುತ್ತದೆ. ಈ ವೇಳೆ ಪೊಲೀಸರು ವಾಹನ ತಡೆದು ವಶಕ್ಕೆ ತೆಗೆದುಕೊಳ್ಳುತ್ತಿದ್ದಾರೆ. ದಾಖಲೆಗಳನ್ನು ತೋರಿಸಿದರೂ ಏರು ದನಿಯಲ್ಲಿ ಗದರಿಸುತ್ತಿದ್ದಾರೆ ಎಂಬುದು ಸಾರ್ವಜನಿಕರ ಆರೋಪವಾಗಿದೆ.

ಈ ಬಗ್ಗೆ ಪತ್ರಿಕೆಯೊಂದಿಗೆ ಮಾತನಾಡಿದ ಭತ್ತದ ವ್ಯಾಪಾರಿ ಬಿ.ಎಂ. ಬಸವರಾಜ್, ಭತ್ತ ಮಾರಿದ ರೈತರಿಗೆ ನಾವು ಹಣ ಪಾವತಿ ಮಾಡಬೇಕು. ಅದಕ್ಕಾಗಿ ಬ್ಯಾಂಕುಗಳಿಗೆ ಹೋಗಬೇಕಾದದ್ದು ಅನಿವಾರ್ಯವಾಗುತ್ತದೆ. ಬೆಳಿಗ್ಗೆ 10 ಗಂಟೆಗೆ ಬ್ಯಾಂಕುಗಳು ಆರಂಭವಾಗುತ್ತವೆ. ಆದ ಕಾರಣ ನಾವು 10.30ರ ವೇಳಗೆ ಹೊರಡುತ್ತೇವೆ. ಆದರೆ ಪೊಲೀಸರು ಬಿಡುತ್ತಿಲ್ಲ ಎಂದರು.

ಸೋಮವಾರ ಬ್ಯಾಂಕಿಗೆ ತೆರಳಬೇಕಾದ ದಾಖಲೆಗಳನ್ನು ತೋರಿಸಿದಾಗ್ಯೂ ಪೊಲೀಸರು ಏರು ದನಿಯಲ್ಲಿ ಬೆದರಿಸಿ, ವಾಹನ ವಶಕ್ಕೆ ಪಡೆದರು. ಆದರೆ ಸುದೀರ್ಘ ವಾಗ್ವಾದದ ನಂತರ ವಾಹನ ಮರಳಿ ನೀಡಿದರು. ಇದು ಕೇವಲ ನಮ್ಮ ಕಥೆಯಲ್ಲ. ಪ್ರತಿ ದಿನ ನೂರಾರು ಜನರು ಇಂತಹ ಬ್ಯಾಂಕು ಹಾಗೂ ಆಸ್ಪತ್ರೆಗಳಿಗೆ ಬರುತ್ತಾರೆ. ಇವರೆಲ್ಲರಿಗೂ ಪೊಲೀಸರಿಂದ ತೊಂದರೆ ಉಂಟಾಗುತ್ತದೆ.

ಅನಗತ್ಯವಾಗಿ ಓಡಾಡುವವರ ಮೇಲೆ ಕಠಿಣ ಕ್ರಮ ಕೈಗೊಳ್ಳಲು ನಮ್ಮ ಅಭ್ಯಂತರವಿಲ್ಲ. ಆದರೆ ದಾಖಲೆ ತೋರಿಸಿದರೆ ಪೊಲೀಸರು ಅವಕಾಶ ನೀಡಬೇಕು. ಸಾರ್ವಜನಿಕರೊಂದಿಗೆ ಸೌಜನ್ಯದಿಂದ ವರ್ತಿಸಬೇಕು ಎಂದವರು ಮನವಿ ಮಾಡಿದ್ದಾರೆ.

# ಖಾಸಗಿ ಶಿಕ್ಷಕರಿಗೂ ಪ್ಯಾಕೇಜ್ ನೀಡಲು ಆಗ್ರಹ



ರಾಣೇಬೆನ್ನೂರು, ಮೇ 24- ಕೋವಿಡ್ ನೆಪದಲ್ಲಿ ಖಾಸಗಿ ಶಾಲಾ-ಕಾಲೇಜ್‌ಗಳನ್ನು ಮುಚ್ಚಿ ಅಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರು ಹಾಗೂ ಶಿಕ್ಷಕೇತರರು ವೇತನವಿಲ್ಲದೆ ಭಿಕ್ಷೆ ಬೇಡುವ ಪರಿಸ್ಥಿತಿಯಲ್ಲಿದ್ದಾರೆ. ಆಳುವ ಸರ್ಕಾರಕ್ಕೆ ಕನಿಷ್ಟ ಕಣ್ಣು-ಕಿವಿಯಾದರೂ ಇದ್ದಲ್ಲಿ ಶಿಕ್ಷಕರಿಗೆ ಊಟ ಮಾಡುವಷ್ಟಾದರೂ ಆರ್ಥಿಕ ಸಹಾಯ ಘೋಷಣೆ ಮಾಡಬೇಕೆಂದು ಕೆಪಿಸಿಸಿ ಶಿಕ್ಷಕರು ಹಾಗೂ ಪದವೀಧರ ಘಟಕದ ಅಧ್ಯಕ್ಷ ಡಾ. ಆರ್.ಎಂ. ಕುಬೇರಪ್ಪ ಮುಖ್ಯಮಂತ್ರಿಗಳಿಗೆ ಪತ್ರ ಬರೆದು ಆಗ್ರಹಪಡಿಸಿದ್ದಾರೆ.

ಸರ್ಕಾರ ಒಂದು ಕಡೆ ಶಾಲಾ-ಕಾಲೇಜ್‌ಗಳನ್ನು ಮುಚ್ಚಲು ಆದೇಶ ಮಾಡಿ ಶಾಲಾ-ಕಾಲೇಜ್ ಮುಖ್ಯಸ್ಥರು ವಿದ್ಯಾರ್ಥಿಗಳಿಂದ ಯಾವುದೇ ಶುಲ್ಕ ವಸೂಲಿ ಮಾಡದಂತೆ ತಾಕೀತು ಮಾಡುತ್ತಾರೆ. ಖಾಸಗಿ ಆಡಳಿತ ಮಂಡಳಿಯವರಿಗೆ ಶುಲ್ಕ ಸಂಗ್ರಹವಿಲ್ಲದ ಕಾರಣ ಸಿಬ್ಬಂದಿಗೆ ವೇತನ ನೀಡಲು ಸಾಧ್ಯವಾಗುತ್ತಿಲ್ಲ. ಇನ್ನು ಸರ್ಕಾರ ಆರ್ಥಿಕ ಪ್ಯಾಕೇಜ್ ನೀಡುವಾಗ ಶಿಕ್ಷಕರ ನೆನಪೇ ಮಾಡುವುದಿಲ್ಲ. ಇವರ ನಿರ್ಲಕ್ಷ್ಯಕ್ಕೊಳಗಾಗಿರುವ ಶಿಕ್ಷಕರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕೆಲವರು ಚಿಕಿತ್ಸೆಗೆ ಹಣವಿಲ್ಲದೆ ಸತ್ತಿದ್ದಾರೆ. ಮಕ್ಕಳನ್ನು ಕಳೆದುಕೊಂಡಿದ್ದಾರೆ. ಬೀದಿ ಬೀದಿಯಲ್ಲಿ ತರಕಾರಿ, ಹಣ್ಣು ಮಾರಿ ಜೀವನ ಮಾಡಲು ಪ್ರಾರಂಭಿಸಿದ್ದಾರೆ. ಸರ್ಕಾರ ಇವರೆಲ್ಲರ ಸಮಸ್ಯೆಗಳಿಗೆ ಜಾಣ-ಕುರುಡುತನ ಪ್ರದರ್ಶಿಸುತ್ತಾ ಬಂದಿದೆ ಎಂದು ಕುಬೇರಪ್ಪ ವ್ಯಂಗ್ಯವಾಡಿದ್ದಾರೆ.

# 1250 ಕೋಟಿ ಪ್ಯಾಕೇಜ್ ಕನ್ನಡಿಯೊಳಗಿನ ಗಂಟು



ಹರಪನಹಳ್ಳಿ, ಮೇ 24- ಕೋವಿಡ್ ಕಾರಣ ರಾಜ್ಯ ಸರ್ಕಾರ 1250 ಕೋಟಿ ರೂ. ಪ್ಯಾಕೇಜ್ ಘೋಷಣೆ ಮಾಡಿದೆ. ಈ ಪ್ಯಾಕೇಜ್ ಕನ್ನಡಿಯೊಳಗಿನ ಗಂಟು ಎಂದು ಎಂ.ಪಿ. ಪ್ರಕಾಶ್ ಸಮಾಜಮುಖಿ ಟ್ರಸ್ಟ್ ಅಧ್ಯಕ್ಷರಾದ ಶ್ರೀಮತಿ ಎಂ.ಪಿ. ವೀಣಾ ಮಹಾಂತೇಶ್ ಹೇಳಿದರು.

ಪ್ರತಿಯೊಬ್ಬರಿಗೂ 10 ಕೆ.ಜಿ. ಅಕ್ಕಿ ಹಾಗೂ ಪ್ರತಿಯೊಬ್ಬರಿಗೂ 10 ಸಾವಿರ ರೂ. ನೀಡಬೇಕು ಎಂಬ ಬೇಡಿಕೆಗೆ ಕಣ್ಣೊರೆಸುವ ಪ್ರಯತ್ನವೇ ರಾಜ್ಯ ಸರ್ಕಾರದ ಈ ಪ್ಯಾಕೇಜ್ ಘೋಷಣೆ ಎಂದು ಟೀಕಿಸಿದ್ದಾರೆ.

1ನೇ ಅಲೆಯ ಸಂದರ್ಭದಲ್ಲಿ ಇದೇ ರೀತಿಯಲ್ಲಿ ಸವಿತಾ ಸಮಾಜ, ಆಟೋ, ಟ್ಯಾಕ್ಸಿ ಡ್ರೈವರ್‌ಗಳಿಗೆ ಹಣ ನೀಡುವ ಘೋಷಣೆ ಇನ್ನು ಫಲಾನುಭವಿಗಳಿಗೆ ತಲುಪಿಲ್ಲ. ಆಪ್ ಮೂಲಕ ಹಣ ನೀಡುವ ವ್ಯವಸ್ಥೆ ಸರಿಯಾಗಿ ಬಳಕೆಯಾಗಿಲ್ಲ. ಈ ಪ್ಯಾಕೇಜ್‌ನಲ್ಲಿ ರೈತರ ಅಸಂಘಟಿತ, ಕಾರ್ಮಿಕರ, ಕೆಲಸ ಕಳೆದುಕೊಂಡವರ, ಕಟ್ಟಡ ಕಾರ್ಮಿಕರ ಬಗ್ಗೆ ಗಮನ ನೀಡಿಲ್ಲ ಎಂದು ಅವರು ತಿಳಿಸಿದ್ದಾರೆ.

ಬಾಡಿಗೆ, ವಿದ್ಯುತ್ ಪಾವತಿಯ ಬಗ್ಗೆ ಹಾಗೂ ರೈತರು ಬ್ಯಾಂಕುಗಳಲ್ಲಿ ಮಾಡಿಕೊಂಡಿರುವ ಸಾಲದ ಮೇಲಿನ ಬಡ್ಡಿಯ ಬೆಂಬಲ ಬೆಲೆಯ ಬಗ್ಗೆ ಜಾಣ ಮೌನ ತಾಳಿದೆ. ನಿರಂತರವಾಗಿ ಕೋವಿಡ್ ವಿರುದ್ಧ ಹೋರಾಡುತ್ತಿರುವ ವಾರಿಯರ್ಸ್ ಬಗ್ಗೆ ಯಾವುದೇ ಪ್ಯಾಕೇಜ್ ಘೋಷಣೆ ಮಾಡಿಲ್ಲ. ಸೇವೆಯನ್ನು ಗಮನಿಸಿ ಅವರಿಗೆ ಜೀವ ವಿಮೆ ನೀಡಬೇಕು. ಸರ್ಕಾರ ಘೋಷಣೆ ಮಾಡಿರುವ 1250 ಕೋಟಿ ರೂ. ಆದರೆ ಸರ್ಕಾರ ನೀಡಿರುವ ವಿವರಣೆಯ ಲೆಕ್ಕ ರೂ. 1111.82 ಕೋಟಿ ರೂಪಾಯಿಗಳು ಮಾತ್ರ. ಉಳಿದ ಹಣಕ್ಕೆ ವಿವರಣೆ ನೀಡಿಲ್ಲ. ಒಟ್ಟಾರೆಯಾಗಿ ಹೇಳುವುದಾದರೆ, ಈ ಪ್ಯಾಕೇಜ್ ಜನರ ಮೂಗಿಗೆ ತುಪ್ಪ ಸವರುವ ಪ್ಯಾಕೇಜ್ ಎಂದರೆ ತಪ್ಪಾಗಲಾರದು ಎಂದು ವೀಣಾ ಕಿಡಿ ಕಾರಿದ್ದಾರೆ.

# ಸೋಂಕಿತರಲ್ಲಿ ಧೈರ್ಯ ತುಂಬಲು ರೇಣುಕಾಚಾರ್ಯ ಸಖತ್ ಸ್ಟೆಪ್ಸ್




ಹೊನ್ನಾಳಿ, ಮೇ 24- ಅವರೆಲ್ಲಾ ಕೊರೊನಾ ಸೋಂಕಿತರು, ಪ್ರತಿನಿತ್ಯ ಕೋವಿಡ್ ಕೇರ್ ಸೆಂಟರ್‌ನಲ್ಲಿ ನಾಲ್ಕು ಗೋಡೆಯ ನಡುವೆ ಕಾಲ ಕಳೆಯುತ್ತಿದ್ದ ಅವರಿಗೆ ಮನರಂಜನೆ ನೀಡ ಬೇಕೆಂಬ ಉದ್ದೇಶದಿಂದ ಸಿಎಂ ರಾಜಕೀಯ ಕಾರ್ಯದರ್ಶಿ ಎಂ.ಪಿ.ರೇಣುಕಾಚಾರ್ಯ ಕೋವಿಡ್ ಕೇರ್ ಸೆಂಟರ್‌ನಲ್ಲಿ ಇಂದು ರಸಮಂಜರಿ ಕಾರ್ಯಕ್ರಮ ಆಯೋಜನೆ ಮಾಡಿದರಲ್ಲದೇ, ಖುದ್ದು ಹಾಡಿಗೆ ನೃತ್ಯ ಹಾಕುವ ಮೂಲಕ ಸೋಂಕಿತರಿಗೆ ಆತ್ಮಸ್ಥೈರ್ಯ ತುಂಬಿದರು.

ತಾಲ್ಲೂಕಿನ ಹೆಚ್.ಕಡದಕಟ್ಟೆ ಗ್ರಾಮದ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯ ಕೋವಿಡ್ ಕೇರ್ ಸೆಂಟರ್‌ನಲ್ಲಿ 102 ಜನ ಕೋವಿಡ್ ಸೋಂಕಿತರು ಕ್ವಾರಂಟೈನ್‌ನಲ್ಲಿದ್ದು, ಅವರಿಗೆ ಮನೋರಂಜನೆ ನೀಡ ಬೇಕೆಂದು ಯೋಚಿಸಿದ ಶಾಸಕ ಎಂ.ಪಿ.ರೇಣುಕಾಚಾರ್ಯ ರಸಮಂಜರಿ ಕಾರ್ಯಕ್ರಮ ಏರ್ಪಡಿಸಿ, ಸೋಂಕಿತರಲ್ಲಿ ಹುಮ್ಮಸ್ಸು ಮೂಡಿಸುವ ಕೆಲಸ ಮಾಡಿದರು.

ಇದೇ ವೇಳೆ ಮಾತನಾಡಿದ ಶಾಸಕರು, ಕೋವಿಡ್ ಕೇರ್ ಸೆಂಟರ್‌ನಲ್ಲಿರುವವರೆಲ್ಲಾ ಸೋಂಕಿತರಲ್ಲ. ಅವರಲ್ಲಿ ಆ ಭಾವನೆ ಬರಬಾರದು ಎಂಬ ಉದ್ದೇಶದಿಂದ ರಸಮಂಜರಿ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದರು. ಇಲ್ಲಿರುವವರು ಮನೆಯ ಕಡೆ ಯೋಚನೆ ಮಾಡುತ್ತಾ ನೋವು ಪಡುತ್ತಿದ್ದಾರೆ. ಅಷ್ಟೇ ಅಲ್ಲದೇ ಅವರಲ್ಲಿ ಸಂಭ್ರಮ ಎಂಬುವುದೇ ಮಾಯವಾಗಿದ್ದು, ಅವರಿಗೆ ಸಂತೋಷ ಉಂಟು ಮಾಡುವ ದೃಷ್ಟಿಯಿಂದ ರಸಮಂಜರಿ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದರು.

# ಸ್ಪೈಸ್‌ಜೆಟ್ ವಿಮಾನದಲ್ಲಿ ಮದುವೆ



**ಪ್ರಕರಣ ದಾಖಲಿಸಲು ಡಿಜಿಸಿಎ ಸೂಚನೆ**

ನವದೆಹಲಿ, ಮೇ 24 - ಕಳೆದ ಮೇ 23ರಂದು ಸ್ಪೈಸ್‌ಜೆಟ್ ಚಾರ್ಟರ್ಡ್ ವಿಮಾನ ಹಾರಾಟ ನಡೆಸುವಾಗ ಅತಿಥಿಗಳು ಹಾಗೂ ಸಂಬಂಧಿಕರ ಎದುರು ಮದುವೆಯಾಗಿರುವುದು ಈಗ ವಿವಾದಕ್ಕೆ ಕಾರಣವಾಗಿದೆ. ಮಧುರೈ ವಿಮಾನ ನಿಲ್ದಾಣದಿಂದ ಹೊರಟ ವಿಮಾನ ಸುಮಾರು ಎರಡು ಗಂಟೆ ಕಾಲ ಹಾರಾಟ ನಡೆಸಿ, ಅದೇ ನಿಲ್ದಾಣಕ್ಕೆ ವಾಪಸ್ಸಾಗಿತ್ತು. ಈ ಸಂದರ್ಭದಲ್ಲಿ ಸಾಮಾಜಿಕ ಅಂತರ ಇಲ್ಲದೇ ಮದುವೆ ಮಾಡಿಕೊಂಡಿರುವುದು ನಿಯಮಗಳ ಉಲ್ಲಂಘನೆ ಎಂದು ದೂರಲಾಗುತ್ತಿದೆ.

ಘಟನೆಯ ನಂತರ, ಸಾಮಾಜಿಕ ಅಂತರ ಕಾಯ್ದುಕೊಳ್ಳದ ವಿಮಾನದ ಸಿಬ್ಬಂದಿಯನ್ನು ಕೆಲಸಕ್ಕೆ ಹಾಜರಾಗದಂತೆ ತಡೆಯಲಾಗಿದೆ ಎಂದು ವೈಮಾನಿಕ ನಿಯಂತ್ರಕವಾದ ಡಿ.ಜಿ.ಸಿ.ಎ. ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ವಿಮಾನದಲ್ಲಿರುವಾಗ ಕೊರೊನಾ ನಿಯಮಗಳನ್ನು ಪಾಲಿಸವುದರ ವಿರುದ್ಧ ಕ್ರಮಕ್ಕಾಗಿ ದೂರು ದಾಖಲಿಸುವಂತೆಯೂ ಸ್ಪೈಸ್‌ಜೆಟ್‌ಗೆ ಸೂಚನೆ ನೀಡಲಾಗಿದೆ. ತನಿಖೆಯ ನಂತರ ಈ ಬಗ್ಗೆ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಅಧಿಕಾರಿ ತಿಳಿಸಿದ್ದಾರೆ.

ವಿಮಾನದಲ್ಲಿ ಮದುವೆ ಮಾಡಿಕೊಂಡ ಚಿತ್ರಗಳು ಹಾಗೂ ವಿಡಿಯೋಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ.

ಈ ಬಗ್ಗೆ ಹೇಳಿಕೆ ನೀಡಿರುವ ಸ್ಪೈಸ್‌ಜೆಟ್ ವಕ್ತಾರರು, ಸ್ಪೈಸ್‌ಜೆಟ್ ಬೋಯಿಂಗ್ 737 ಚಾರ್ಟರ್ಡ್ ವಿಮಾನವನ್ನು ಮಧುರೈನ ಖಾಸಗಿ ಏಜೆಂಟರು ಮೇ 23ರಂದು ಬುಕ್ ಮಾಡಿದ್ದರು. ಮದುವೆಯ ನಂತರ ಮೋಜಿನ ಸವಾರಿಗೆ ವಿಮಾನ ಬುಕ್ ಮಾಡಿರುವುದಾಗಿ ತಿಳಿಸಲಾಗಿತ್ತು. ಆ ಸಂದರ್ಭದಲ್ಲಿ ಏಜೆಂಟರಿಗೆ ಕೊರೊನಾ ನಿಯಮಗಳ ಬಗ್ಗೆ ಸ್ಪಷ್ಟವಾಗಿ ತಿಳಿಸಲಾಗಿತ್ತು. ವಿಮಾನದಲ್ಲಿ ಯಾವುದೇ ಚಟುವಟಿಕೆ ನಡೆಸಬಾರದು ಎಂದು ತಿಳಿಸಲಾಗಿತ್ತು ಎಂದಿದ್ದಾರೆ.


**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ : ಮೊ. : 98453 17181

**ನಿಮಗೆ ಜಮೀನು ಕೊಳ್ಳುವುದಕ್ಕೆ ಬೇಕೇ?**
(ಬೆದ್ದಲು, ನೀರಾವರಿ, ಅಡಿಕೆ. ತೆಂಗಿನ ತೋಟ)
ಕಿರಣ್ ಬೂಸ್ನೂರ್ : 98440-63409

ಜೈ ಶ್ರೀಮನ್ನಾರಾಯಣ
ವಿಕಾಸ ತರಂಗಿಣಿ, ದಾವಣಗೆರೆ
ಸ್ಫೂರ್ತಿ ಸೇವಾ ಟ್ರಸ್ಟ್
**ಪ್ರಸಾದ ದಾಸೋಹ**
ಇಂದಿನ ಪ್ರಸಾದ ವಿತರಕರು
ಶ್ರೀ ಎಲ್.ಎಸ್. ಪ್ರಭು, ನಿವೃತ್ತ ಪ್ರಧ್ಯಾಪಕರು ಮತ್ತು ಕುಟುಂಬ ವರ್ಗದವರ ಸೇವಾರ್ಥ
ಸ್ಥಳ : ಸಿ.ಜಿ. ಆಸ್ಪತ್ರೆ ಮುಂಭಾಗ, 12 ಗಂಟೆಗೆ ಮತ್ತು ಹೆರಿಗೆ ಆಸ್ಪತ್ರೆ ಮುಂಭಾಗ, 12.30ಕ್ಕೆ

**ಮಾರಾಟಕ್ಕಿವೆ**
ಉಪಯೋಗಿಸಿದ ಕೇಟರಿಂಗ್ ಮತ್ತು ಅಡುಗೆ ಮಾಡುವ ದೊಡ್ಡ ಗಾತ್ರದ ಪಾತ್ರೆಗಳು ಮತ್ತು ಸಾಮಾನುಗಳು ಕಡಿಮೆ ದರದಲ್ಲಿ ಮಾರಾಟಕ್ಕಿವೆ. ಮಿಕ್ಸರ್, ಗ್ರೈಂಡರ್, ಮಿಕ್ಸಿ, ದೊಡ್ಡ ಸ್ಟೌವ್ ಮತ್ತು ಇನ್ನಿತರೆ ಹೋಟೆಲ್ ನಡೆಸುವ ಸಾಮಗ್ರಿಗಳು ಇರುತ್ತವೆ. ಖರೀದಿಗೆ ಆಸಕ್ತಿ ಉಳ್ಳವರು ನಮ್ಮನ್ನು ಸಂಪರ್ಕಿಸಿ.
76761 00154

**ಸೈಟುಗಳು ಮಾರಾಟಕ್ಕಿವೆ**
40x60 west, ರಂಗನಾಥ್ ಬಡಾವಣೆಯಲ್ಲಿ, 40x60 North ಡಾಲರ್ಸ್ ಕಾಲೋನಿಯಲ್ಲಿ, 40x60 North, ವಿವೇಕಾನಂದ ಬಡಾವಣೆಯಲ್ಲಿ, 40x60 East, ಎಸ್.ಎಸ್. 'ಬಿ' ಬ್ಲಾಕ್‌ನಲ್ಲಿ
ಐನಳ್ಳಿ ಚನ್ನಬಸಪ್ಪ, ಏಜೆಂಟ್
93410 14130
99166 12110

**ಸೈಟುಗಳು ಮಾರಾಟಕ್ಕಿವೆ**
ಹೊಸ ಬನಶಂಕರಿ ಲೇಔಟ್‌ನಲ್ಲಿ ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 30x55 East, 40 ಅಡಿ ರೋಡಿಗಿದೆ, 30x40 West 40 ಅಡಿ ರೋಡಿಗಿದೆ, 40x60 East, 30x50 west
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಮನೆ ಕೆಲಸಕ್ಕೆ ಬೇಕಾಗಿದ್ದಾರೆ**
ಕೆಲಸದ ಸಮಯ : ಬೆ. 8 ರಿಂದ 11ರವರೆಗೆ.
ಸಂಪರ್ಕಿಸಿ :ಡೋ.ನಂ. 2007/1, ಎಂಸಿಸಿ ಎ ಬ್ಲಾಕ್, 1ನೇ ಮೇನ್, 1ನೇ ಕ್ರಾಸ್, ಡಾ. ಎಂ.ಸಿ. ಮೋದಿ ರಸ್ತೆ, ದಾವಣಗೆರೆ.
94481 10895

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
H.O : Near coffee day, Nutana collage road, Vidyanagara 2nd main, Davangere
77603 16576
90080 55813

**Online ಯೋಗ ಕ್ಲಾಸ್**
ಪ್ರತಿನಿತ್ಯ ಯೋಗಾಸನ, ಸೂರ್ಯ ನಮಸ್ಕಾರ, ಪ್ರಾಣಾಯಾಮ, ಧ್ಯಾನದ ಆನ್‌ಲೈನ್ (Online) ತರಗತಿಗಳಿಗೆ ಸಂಪರ್ಕಿಸಿರಿ.
ದಿವ್ಯ ಯೋಗ ಮಂದಿರ, ದಾವಣಗೆರೆ.
99726 00713

**ಜಮೀನು ಮಾರಾಟಕ್ಕಿದೆ ದಾವಣಗೆರೆ ಹತ್ತಿರ**
74112 50447

**Land Requierd @ Rs 5 Laks/ Acre**
74112 50447

**ಸಂಪರ್ಕಿಸಿ**
ನಿಮ್ಮನ್ನು ಕಾಡುವ ಸಮಸ್ಯೆಗಳಾದ ಅನಾರೋಗ್ಯ,ಸಂತಾನ ದೋಷ, ಸತಿ ಪತಿ ಕಲಹ, ಮನೆಗಳಲ್ಲಿ ಸತ್ವ ಹೀನತೆ, ದುಷ್ಟ ಶಕ್ತಿಗಳ, ಮಾಟ ಮಂತ್ರ ಬಾಧೆ, ಶತ್ರುಗಳ ಕಾಟ, ಜನ್ಮಾಂತರದ ದೋಷಗಳನ್ನು ಸಾಂದೀಪನೀ ತಂತ್ರದಿಂದ ನಿವಾರಣೆಗೆ ಕೂಡಲೇ ಸಂಪರ್ಕಿಸಿ
76767 50280

**Sale**
Just Idli-My Kitchen
*(Complete Set up)*
Good running - on line Food Parcel & Catering Service in Davanagere. only Interested Persons contact
7676100154


# ಬಾಬುಗೌಡ ಪಾಟೀಲ್ ನಿಧನಕ್ಕೆ ಸಂತಾಪ

ದಾವಣಗೆರೆ, ಮೇ 24- ರೈತರ ಧೀಮಂತ ನಾಯಕ, ಕೇಂದ್ರದ ಮಾಜಿ ಸಚಿವ ಬಾಬುಗೌಡ ಪಾಟೀಲ್ ನಿಧನ ನಾಡಿನ ರೈತ ಸಂಕುಲಕ್ಕೆ ತುಂಬಲಾರದ ನಷ್ಟ ತಂದಿದೆ ಎಂದು ನಗರದ ರೈತ ಮುಖಂಡ ಬಲ್ಲೂರು ರವಿಕುಮಾರ್ ಕಂಬನಿ ಮಿಡಿದಿದ್ದಾರೆ.

# ಖಾಸಗಿ ಸಣ್ಣ ಆಸ್ಪತ್ರೆಗಳ ಅಸಮರ್ಥ ನಿರ್ವಹಣೆಯಿಂದ ಬ್ಲಾಕ್ ಫಂಗಸ್

## ತಜ್ಞರ ಸಮಿತಿಯಿಂದ ಸರ್ಕಾರಕ್ಕೆ ವರದಿ

ಬೆಂಗಳೂರು, ಮೇ 24 - ಖಾಸಗಿ ಸಣ್ಣ ಆಸ್ಪತ್ರೆಗಳ ಅಸಮರ್ಥ ನಿರ್ವಹಣೆಯಿಂದ ಬ್ಲಾಕ್ ಫಂಗಸ್ ಸೋಂಕು ತಗಲಿದೆ ಎಂದು ತಜ್ಞರ ಸಮಿತಿ ಸರ್ಕಾರಕ್ಕೆ ಪ್ರಾಥಮಿಕ ವರದಿ ನೀಡಿದೆ.

ಉಪಮುಖ್ಯಮಂತ್ರಿ ಡಾ. ಸಿ.ಎಸ್. ಅಶ್ವತ್ಥ್‌ನಾರಾಯಣ ಅವರ ಅಧ್ಯಕ್ಷತೆಯಲ್ಲಿ ನಿನ್ನೆ ರಾತ್ರಿ ನಡೆದ ಕೋವಿಡ್-19 ಕಾರ್ಯಪಡೆ ಸಭೆಯಲ್ಲಿ ತಜ್ಞರು ಈ ಮಾಹಿತಿ ನೀಡಿದ್ದಾರೆ.

ಕೋವಿಡ್-19 ಸೋಂಕಿತರಿಗೆ ಸಮರ್ಪಕ ವಾಗಿ ಶುದ್ಧ ಆಮ್ಲಜನಕ ಪೂರೈಸದಿರುವು ದರಿಂದ ಇಂತಹ ಘಟನೆಗಳು ನಡೆದಿವೆ. ಸೋಂಕಿತರಿಗೆ ಆಮ್ಲಜನಕ ಪೂರೈಸುವ ಸಂದರ್ಭದಲ್ಲಿ ಡಿಸ್ಟಿಲರಿ ವಾಟರ್ ಪೂರೈಸುವ ಬದಲು ನಲ್ಲಿ ನೀರುಗಳನ್ನೇ ಬಳಸಿದ್ದಾರೆ. ಅಲ್ಲದೇ ಆಮ್ಲಜನಕ ಪೂರೈಸುವ ಪೈಪುಗಳು ಅಶುದ್ಧತೆಯಿಂದ ಕೂಡಿದ್ದರಿಂದ ಸೋಂಕಿತರು ಗುಣವಾದ ನಂತರ ಫಂಗಸ್ ಕಾಣಿಸಿಕೊಂಡಿದೆ ಎಂದು ತಿಳಿಸಲಾಗಿದೆ.

ರಾಜ್ಯದಲ್ಲಿ ಒಟ್ಟು 700 ಮಂದಿ ಫಂಗ ಸ್‌ಗೆ ಒಳಗಾಗಿದ್ದು, ಪ್ರತಿನಿತ್ಯ 100 ಮಂದಿ ಈ ಕಾಯಿಲೆಗೆ ತುತ್ತಾಗುತ್ತಿದ್ದಾರೆ. ಇವರಲ್ಲಿ ಬಹುತೇಕರು ಖಾಸಗಿ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದವರಾಗಿದ್ದಾರೆ.

ಕೊರೊನಾ ಸೋಂಕು ತಗುಲಿದ ಸಂದರ್ಭದಲ್ಲಿ ಸ್ಟಿರಾಯ್ಡ್ ಚುಚ್ಚುಮದ್ದು ಜೊತೆಗೆ ಅಸಮರ್ಪಕ ಆಮ್ಲಜನಕ ಪೂರೈಕೆ ಜೊತೆಗೆ ಮಾಸ್ಕ್‌ಗಳನ್ನು ದೀರ್ಘಾವಧಿ ಬಳಕೆ ಮಾಡಿದ್ದು, ಕಾರಣವಾಗಿದೆ ಎಂದು ಪ್ರಾಥಮಿಕ ವರದಿಯಲ್ಲಿ ಹೇಳಲಾಗಿದೆ. ಈ ಮಧ್ಯೆ ಸುದ್ದಿಗಾರರೊಂದಿಗೆ ಮಾತನಾಡಿದ ಆರೋಗ್ಯ ಸಚಿವ ಡಾ. ಸುಧಾಕರ್, ಬ್ಲ್ಯಾಕ್ ಫಂಗಸ್ ಸೋಂಕಿತರಿಗೆ ಎಲ್ಲ ಜಿಲ್ಲಾಸ್ಪತ್ರೆಗಳಲ್ಲಿ ಚಿಕಿತ್ಸೆ ವ್ಯವಸ್ಥೆ ಕಲ್ಪಿಸಲಾಗಿದೆ ಎಂದರು.

ಈ ಸೋಂಕು ಎಲ್ಲಿಂದ ಬರುತ್ತಿದೆ ಎಂದು ಪತ್ತೆ ಮಾಡಲು ಸಮಿತಿ ರಚಿಸಿದ್ದು, ಈ ಸಮಿತಿ ವರದಿ ನೀಡಿದೆ. ಸ್ಟಿರಾಯ್ಡ್ ಜೊತೆಗೆ ಹ್ಯುಮಿಡಿಫೈರ್ ನಲ್ಲಿ ನಲ್ಲಿ ನೀರು ಬಳಕೆ, ಐಸಿಯು ವೆಂಟಿಲೇಟರ್ ಅನ್ನು ಇನ್ನೊಬ್ಬರಿಗೆ ಬಳಸುವಾಗ, ಒಂದೇ ಮಾಸ್ಕ್ ದೀರ್ಘಕಾಲ ಬಳಕೆ, ಟ್ಯೂಬ್, ಹಾಸಿಗೆ ಮೊದಲಾದ ಮೂಲಗಳಿಂದ ಸೋಂಕು ಬರುತ್ತದೆ ಎಂದು ವರದಿಯಲ್ಲಿ ತಿಳಿಸಲಾಗಿದೆ ಎಂದವರು ಹೇಳಿದ್ದಾರೆ.

ಕೊರೊನಾ ಆಸ್ಪತ್ರೆಯಲ್ಲಿ ಕಟ್ಟಡ ನವೀಕರಣ ಕಾಮಗಾರಿ ನಡೆಸಬಾರದು, ಹೊರಗಿನವರು ವಾರ್ಡ್‌ಗೆ ಬರಬಾರದು, ಪ್ರತಿ ಪಾಳಿ ಮುಗಿದ ಮೇಲೆ ಸ್ವಚ್ಛತೆ ಮಾಡಬೇಕು, ಪ್ರತಿ ಉಪಕರಣಗಳನ್ನು ಸ್ವಚ್ಛವಾಗಿಡಬೇಕು ಎಂದು ಸೂಚಿಸಲಾಗಿದೆ ಎಂದರು. ಕೊರೊನಾದಿಂದ ಗುಣಮುಖರಾದಾಗ ಇಎನ್‌ಟಿ ವೈದ್ಯರು ಮತ್ತೆ ತಪಾಸಣೆ ಮಾಡಬೇಕು. 3, 7, 21 ನೇ ದಿನ ತಪಾಸಣೆ ಮಾಡಬೇಕು ಎಂದು ಸೂಚನೆ ನೀಡಲಾಗಿದೆ ಎಂದರು.

ಎಲ್ಲ ಜಿಲ್ಲಾಸ್ಪತ್ರೆಗಳಲ್ಲಿ ಕಪ್ಪು ಶಿಲೀಂಧ್ರ ಸೋಂಕಿಗೆ ಚಿಕಿತ್ಸೆ ನೀಡಲು ವ್ಯವಸ್ಥೆ ಇದೆ. 17 ಮೆಡಿಕಲ್ ಕಾಲೇಜುಗಳಲ್ಲಿ ಕೂಡ ವ್ಯವಸ್ಥೆ ಇದೆ. ಆದರೆ ಔಷಧಿ ಸ್ವಲ್ಪ ಕೊರತೆ ಇದೆ. ಕೇಂದ್ರ ಸಚಿವ ಡಿ.ವಿ.ಸದಾನಂದಗೌಡರ ಜೊತೆ ಈ ಬಗ್ಗೆ ಚರ್ಚಿಸಲಾಗಿದೆ ಎಂದರು. ಇಡೀ ದೇಶದಲ್ಲಿ ವರ್ಷಕ್ಕೆ 100-200 ರಷ್ಟು ಜನರು ಬ್ಲ್ಯಾಕ್ ಫಂಗಸ್ ಸೋಂಕಿಗೆ ಒಳಗಾಗುತ್ತಿದ್ದರು. ಈಗ ರಾಜ್ಯದಲ್ಲೇ 300 ಕ್ಕೂ ಅಧಿಕ ಸೋಂಕಿತರಿರುವಾಗ ಔಷಧಿ ಕೊರತೆ ಕಂಡುಬರುತ್ತದೆ. ಇದಕ್ಕಾಗಿ ಔಷಧ ಉತ್ಪಾದನೆ ಹೆಚ್ಚಳ ಮಾಡಲಾಗಿದೆ. 1 ಸಾವಿರಕ್ಕೂ ಅಧಿಕ ವೈಯಲ್‌ಗಳನ್ನು ಕಳುಹಿಸಿಕೊಡುವ ನಿರೀಕ್ಷೆಯೂ ಇದೆ. ಬ್ಲ್ಯಾಕ್ ಫಂಗಸ್‌ಗೆ 1,150 ವೈಯಲ್ ಔಷಧಿ ರಾಜ್ಯಕ್ಕೆ ದೊರೆತಿದೆ. 20 ಸಾವಿರ ವೈಯಲ್‌ಗೆ ಬೇಡಿಕೆ ಇಡಲಾಗಿದೆ ಎಂದರು.

ಆಶಾ ಕಾರ್ಯಕರ್ತರು ಸೇರಿದಂತೆ ಆರೋಗ್ಯ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಗೆ ವೇತನ ಪಾವತಿಸಲಾಗಿದೆ. ವೇತನ ಹೆಚ್ಚಳಕ್ಕೆ ಸಂಬಂಧಿಸಿದ ವಿಚಾರ ಕೇಂದ್ರ ಸರ್ಕಾರದ ಮಟ್ಟದಲ್ಲಿ ಚರ್ಚೆಯಾಗಬೇಕಿದೆ. ಕೇಂದ್ರ ಆರೋಗ್ಯ ಸಚಿವಾಲಯದೊಂದಿಗೆ ಚರ್ಚಿಸಲಾಗುವುದು. 10 ಲಕ್ಷಕ್ಕೂ ಅಧಿಕ ಪಿಪಿಇ ಕಿಟ್ ನಮ್ಮ ಬಳಿ ಇವೆ. ಈ ವಸ್ತುಗಳ ಗುಣಮಟ್ಟದ ಬಗೆಗಿನ ಆರೋಪ ಸುಳ್ಳು ಎಂದು ಸ್ಪಷ್ಟಪಡಿಸಿದರು.

---

### ಹಸುಗೂಸನ್ನು ಕೈಲಿಡಿದು ನಡೆದು ಸಾಗುತ್ತಿದ್ದ ಬಾಣಂತಿ

## ಸುರಕ್ಷಿತವಾಗಿ ಮನೆಗೆ ಸೇರಿಸಿದ ತಹಶೀಲ್ದಾರ್



ದಾವಣಗೆರೆ, ಮೇ 24- ಬಾಣಂತಿಯೋರ್ವರು 12 ದಿನದ ಹಸುಗೂಸನ್ನು ಕೈಲಿ ಹಿಡಿದು ನಡೆದುಕೊಂಡು ಮನೆಗೆ ಸಾಗುತ್ತಿದ್ದುದನ್ನು ಕಣ್ಣೆದುರೇ ಕಂಡ ತಹಶೀಲ್ದಾರ್ ಗಿರೀಶ್ ಬಾಣಂತಿ ಮತ್ತು ಮಗುವನ್ನು ತಮ್ಮ ಸರ್ಕಾರಿ ವಾಹನದಲ್ಲಿಯೇ ಸುರಕ್ಷಿತವಾಗಿ ಮನೆಗೆ ಸೇರಿಸಿ ಮಾನವೀಯತೆ ಮೆರೆದಿದ್ದಾರೆ.

ನಗರದ ಚಾಮರಾಜಪೇಟೆಯಲ್ಲಿನ ಹೆರಿಗೆ ಆಸ್ಪತ್ರೆಗೆ ದಾಖಲಾಗಿ ಹೆರಿಗೆಯಾದ ಬಾಣಂತಿ ಮಗುವನ್ನು ಕೈಯಲ್ಲಿ ಹಿಡಿದುಕೊಂಡು ಇಂದು ಆಸ್ಪತ್ರೆಯಿಂದ ಬಿಡುಗಡೆಯಾಗಿ ಜಿಲ್ಲಾಡಳಿತ ಸಂಪೂರ್ಣ ಲಾಕ್‌ಡೌನ್ ಜಾರಿಗೊಳಿಸಿರುವುದರಿಂದ ಯಾವುದೇ ಆಟೋಗಳ ಸಂಚಾರ ಇಲ್ಲದೆ ಚಾಮರಾಜ ಪೇಟೆಯ ಎಂ.ಜಿ. ರಸ್ತೆ ಯಲ್ಲಿ ನಡೆದುಕೊಂಡು ಭಾಷಾ ನಗರಕ್ಕೆ ಸಂಬಂಧಿಕರ ಜೊತೆ ಹೋಗುತ್ತಿದ್ದರು. ಬೆಳಗ್ಗೆ ಮಾರು ಕಟ್ಟೆಯಲ್ಲಿ ಜನಜಂಗುಳಿ ನಿಯಂತ್ರಿಸಲು ಕಾರ್ಯಾಚರಣೆ ಯಲ್ಲಿ ತೊಡಗಿದ್ದ ತಹಶೀಲ್ದಾರ್ ಗಿರೀಶ್ ಅವರ ಕಣ್ಣೆದುರೇ ಬಾಣಂತಿ ಮಗು ಸಹಿತ ಸಾಗಿದ್ದು, ಕೂಡಲೇ ಅವರತ್ತ ಧಾವಿಸಿದ ತಹಶೀಲ್ದಾರ್ ಗಿರೀಶ್, ತಾಯಿ ಮತ್ತು ಮಗುವಿನ ಆರೋಗ್ಯ ವಿಚಾರಿಸಿ, ತಮ್ಮ ಸರ್ಕಾರಿ ವಾಹನದಲ್ಲಿಯೇ ಆಕೆಯ ಮನೆಗೆ ಕಳುಹಿಸಿದರು. ತಹಸೀಲ್ದಾರ್ ಗಿರೀಶ್ ಅವರ ಮಾನ ವೀಯ ಕಾರ್ಯಕ್ಕೆ ಸಾರ್ವಜನಿಕರಿಂದ ಮೆಚ್ಚುಗೆ ವ್ಯಕ್ತವಾಗಿದೆ.

---

## ಮಳೆ : ಮನೆಗಳಿಗೆ ನುಗ್ಗಿದ ನೀರು



ದಾವಣಗೆರೆ, ಮೇ 24 - ನಗರದಲ್ಲಿ ಇಂದು ಸಂಜೆಯಿಂದ ಸುರಿದ ಮಳೆಗೆ ಬೇತೂರು ರಸ್ತೆ, ದೇವರಾಜ ನಗರದ ಮನೆಗಳಲ್ಲಿ ನೀರು ನುಗ್ಗಿ, ಹಾನಿಯಾಗಿರುವುದನ್ನು ಮಹಾನಗರ ಪಾಲಿಕೆ ಸದಸ್ಯರಾದ ಶ್ರೀಮತಿ ಸೌಮ್ಯ ನರೇಂದ್ರಕುಮಾರ್, ಮಹಾನಗರ ಪಾಲಿಕೆ ಎಇಇ ಸಚಿನ್, ಭೇಟಿ ನೀಡಿ, ಪರಿಶೀಲಿಸಿದರು. ಈ ಸಂದರ್ಭದಲ್ಲಿ ಮುಖಂಡ ನರೇಂದ್ರಕುಮಾರ್ ಮತ್ತಿತರರಿದ್ದರು.

## ಜಾಲತಾಣಗಳಿಗೆ ನೀತಿ ಸಂಹಿತೆ ಜಾರಿ

ನವದೆಹಲಿ, ಮೇ 24 – ಸಾಮಾಜಿಕ ಜಾಲತಾಣಗಳಿಗೆ ಕೇಂದ್ರ ಸರ್ಕಾರದ ನೀತಿ ಸಂಹಿತೆ ಜಾರಿಗೆ ಬಂದಿದೆ. ಇದರ ಅನ್ವಯ ಟ್ವಿಟ್ಟರ್, ಫೇಸ್‌ಬುಕ್ ಹಾಗೂ ಇನ್‌ಸ್ಟಾಗ್ರಾಂ ರೀತಿಯ ಜಾಲತಾಣಗಳು ನಿರ್ಬಂಧಗಳ ಜೊತೆಗೆ 3 ಹಂತದ ದೂರು ಬಗೆಹರಿಸುವ ವ್ಯವಸ್ಥೆಗೆ ಒಳಪಡಲಿವೆ. ಸುದ್ದಿ ಜಾಲತಾಣಗಳು ಹಾಗೂ ಒ.ಟಿ.ಟಿ. ತಾಣಗಳಿಗೂ ನಿರ್ಬಂಧಗಳು ಅನ್ವಯವಾಗಲಿವೆ. ನಿರ್ಬಂಧಗಳನ್ನು ಜಾರಿಗೆ ತರಲು ಮೂರು ತಿಂಗಳ ಕಾಲಾವಕಾಶ ನೀಡಲಾಗಿದೆ. ಇಷ್ಟಾದ ನಂತರವೂ ನಿಯಮಗಳನ್ನು ಜಾರಿಗೆ ತರದೇ ಹೋದರೆ ಕ್ರಮ ತೆಗೆದುಕೊಳ್ಳಲು ಸರ್ಕಾರ ಮುಂದಾಗಲಿದೆ.

---

# ವೀರೇಶ್ವರ ಪುಣ್ಯಾಶ್ರಮದಿಂದ ದಾಸೋಹಕ್ಕೆ ಅಕ್ಕಿ ಕೊಡುಗೆ



ದಾವಣಗೆರೆ, ಮೇ 24- ಕೊರೊನಾ ಹಿನ್ನೆಲೆಯಲ್ಲಿ ಆಗಿರುವ ಲಾಕ್ ಡೌನ್ ಸಂದರ್ಭದಲ್ಲಿ ಸಂಕಷ್ಟ ಪರಿಸ್ಥಿತಿಯಲ್ಲಿರುವ ಸೋಂಕಿತರು ಮತ್ತು ಬಡವರಿಗೆ ಅನ್ನ ದಾಸೋಹ ಮಾಡುತ್ತಿರುವ ತರಳಬಾಳು ಸೇವಾ ಸಮಿತಿ ಹಾಗೂ ಶಿವಸೈನ್ಯ ಯುವಕರ ಸಂಘದ ಸತ್ಕಾರ್ಯಕ್ಕೆ ನಗರದ ಬಾಡಾ ಕ್ರಾಸ್ ನಲ್ಲಿರುವ ಶ್ರೀ ವೀರೇಶ್ವರ ಪುಣ್ಯಾಶ್ರಮದ ಸಮಿತಿಯಿಂದ ಹತ್ತು ಪ್ಯಾಕೆಟ್ ಅಕ್ಕಿಯನ್ನು ನೀಡಲಾಯಿತು.

ದಾಸೋಹ ವಿತರಣೆಗೆ ಸಿದ್ಧತೆ ನಡೆಸುತ್ತಿರುವ ಡಾ.ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಸಮುದಾಯ ಭವನದಲ್ಲಿ ಇಂದು ನಡೆದ ಸರಳ ಸಮಾರಂಭದಲ್ಲಿ ದಾಸೋಹದ ವ್ಯವಸ್ಥಾಪಕರಿಗೆ ಅಕ್ಕಿ ಪ್ಯಾಕೆಟ್‌ಗಳನ್ನು ಸಮರ್ಪಿಸಲಾಯಿತು.

ಸಮಾರಂಭದ ಸಾನ್ನಿಧ್ಯ ವಹಿಸಿದ್ದ ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಆಶೀರ್ವಚನ ನೀಡಿ, ಕೊರೊನಾ ಮಹಾಮಾರಿಯನ್ನು ಹೊಡೆದೋಡಿಸಲು ಸರ್ಕಾರ, ಸಂಘ - ಸಂಸ್ಥೆಗಳು ಶ್ರಮಿಸುತ್ತಿದ್ದು, ಜನರೂ ಸಹಾ ಜಾಗೃತಿ ವಹಿಸಿ, ಕಟ್ಟುನಿಟ್ಟಾಗಿ ನಿಯಮಗಳನ್ನು ಪಾಲಿಸಬೇಕೆಂದು ಕಳಕಳಿ ವ್ಯಕ್ತಪಡಿಸಿದರು.

ಲಾಕ್ ಡೌನ್ ನಂತಹ ಸಂದಿಗ್ಧ ಸಂದರ್ಭದಲ್ಲಿ ತರಳಬಾಳು ಸೇವಾ ಸಮಿತಿ ಹಾಗೂ ಶಿವಸೈನ್ಯ ಯುವಕ ಸಂಘದಿಂದ ದಾನಿಗಳ ಸಹಕಾರದಿಂದ ಕಳೆದ 24 ದಿನಗಳಿಂದ ಪ್ರತಿನಿತ್ಯ 1200 - 1500 ರೋಗಿಗಳು ಮತ್ತು ಬಡವರಿಗೆ ಅನ್ನ ದಾಸೋಹ ನಡೆಸುತ್ತಿರುವುದು ಸ್ತುತ್ಯಾರ್ಹ ಕಾರ್ಯ ಎಂದು ಶ್ರೀಗಳು ಪ್ರಶಂಸಿಸಿದರು.

ಈ ಸತ್ಕಾರ್ಯಕ್ಕೆ ಇನ್ನೂ ಹೆಚ್ಚಿನ ದಾನಿಗಳು ಕೈ ಜೋಡಿಸಿ, ಅವರ ಸಮಾಜ ಮುಖಿ ಕಾರ್ಯ ನಿರಂತರವಾಗಿ ನಡೆಯಲು ಪ್ರೋತ್ಸಾಹ ನೀಡಬೇಕು ಎಂದು ಆಶಿಸಿದರು.

ಶ್ರೀ ವೀರೇಶ್ವರ ಪುಣ್ಯಾಶ್ರಮದ ಅಧ್ಯಕ್ಷರೂ, ಹಿರಿಯ ಲೆಕ್ಕ ಪರಿಶೋಧಕರೂ ಆದ ಅಥಣಿ ವೀರಣ್ಣ ಅವರು ಮಾತನಾಡಿ, ಕೊರೊನಾದಿಂದ ಸಾವು ಹೆಚ್ಚುತ್ತಿರುವುದು ಆತಂಕವಾಗಿದ್ದು, ಈ ಬಗ್ಗೆ ಜನರು ಮುಂಜಾಗ್ರತಾ ಕ್ರಮಗಳನ್ನು ಅನುಸರಿಸ ಬೇಕು ಎಂದು ಮನವಿ ಮಾಡಿದರು.

ಆದರ್ಶ ಕಾರ್ಯ ಕೈಗೊಂಡಿರುವ ಈ ಸಮಿತಿಯವರಿಗೆ ಅಥಣಿ ವೀರಣ್ಣ ಅವರು ವೈಯಕ್ತಿಕವಾಗಿ 20,000 ರೂ.ಗಳನ್ನು ನೀಡಿದರು.

ಶಿವಸೈನ್ಯ ಯುವಕರ ಸಂಘದ ಗೌರವಾಧ್ಯಕ್ಷ ಶಶಿಧರ ಹೆಮ್ಮನಬೇತೂರು ಅವರು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ, ತರಳಬಾಳು ಹಿರಿಯ ಜಗದ್ಗುರುಗಳನ್ನು ಸ್ಮರಿಸುತ್ತಾ, ಮುಂದೆ ಗುರಿ ಇರಬೇಕು, ಹಿಂದೆ ಗುರು ಇರಬೇಕು ಎಂಬಂತೆ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರ ಮಾರ್ಗದರ್ಶನದಲ್ಲಿ ದಾಸೋಹ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ ಎಂದು ತಿಳಿಸಿದರಲ್ಲದೇ, ಈ ಪುಣ್ಯದ ಕಾರ್ಯಕ್ಕೆ ಕೈಜೋಡಿಸಿ ಸಹಕಾರ ನೀಡುತ್ತಿರುವ ಎಲ್ಲರಿಗೂ ಕೃತಜ್ಞತೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಆಶ್ರಮದ ಕಾರ್ಯದರ್ಶಿ ಎ.ಹೆಚ್. ಶಿವಮೂರ್ತಿಸ್ವಾಮಿ, ಸಹ ಕಾರ್ಯದರ್ಶಿ ಜೆ.ಎನ್.ಕರಿಬಸಪ್ಪ, ನಿರ್ದೇಶಕರಾದ ಬಸವನಗೌಡ, ಹಿರಿಯ ಪತ್ರಕರ್ತ ಬಕ್ಕೇಶ್ ನಾಗನೂರು, ಬಿಎಸ್ಸೆನ್ನೆಲ್ ಮಂಜಣ್ಣ, ಶಿವಸೈನ್ಯ ಯುವಕರ ಸಂಘದ ಮಾಗನೂರು ಉಮೇಶ್ ಗೌಡ್ರು, ಶ್ರೀನಿವಾಸ್ ಮೆಳ್ಳೇಕಟ್ಟೆ, ಪ್ರಭು ಕಾವಲಳ್ಳಿ, ಕೊರಟಿಕೆರೆ ಶಿವಕುಮಾರ್, ಸತೀಶ್ ಸಿರಿಗೆರೆ, ಕಲ್ಯಾಣ ಮಂಟಪದ ಮುಖ್ಯಸ್ಥ ವೈ.ಬಸವಂತಪ್ಪ ಮತ್ತಿತರರು ಉಪಸ್ಥಿತರಿದ್ದರು.

**50,000 ರೂ. ದೇಣಿಗೆ :** ಹಳೇ ಬಿಸಲೇರಿಯ ಇಂಜಿನಿಯರ್ ನಾಗರಾಜ್ ಅವರು ಅನ್ನದಾಸೋಹ ಕಾರ್ಯಕ್ಕೆ 50,000 ರೂ. ನೀಡಿದರು.

---

## ಪ್ರಾಣಯಾಮ, ಧ್ಯಾನ ಶಿಬಿರ

ದಾವಣಗೆರೆ, ಮೇ 24- ನಾಳೆ ದಿನಾಂಕ 25 ರಿಂದ ಪ್ರತಿದಿನ ಸಂಜೆ 6.30ರಿಂದ 7.30ರವರೆಗೆ ಪ್ರಾಣಯಾಮ, ಧ್ಯಾನ, ಕಾಸ್ಮಿಕ್ ಹೀಲಿಂಗ್ ಆನ್ ಲೈನ್ ಶಿಬಿರವು ನಗರದ ದಿವ್ಯ ಯೋಗ ಮಂದಿರದಿಂದ ನಡೆಯಲಿದೆ. ಕೊರೊನಾದ ಸಂದರ್ಭದಲ್ಲಿ ಆಶಾವಾದಿ, ಪ್ರೇರಣೆ, ಭರವಸೆ ಹರಡುವ ನಿಟ್ಟಿನಲ್ಲಿ ಈ ಶಿಬಿರವನ್ನು ಆಯೋಜಿಸಲಾಗಿದೆ ಎಂದು ಮಂದಿರದ ಸಂಚಾಲಕ ಅಶೋಕ ಗುರೂಜಿ ತಿಳಿಸಿದ್ದಾರೆ.ಸಾರ್ವಜನಿಕರು ಶಿಬಿರದಲ್ಲಿ ಭಾಗವಹಿಸಬಹುದಾಗಿದ್ದು, ವಿವರಕ್ಕೆ 99726-00713 ಇಲ್ಲಿ ಸಂಪರ್ಕಿಸಬಹುದು.

## ಕೊರೊನಾ ಸಾವಿಗೆ 4 ಲಕ್ಷ ಪರಿಹಾರ

### ಕೇಂದ್ರಕ್ಕೆ ನೋಟೀಸ್

ನವದೆಹಲಿ, ಮೇ 24 - ಕೊರೊನಾದಿಂದ ಮೃತಪಟ್ಟವರ ಕುಟುಂಬಗಳಿಗೆ ತಲಾ 4 ಲಕ್ಷ ರೂ.ಗಳ ಪರಿಹಾರ ನೀಡಬೇಕೆಂದು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿಯೊಂದು ದಾಖಲಾಗಿದ್ದು, ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ನ್ಯಾಯಾಲಯ ನೋಟಿಸ್ ಕಳಿಸಿದೆ.

ರಜೆ ಅವಧಿ ಪೀಠದ ನ್ಯಾಯಮೂರ್ತಿಗಳಾದ ಅಶೋಕ್ ಭೂಷಣ್, ಎಂ.ಆರ್. ಷಾ ಅವರು ನೋಟಿಸ್ ಕಳಿಸಿದ್ದು, ಕೊರೊನಾದಿಂದ ಸಾವನ್ನಪ್ಪಿರುವವರಿಗೆ ಮರಣ ಪ್ರಮಾಣ ಪತ್ರ ನೀಡುವಲ್ಲಿ ಏಕರೂಪದ ನೀತಿ ಇರಬೇಕು ಎಂದು ಹೇಳಿದೆ.

ಮರಣ ಪ್ರಮಾಣ ಪತ್ರ ನೀಡುವ ವಿಷಯಕ್ಕೆ ಸಂಬಂಧಿಸಿದಂತೆ. ಐ.ಸಿ.ಎಂ.ಆರ್. ಮಾರ್ಗಸೂಚಿಗಳನ್ನು ತನ್ನ ಎದುರು ಹಾಜರು ಪಡಿಸಬೇಕು. ಈ ವಿಷಯಗಳಲ್ಲಿ ದಾಖಲೆ ನೀಡುವುದರಲ್ಲಿ ಸಮಾನ ನೀತಿ ಇರಬೇಕು ಎಂದು ನ್ಯಾಯಾಲಯ ಹೇಳಿದೆ.

ಕೊರೊನಾದಿಂದ ಮೃತರಿಗೆ ವಿಕೋಪ ನಿರ್ವಹಣೆ ಕಾಯ್ದೆಯಡಿ ತಲಾ 4 ಲಕ್ಷ ರೂ. ಪರಿಹಾರ ನೀಡಬೇಕು ಹಾಗೂ ಮರಣ ಪ್ರಮಾಣ ಪತ್ರ ನೀಡುವಲ್ಲಿ ಏಕರೂಪದ ನೀತಿ ಇರಬೇಕು ಎಂದು ಸುಪ್ರೀಂ ಕೋರ್ಟ್‌ನಲ್ಲಿ ಎರಡು ಅರ್ಜಿಗಳು ದಾಖಲಾಗಿವೆ. ಅಧಿಕೃತ ದಾಖಲೆ ಇಲ್ಲವೇ ಮರಣ ಪ್ರಮಾಣ ಪತ್ರದಲ್ಲಿ ಏಕರೂಪತೆ ಇರದೇ ಹೋದರೆ ಸರ್ಕಾರ ಪರಿಹಾರ ನೀಡಿದರೂ ಸಹ ಪಡೆಯುವಲ್ಲಿ ಕುಟುಂಬದವರಿಗೆ ತೊಡಕಾಗುತ್ತದೆ ಎಂದು ನ್ಯಾಯಾಲಯ ಹೇಳಿದೆ.

ಮರಣ ಪ್ರಮಾಣ ಪತ್ರಕ್ಕೆ ಸಂಬಂಧಿಸಿದಂತೆ ಐ.ಸಿ.ಎಂ.ಆರ್. ಮಾರ್ಗಸೂಚಿ ಪಾಲಿಸುತ್ತಿರುವುದಾಗಿ ರಾಜ್ಯಗಳು ಹೇಳುತ್ತಿವೆ. ಐ.ಸಿ.ಎಂ.ಆರ್. ಮಾರ್ಗಸೂಚಿಗಳನ್ನು ನಮ್ಮ ಎದುರು ಹಾಜರು ಪಡಿಸಬೇಕು ಹಾಗೂ ಏಕರೂಪದ ನೀತಿಯ ಕುರಿತು ತಿಳಿಸಬೇಕು ಎಂದು ಪೀಠ ಹೇಳಿದೆ.

ಹಲವಾರು ಪ್ರಕರಣಗಳಲ್ಲಿ ಕೊರೊನಾ ಕಾರಣದಿಂದಾಗಿ ಶ್ವಾಸಕೋಶ ಸೋಂಕು ಹಾಗೂ ಹೃದಯ ಸಮಸ್ಯೆ ಉಂಟಾಗಿ ಸಾವು ಸಂಭವಿಸಿರಬಹುದು. ಆದರೆ, ಇದನ್ನು ಮರಣ ಪ್ರಮಾಣ ಪತ್ರಗಳಲ್ಲಿ ತೋರಿಸಿರುವುದಿಲ್ಲ ಎಂದು ಪೀಠ ತಿಳಿಸಿದೆ. ಈ ಹಿನ್ನೆಲೆಯಲ್ಲಿ, ಒಂದು ವೇಳೆ ಕೊರೊನಾ ಸಾವಿಗೆ ಪರಿಹಾರ ಪ್ರಕಟಿಸಿದರೂ ಸಹ ಈ ಕುಟುಂಬ ದವರು ನೆರವು ಪಡೆಯಲು ಸಾಧ್ಯವಾಗದೇ ಹೋಗಬಹುದು ಎಂದು ನ್ಯಾಯಾಲಯ ಹೇಳಿದೆ. ನ್ಯಾಯಾಲಯ ಪ್ರಕರಣದ ವಿಚಾರಣೆಯನ್ನು ಜೂನ್ 11ಕ್ಕೆ ನಿಗದಿ ಪಡಿಸಿದ್ದು, ಅಂದು ಕೇಂದ್ರ ಸರ್ಕಾರ ಉತ್ತರ ಸಲ್ಲಿಸುವಂತೆ ತಿಳಿಸಿದೆ.

ವಕೀಲ ಗೌರವ್ ಕುಮಾರ್ ಬನ್ಸಾಲ್ ಎಂಬುವವರು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದು, ವಿಕೋಪ ನಿರ್ವಹಣೆ ಕಾಯ್ದೆಯ ಅನ್ವಯ, ಕೊರೊನಾದಿಂದ ಸಾವನ್ನಪ್ಪಿದವರ ಕುಟುಂಬದವರು 4 ಲಕ್ಷ ರೂ. ಪರಿಹಾರ ಪಡೆಯಲು ಅರ್ಹರಾಗಿದ್ದಾರೆ ಎಂದು ವಾದ ಮಂಡಿಸಿದ್ದಾರೆ.

## ರಾಜ್ಯ : 22.18 ಲಕ್ಷ ರೆಮ್ಡಿಸಿವಿರ್

ಬೆಂಗಳೂರು, ಮೇ 24 - ಎಲ್ಲಾ ರಾಜ್ಯಗಳಿಗೆ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ನಿನ್ನೆಯಿಂದ ಮೇ 30 ರವರೆಗಿನ ಅವಧಿಗೆ ಹೆಚ್ಚುವರಿಯಾಗಿ 22.17 ಲಕ್ಷ ರೆಮ್ಡಿಸಿವಿರ್ ಬಾಟಲಿಗಳನ್ನು ಮಂಜೂರು ಮಾಡಲಾಗಿದೆ ಎಂದು ಕೇಂದ್ರ ರಾಸಾಯನಿಕಗಳು ಮತ್ತು ರಸಗೊಬ್ಬರ ಖಾತೆ ಸಚಿವ ಡಿ.ವಿ. ಸದಾನಂದ ಗೌಡ ಘೋಷಿಸಿದ್ದಾರೆ.

ಈ ಮೊದಲು 76.70 ಲಕ್ಷ ಔಷಧಿಯ ಬಾಟಲಿಗಳನ್ನು ಮೇ 23 ರವರೆಗೆ ಎಲ್ಲಾ ರಾಜ್ಯಗಳಿಗೆ ಲಭ್ಯವಾಗುವಂತೆ ಮಾಡಲಾಗಿತ್ತು.

---

# ಆಶಾ ಕಾರ್ಯಕರ್ತೆಯರಿಂದ ಆನ್‌ಲೈನ್ ಚಳವಳಿ




ದಾವಣಗೆರೆ, ಮೇ 24- ರಾಜ್ಯವ್ಯಾಪಿ ಹೋರಾಟದ ಕರೆಯ ಮೇರೆಗೆ ಜಿಲ್ಲೆಯಲ್ಲಿಯೂ ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಆಶಾ ಕಾರ್ಯಕರ್ತೆಯರು ಮನೆಯಿಂದ ಮತ್ತು ತಮ್ಮ ಕೆಲಸದ ಸ್ಥಳದಿಂದ ವಿವಿಧ ಬೇಡಿಕೆಗಳಿಗೆ ಒತ್ತಾಯಿಸಿ, ಇಂದು ಆನ್‌ಲೈನ್ ಚಳುವಳಿ ನಡೆಸಿದರು.

ಪ್ರತಿಭಟನೆಯ ಫೋಟೋಗಳನ್ನು ವಿವಿಧ ಸಾಮಾಜಿಕ ಜಾಲ ತಾಣದಲ್ಲಿ ಹರಿಬಿಟ್ಟು ರಾಜ್ಯ ಸರ್ಕಾರ ಹಾಗೂ ಆರೋಗ್ಯ ಇಲಾಖೆಗೆ ತಮ್ಮ ಹಕ್ಕೊತ್ತಾಯಗಳಿಗೆ ಪರಿಹಾರ ಒದಗಿಸಬೇಕೆಂದು ಗಮನ ಸೆಳೆದರು.

ಸಂಘದ ಮುಖಂಡರುಗಳು ಸೇರಿದಂತೆ ಜಿಲ್ಲೆ, ತಾಲ್ಲೂಕಿನ ನೂರಾರು ಆಶಾ ಕಾರ್ಯತೆಯರು ಭಿತ್ತಿಪತ್ರಗಳನ್ನು ಪ್ರದರ್ಶಿಸಿ ಪ್ರತಿಭಟಿಸಿದರು.

ಕೊರೊನಾ ವಾರಿಯರ್ಸ್‌ಗಳಾಗಿ ಸೇವೆ ಸಲ್ಲಿಸುತ್ತಿದ್ದರೂ ಕಳೆದ 2 ತಿಂಗಳ ಮತ್ತು ಮೇ ತಿಂಗಳು ಸೇರಿದರೆ 3 ತಿಂಗಳಿಂದ ವೇತನ ನೀಡದೆ ಇಲಾಖೆಯು ಆಶಾಗಳನ್ನು ಈ ಲಾಕ್‌ಡೌನ್ ಸಂದರ್ಭದಲ್ಲಿ ಆರ್ಥಿಕ ಸಂಕಷ್ಟಕ್ಕೆ ತಳ್ಳಿದೆ. ಆಶಾಗಳಿಗೆ ಕೆಲಸ ಮಾಡುವುದಕ್ಕೆ ಅಗತ್ಯವಿರುವಷ್ಟು ಮಾಸ್ಕ್, ಸ್ಯಾನಿಟೈಸರ್ ಹಾಗೂ ಗ್ಲೌಸ್ ಕೊಡದ ಇಲಾಖೆಯು ಅಮಾನವೀಯವಾಗಿ ನಡೆದುಕೊಳ್ಳುತ್ತಿದೆ ಎಂದು ಆಶಾ ಕಾರ್ಯಕರ್ತೆಯರು ಆನ್ ಲೈನ್ ಚಳುವಳಿಯಲ್ಲಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಪ್ರತಿ ಜಿಲ್ಲೆಯಲ್ಲಿ 20ರಿಂದ 40 ಜನ ಆಶಾ ಕಾರ್ಯಕರ್ತೆಯರು ಸೋಂಕಿಗೊಳಗಾಗಿರುವ ಹಿನ್ನೆಲೆಯಲ್ಲಿ ಅವರನ್ನು ಅವರ ಕುಟುಂಬವನ್ನು ಸಶಕ್ತಗೊಳಿಸಲು ಪ್ರತಿ ಆಶಾ ಕಾರ್ಯಕರ್ತೆಯರಿಗೆ 25 ಸಾವಿರ ಪರಿಹಾರ ನೀಡಬೇಕು, ವಿಶೇಷ ಸೇವೆಗೆಂದು ಇತರೆ ಎಲ್ಲಾ ಕೊರೊನಾ ವಾರಿಯರ್ಸ್‌ಗಳಿಗೆ ಆರೋಗ್ಯ ಇಲಾಖೆಯಲ್ಲಿ ಮಾಸಿಕ 5 ಸಾವಿರ ವಿಶೇಷ ಭತ್ಯೆ ನೀಡಿದಂತೆ ಆಶಾ ಕಾರ್ಯಕರ್ತೆಯರಿಗೂ ನೀಡಬೇಕು, ಕಳೆದ ವರ್ಷ ಕೋವಿಡ್ ಮೊದಲ ಅಲೆಯಲ್ಲಿ ಮತ್ತು ಈಗ ಕೋವಿಡ್‌ನಿಂದ ಸಾವಿಗೀಡಾದ ಕುಟುಂಬಕ್ಕೆ ಘೋಷಣೆಯಾದ 50 ಲಕ್ಷ ರೂ. ಪರಿಹಾರ ನೀಡಬೇಕೆಂದು ಆಗ್ರಹಿಸಿದ್ದಾರೆ.

ಈ ಆನ್‌ಲೈನ್ ಚಳುವಳಿಯಲ್ಲಿ ತಾಲ್ಲೂಕಿನ ಸಲಹೆಗಾರರಾದ ಸುಮಾ ನಲ್ಲೂರು, ಲೀಲಾವತಿ ಬಿದರಕೆರೆ, ಭಾರತಿ, ಜಗಳೂರು ತಾಲ್ಲೂಕು ಸಲಹೆಗಾರ ಮಧು ತೊಗಲೇರಿ, ಪರ್‌ವೀನ್ ಬಾನು, ಅನಿತ ಆನಗೋಡು, ವಿಜಯ ಲಕ್ಷ್ಮಿ, ಆಶಾ ಪಾಂಡೋಮಟ್ಟಿ, ವಿಶಾಲಾಕ್ಷಿ ಸೇರಿದಂತೆ ಇನ್ನಿತರೆ ತಾಲ್ಲೂಕು ಮುಖಂಡರು ಒಳಗೊಂಡಂತೆ ನೂರಾರು ಆಶಾ ಕಾರ್ಯಕರ್ತೆಯರು ಪಾಲ್ಗೊಂಡಿದ್ದರು.

## ಸಿಕ್ಕಿಂನಲ್ಲಿ 100ಕ್ಕೂ ಹೆಚ್ಚು ಸನ್ಯಾಸಿಗಳಿಗೆ ಕೊರೊನಾ

ನವದೆಹಲಿ, ಮೇ 24 – ಸಿಕ್ಕಿಂನಲ್ಲಿ 100ಕ್ಕೂ ಹೆಚ್ಚು ಬೌದ್ಧ ಸನ್ಯಾಸಿಗಳಲ್ಲಿ ಕೊರೊನಾ ಸೋಂಕು ಕಾಣಿಸಿಕೊಂಡಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಬೌದ್ಧ ವಿಹಾರಗಳ ಬಗ್ಗೆ ನಿಗಾ ವಹಿಸಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಎರಡು ಬೌದ್ಧ ವಿಹಾರಗಳ 158 ಜನರಲ್ಲಿ ಭಾನುವಾರ ಸೋಂಕು ಕಾಣಿಸಿಕೊಂಡಿತ್ತು. ವಿಹಾರಗಳ ಅರ್ಧಕ್ಕೂ ಹೆಚ್ಚು ಜನರಲ್ಲಿ ಸೋಂಕಿರುವುದು ಕಂಡು ಬಂದಿದೆ.

ಸೋಂಕು ಕಂಡು ಬಂದ ನಂತರ ಧರ್ಮ ಚಕ್ರ ಹಾಗೂ ಗಂಜಂಗ್ ವಿಹಾರಗಳನ್ನು ಕಂಟೈನ್‌ಮೆಂಟ್ ವಲಯಗಳೆಂದು ಘೋಷಿಸಲಾಗಿದೆ.

## ನಗರದಲ್ಲಿ ನಾಳೆ ಮಾಂಸ ಮಾರಾಟ ನಿಷೇಧ

ದಾವಣಗೆರೆ, ಮೇ 24- ನಾಡಿದ್ದು ದಿನಾಂಕ 26 ರ ಬುಧವಾರ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಪ್ರಾಣಿ ವಧೆ, ಪ್ರಾಣಿ ಮಾಂಸ, ಮೀನಿನ ಮಾಂಸ ಮಾರಾಟವನ್ನು ನಿಷೇಧಿಸಲಾಗಿದೆ ಎಂದು ಮಹಾನಗರಪಾಲಿಕೆಯ ಆಯುಕ್ತ ವಿಶ್ವನಾಥ ಮುದಜ್ಜಿ ತಿಳಿಸಿದ್ದಾರೆ.

---

## ದೇಶದಲ್ಲಿ 'ಸ್ಪುಟ್ನಿಕ್' ಲಸಿಕೆ ಉತ್ಪಾದನೆ ಆರಂಭ

ನವದೆಹಲಿ, ಮೇ 24 – ದೇಶೀ ಔಷಧ ಉದ್ಯಮವಾದ ಪ್ಯಾನೇಷಿಯಾ ಬಯೋಟೆಕ್, ಸ್ಪುಟ್ನಿಕ್ ವಿ ಲಸಿಕೆ ಉತ್ಪಾದನೆ ಆರಂಭಿಸಿದೆ. ರಷ್ಯಾದ ಆರ್.ಡಿ.ಐಎಫ್ ಜೊತೆಗೂಡಿ ಈ ಲಸಿಕೆಯನ್ನು ಉತ್ಪಾದಿಸಲಾಗುತ್ತಿದೆ. ಲಸಿಕೆ ಉತ್ಪಾದನೆ ಬಗ್ಗೆ ಜಂಟಿ ಹೇಳಿಕೆ ನೀಡಿರುವ ಕಂಪನಿಗಳು, ವರ್ಷಕ್ಕೆ 10 ಕೋಟಿ ಡೋಸ್ ಲಸಿಕೆ ಉತ್ಪಾದನೆ ಮಾಡುವುದಾಗಿ ಹೇಳಿವೆ. ಹಿಮಾಚಲ ಪ್ರದೇಶದ ಬಡ್ಡಿ ಎಂಬಲ್ಲಿ ಪ್ಯಾನೇಷಿಯಾದ ಉತ್ಪಾದನಾ ಘಟಕವಿದ್ದು, ಉತ್ಪಾದಿತ ಲಸಿಕೆಯನ್ನು ರಷ್ಯಾದಲ್ಲಿರುವ ಗಮಾಲಿಯಾ ಸೆಂಟರ್‌ಗೆ ಗುಣಮಟ್ಟ ನಿಯಂತ್ರಣಕ್ಕಾಗಿ ರವಾನಿಸಲಾಗುವುದು.

## ವೆಂಟಿಲೇಟರ್ ಬೆಡ್ ಕಲ್ಪಿಸಿ



ದಾವಣಗೆರೆ, ಮೇ 24- ಪ್ರತಿ ಜಿಲ್ಲೆಯಲ್ಲಿ ಕೊರೊನಾ ಪೀಡಿತರಿಗಾಗಿ 1 ಸಾವಿರ ಬೆಡ್ ಹಾಗೂ 50 ವೆಂಟಿಲೇಟರ್ ಬೆಡ್‌ಗಳನ್ನು ಹೆಚ್ಚುವರಿಯಾಗಿ ವ್ಯವಸ್ಥೆ ಮಾಡುವಂತೆ ಕರ್ನಾಟಕ ಏಕತಾ ವೇದಿಕೆ ರಾಜ್ಯಾಧ್ಯಕ್ಷ ಎನ್.ಹೆಚ್. ಹಾಲೇಶ್ ಮುಖ್ಯಮಂತ್ರಿಗಳನ್ನು ಒತ್ತಾಯಿಸಿದ್ದಾರೆ. ಆಕ್ಸಿಜನ್, ವೆಂಟಿಲೇಟರ್‌ಗಳು ಸಿಗದೆ ಸಾವಿನ ಪ್ರಮಾಣ ಹೆಚ್ಚಾಗುತ್ತಿದ್ದು, ಆರೋಗ್ಯ ಸಚಿವ ಸುಧಾಕರ್ ಅವರು ಈ ಬಗ್ಗೆ ಗಂಭೀರವಾಗಿ ಪರಿಗಣಿಸಿ ಸೂಕ್ತ ಪರಿಹಾರ ಕಲ್ಪಿಸುವಂತೆ ಮನವಿ ಮಾಡಿದ್ದಾರೆ. ಸಾಧ್ಯವಾಗದಿದ್ದರೆ ರಾಜೀನಾಮೆ ನೀಡುವಂತೆ ಆಗ್ರಹಿಸಿದ್ದಾರೆ.

# ಮೈ ಮರೆತು ಖರೀದಿಗೆ ಮುಗಿ ಬೀಳುವ ಜನರು

# ಪುನಃ ಹಳೇ ಚಾಳಿ : ಮುಂಜಾಗ್ರತೆಯಿಂದ ದೂರ



ದಾವಣಗೆರೆ, ಮೇ 24- ಜಿಲ್ಲೆಯಲ್ಲಿ ಒಂದು ವಾರಗಳ ಕಾಲ ಸಂಪೂರ್ಣ ಲಾಕ್ ಡೌನ್ ಆದೇಶವಿದ್ದು, ಬೆಳಗ್ಗೆ 10 ಗಂಟೆಯವರೆಗಿನ ಅಗತ್ಯ ವಸ್ತುಗಳ ಖರೀದಿಯ ಅವಕಾಶದ ವೇಳೆ ಜನಜಂಗುಳಿ, ಕೊರೊನಾ ಮುಂಜಾಗ್ರತೆ ಮಾಯವಾಗುತ್ತಿದೆ.

ಕೊರೊನಾ ಪ್ರಕರಣಗಳು ಹೆಚ್ಚಾಗುತ್ತಿದ್ದರೂ ಜನರು ಮಾತ್ರ ಮೈ ಮರೆತಿದ್ದಾರೆ. ಅವಕಾಶದ ಸಮಯದಲ್ಲಿ ಸಾಮಾಜಿಕ ಅಂತರ, ಕೊರೊನಾ ಮುಂಜಾಗ್ರತಾ ಕ್ರಮಗಳ ಪಾಲನೆಯಿಂದ ದೂರ ಸರಿದು, ಕೇವಲ ಖರೀದಿಗೆ ಮುಗಿ ಬೀಳುತ್ತಿರುವುದು ಭಯ ಹುಟ್ಟಿಸುವಂತೆ ಮಾಡಿದೆ.

ಅಗತ್ಯ ವಸ್ತುಗಳ ಪ್ರತಿ ಅಂಗಡಿ ಮುಂಗಟ್ಟುಗಳ ಮುಂದೆ ಜನಜಂಗುಳಿ ಇರುತ್ತದೆ. ತರಕಾರಿ, ಹಣ್ಣು ಖರೀದಿಗೆ ಜನಜಾತ್ರೆ ಕಂಡು ಬರುತ್ತಿದೆ. ಅಲ್ಲದೇ, ಅವಕಾಶದ ಸಮಯ ಮೀರಿಯೂ ಜನ ಕುಂಟು ನೆಪ ಹೇಳಿ ರಸ್ತೆಗಿಳಿಯುತ್ತಿರುವುದು ಪೊಲೀಸ್ ಇಲಾಖೆ, ಜಿಲ್ಲಾಡಳಿತ, ತಾಲ್ಲೂಕು ಆಡಳಿತಕ್ಕೆ ತಲೆನೋವಾಗಿ ಪರಿಣಮಿಸಿದೆ.

ಬೆಳಗ್ಗೆ ಯಾವುದೇ ಅಗತ್ಯ ವಸ್ತುಗಳ ಖರೀದಿಗೆ ಅವಕಾಶ ನೀಡದೇ ಸಂಪೂರ್ಣ ಲಾಕ್ ಡೌನ್ ವಿಧಿಸಿದ ಮೊದಲ ದಿನವೂ ಕೆಲವರು ಅದನ್ನು ಮೀರಿ ರಸ್ತೆಗಿಳಿದಿದ್ದರು. 2ನೇ ದಿನವಾದ ಭಾನುವಾರ ನಗರವೆಲ್ಲಾ ಸಂಪೂರ್ಣ ಸ್ತಬ್ದವಾಗಿತ್ತು. ಜನ ಓಡಾಟವು ವಿರಳವಾಗಿತ್ತು. ಇಂದು ಪುನಃ ಬೆಳಗ್ಗೆ ಅಗತ್ಯ ವಸ್ತುಗಳ ಖರೀದಿಗೆ ಅವಕಾಶ ನೀಡುತ್ತಿದ್ದಂತೆ ಜನರು ಹಳೇ ಚಾಳಿಯನ್ನೇ ಮುಂದುವರೆಸಿದರು.

**ರಸ್ತೆಗೆ ಇಳಿದ ತಹಶೀಲ್ದಾರ್ ಗಿರೀಶ್:** ನಗರದ ಕೆಆರ್ ಮಾರುಕಟ್ಟೆಯಲ್ಲಿ ಅನಗತ್ಯವಾಗಿ ಓಡಾಡುತ್ತಿದ್ದವರಿಗೆ ತಹಶೀಲ್ದಾರ್ ಗಿರೀಶ್ ಇಂದು ಕ್ಲಾಸ್ ತೆಗೆದುಕೊಂಡರು. ಸರ್ಕಾರದ ಆದೇಶವನ್ನು ಪಾಲನೆ ಮಾಡುವಂತೆ ಮನವಿ ಸಹ ಮಾಡಿದರು. ಪೊಲೀಸರ ಜೊತೆಗೂಡಿ ದಂಡ ವಿಧಿಸಿದರು. ಪ್ರತಿಯೊಂದು ಏರಿಯಾಗಳಲ್ಲಿ ಸಂಚರಿಸಿ ಮನೆಯಿಂದ ಹೊರ ಬಾರದಂತೆ ತಹಶೀಲ್ದಾರ್ ಸೂಚನೆ ನೀಡಿದರು.

ಕೊತ್ತಂಬರಿ ಸೊಪ್ಪು ತರಲು ಬಂದ ವ್ಯಕ್ತಿಗೆ ಪೊಲೀಸರು ಕ್ಲಾಸ್ ತೆಗೆದುಕೊಂಡ ಘಟನೆ ನಗರದ ಎಂಜಿ ರಸ್ತೆಯಲ್ಲಿ ನಡೆಯಿತು. ಅವಧಿ ಮುಗಿದರೂ ಸಂಚಾರ ನಡೆಸುವ ವಾಹನಗಳ ತಪಾಸಣೆ ನಡೆಸುತ್ತಿದ್ದಾಗ ಬಂದ ಬೈಕ್ ಸವಾರನನ್ನು ನಿಲ್ಲಿಸಿ ಪೊಲೀಸರು ಪರಿಶೀಲನೆ ನಡೆಸಿದರು.

ಕೊತ್ತಂಬರಿ, ತರಕಾರಿ ತರೋಕೆ ಹೋಗಿದ್ದೆ ಎಂದು ಬೈಕ್ ಸವಾರ ಸಬೂಬು ಹೇಳಿದ. ಹತ್ತು ಗಂಟೆಯವರೆಗೂ ಮಾತ್ರ ಅವಕಾಶವಿದ್ದರೂ ತೆಗೆದುಕೊಳ್ಳುವುದನ್ನು ಬಿಟ್ಟು ಈಗ ಬಂದಿದ್ದೀರಾ ಎಂದು ಕ್ಲಾಸ್ ತೆಗೆದುಕೊಂಡರು. ಒಂದು ವಾರಗಳ ಕಾಲ ಕಂಪ್ಲೀಟ್ ಲಾಕ್ ಡೌನ್ ಇದ್ದರೂ ಸಬೂಬು ಹೇಳಿಕೊಂಡು ಜನರು ಹೊರ ಬರುತ್ತಿದ್ದಾರೆ.

## ಪೊಲೀಸರ ತಲೆ ಬಿಸಿ ಮಾಡಿದ ಕೊರೊನಾ ಸೋಂಕಿತ



ದಾವಣಗೆರೆ, ಮೇ 24- ಕೊರೊನಾ ಸೋಂಕಿತನೋರ್ವ ಪೊಲೀಸರ ತಲೆ ಬಿಸಿ ಮಾಡಿರುವ ಘಟನೆ ನಗರದ ಶಾಮನೂರು ರಸ್ತೆ ಬಳಿ ಇಂದು ನಡೆದಿದೆ. ಕೊರೊನಾ ಪಾಸಿಟಿವ್ ಬಂದಿರುವ ವ್ಯಕ್ತಿ ಸ್ಕೂಟಿಯಲ್ಲಿ ಆಸ್ಪತ್ರೆಗೆ ಹೊರಟಾಗ ಪೊಲೀಸರ ಕೈಗೆ ಸಿಕ್ಕಿದ್ದು, ಹೊರಗಡೆ ಬಂದಿರುವ ಬಗ್ಗೆ ಪೊಲೀಸರು ಪ್ರಶ್ನಿಸಿದಾಗ ಸುಮ್ನೆ ಬಂದಿರುವುದಾಗಿ ಆ ವ್ಯಕ್ತಿ ಹೈಡ್ರಾಮಾ ಮಾಡಿದ್ದಾನೆ.

ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿಯವರು ಇಡೀ ಜಿಲ್ಲೆಯನ್ನು ಲಾಕ್ ಡೌನ್ ಮಾಡಿದ್ದಾರೆ. ಆದರೂ ಏಕೆ ಹೊರಗೆ ಬಂದಿಯಾ ಎಂದು ಸಂಚಾರಿ ಪೊಲೀಸ್ ದಬಾಯಿಸುತಿದ್ದಂತೆ ತಾನು ಸೋಂಕಿತ ಎಂದು ಪೊಲೀಸರಿಗೆ ತಿಳಿಸಿದ್ದಾನೆ. ಇನ್ನು ಯುವಕ ಕೋವಿಡ್ ಸೋಂಕಿತ ಅಂತ ಗೊತ್ತಾಗುತ್ತಿದ್ದಂತೆ ಪೊಲೀಸ್ ಪೇದೆ ಗಲಿಬಿಲಿಗೊಂಡರು. ಬಳಿಕ ತಾನು ಆಸ್ಪತ್ರೆಗೆ ಹೋಗಬೇಕೆಂದು ಹೇಳಿದ ತಕ್ಷಣ ಸಂಚಾರಿ ಪೊಲೀಸರು ಸೋಂಕಿತನನ್ನು ಬಿಟ್ಟು ಕಳುಹಿಸಿದ ಪ್ರಸಂಗ ನಡೆಯಿತು.







## ಹುಲಿಗಿನ ಹೊಳೆ : ಸಿಡಿಲಿಗೆ ರೈತನ ಸಾವು

ಮಲೇಬೆನ್ನೂರು, ಮೇ 24- ಹುಲಿಗಿನ ಹೊಳೆ ಗ್ರಾಮದಲ್ಲಿ ಸಿಡಿಲು ಬಡಿದು ರೈತನೋರ್ವ ಮೃತ ಪಟ್ಟಿರುವ ಘಟನೆ ಸೋಮವಾರ ಸಂಜೆ ನಡೆದಿದೆ. ಗ್ರಾಮದ ಕೆ.ನಾಗರಾಜ್ ತಂದೆ ರುದ್ರಪ್ಪ (40) ಎಂಬಾತ ಭತ್ತದ ಗದ್ದೆಯಲ್ಲಿ ಟ್ರ್ಯಾಕ್ಟರ್‌ಗೆ ಭತ್ತ ತುಂಬಿಸುವಾಗ ಸಿಡಿಲು ಬಡಿದು ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾರೆ. ಘಟನೆಯಲ್ಲಿ ಗಾಯಗೊಂಡ ಸಹೋದರ ಕೆ.ವೀರೇಶ್ ಅವರನ್ನು ದಾವಣಗೆರೆ ಸಿಜಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

## ಮೂರನೇ ವರ್ಷದ ಪುಣ್ಯಸ್ಮರಣೆ



**ಶ್ರೀಮತಿ ನಾಗರತ್ನ ಬನ್ನಿಕಟ್ಟಿ**

(ಬಿ.ಆರ್. ಪ್ರಕಾಶ್, ನಿ.ಕೃಷಿ ಮಾರಾಟ ಇಲಾಖೆ ಇವರ ಧರ್ಮಪತ್ನಿ)

ಜನನ : 19.08.1966, ನಿಧನ : 25.05.2018

ನೀವು ನಮ್ಮನ್ನಗಲಿ ಇಂದಿಗೆ 3 ವರ್ಷಗಳಾದರೂ ನಿಮ್ಮ ತತ್ವಾದರ್ಶ, ಕರುಣೆ ಮತ್ತು ಮಾರ್ಗದರ್ಶನ ನಮ್ಮ ಹೃದಯಗಳಲ್ಲಿ ಹಚ್ಚ ಹಸಿರಾಗುಳಿದಿವೆ. ಅನುದಿನವು, ಅನುಕ್ಷಣವು ನಿಮ್ಮ ಸ್ಮರಣೆಯೇ ನಮಗೆ ದಿವ್ಯ ಚೇತನ. ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುವೆವು ನಾವಿಂದು ಎಂದೆಂದೂ...

ಇಂತಿ ನಿಮ್ಮನ್ನು ಸ್ಮರಿಸುವ ....

ಪತಿ : ಬಿ.ಆರ್. ಪ್ರಕಾಶ್ ಮತ್ತು ಮಕ್ಕಳು
ಅಳಿಯಂದಿರು, ಮೊಮ್ಮಕ್ಕಳು, ಮಗ-ಸೊಸೆ
ಬನ್ನಿಕಟ್ಟಿ ಕುಟುಂಬದವರು ಹಾಗೂ ಬಂಧು-ಮಿತ್ರರು

## ಶ್ರೀಮತಿ ನಾಗರತ್ನಮ್ಮ ನಿಧನ



ಕಡ್ಲೇಬಾಳು ಗ್ರಾಮದ ದಾವಣಗೆರೆ ಬಾಲಾಜಿ ನಗರ ವಾಸಿ ಲಿಂಗದಹಳ್ಳಿ ಪುಟ್ಟಮ್ಮ ಚನ್ನಬಸಪ್ಪನವರ ಪುತ್ರಿ **ಶ್ರೀಮತಿ ನಾಗರತ್ನಮ್ಮ ಶೇಖರಪ್ಪ** (68) ಇವರು ದಿನಾಂಕ 24.05.2021 ರ ಸೋಮವಾರ ಬೆಳಿಗ್ಗೆ 10 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಪತಿ, ಮೂವರು ಪುತ್ರಿಯರು, ಓರ್ವ ಪುತ್ರ, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 24.05.2021ರ ಸೋಮವಾರ ಮಧ್ಯಾಹ್ನ 2 ಗಂಟೆಗೆ ಕಡ್ಲೇಬಾಳು ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿಸಲಾಯಿತು.

**ದುಃಖತಪ್ತ ಕುಟುಂಬ ವರ್ಗ :**
**ಮೃತರ ಪತಿ, ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಲಿಂಗದಹಳ್ಳಿ ಮತ್ತು ಕರೂರು ವಂಶಸ್ಥರು. ದಾವಣಗೆರೆ ತಾಲ್ಲೂಕು.**

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 24.05.2021ರಂದು ನಿಧನರಾದ ತ್ಯಾವಣಗಿ ನವೀನ್ ಟ್ರೇಡರ್ಸ್ ಮಾಲೀಕರಾದ

**ಶ್ರೀ ನವೀನ್**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

✧ ಬಾಗ್ರೇಚಾ ಟ್ರೇಡಿಂಗ್ ಕಂ, ದಾವಣಗೆರೆ.
✧ ಬಾಗ್ರೇಚಾ ಆಗ್ರೋ ಫುಡ್ಸ್, ದಾವಣಗೆರೆ.

## ಭಾವಪೂರ್ಣ ಶ್ರದ್ಧಾಂಜಲಿ



**ಶ್ರೀಮತಿ ದ್ಯಾಮಮ್ಮ**

ಮರಣ: 22.05.2021

ಅಂದು ತಾಯಿಯ ಮಗನಾಗಿ, ಇಂದು ವೃದ್ಧಾಪ್ಯದಲ್ಲಿ ತಾಯಿಗೆ ತಂದೆಯಾಗಿ, ಆರೈಕೆಯನ್ನು ಮಾಡಿ, ಮಗುವಿನಂತೆ ನೋಡಿಕೊಂಡ ನಮ್ಮ ಬೀಗರಾದ **ಶ್ರೀ ಆನಂದಪ್ಪ ಎಸ್.ಎಲ್** ಅವರಿಗೆ ಮತ್ತು ಅವರ ಕುಟುಂಬ ವರ್ಗಕ್ಕೆ ತಾಯಿಯ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

**ಇವರ ಆತ್ಮಕ್ಕೆ ಚಿರಶಾಂತಿ ಕೋರುವವರು**

✧ ಗೌಡರ ಜಯದೇವಪ್ಪ ಸಿಲ್ಕ್ಸ್ ಅಂಡ್ ಸ್ಯಾರೀಸ್, ✧ ಗೌಡರ ಜಯದೇವಪ್ಪ ಸಿಲ್ಕ್ ಪ್ಯಾಲೇಸ್, ಚೌಕಿಪೇಟೆ, ದಾವಣಗೆರೆ. ✧ ಗೌಡರ ಮಹಾಲಿಂಗಪ್ಪ ಮತ್ತು ಮಕ್ಕಳು, ಚೌಕಿಪೇಟೆ, ದಾವಣಗೆರೆ. ✧ ಗೌಡರ ಗುರುಪ್ರಕಾಶ್ ಮಗಳು ಸಿಂಧು, ದರ್ಶನ್ ✧ ಗಂಗಾಧರ್ ಗೌಡರ, ಹರ್ಷ ಗೌಡರ ✧ ಉಷಾದೇವಿ ಎಂ. ಗೌಡರ, ✧ ಗಿರಿಜಾ ಪ್ರಕಾಶ್ ಗೌಡರ ✧ ಭವ್ಯ ಗೌಡರ ಹಾಗೂ ಗೀತಾ ಗೌಡರ




JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte